“ಕನ್ನಡ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪ”

(೧೯೭೪ರ ನಂತರದ ಪ್ರಮುಖ ಕಾದಂಬರಿಗಳನ್ನು ಅನುಲಕ್ಷಿಸಿ)

ಪಿಹೆಚ್.ಡಿ. ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ವಿದ್ಯಾಸರಸ್ವತಿ

ಮಾರ್ಗದರ್ಶಕರು

ಪ್ರೊ.. ಕೆ. ಅಭಯ್ ಕುಮಾರ್

ಪ್ರಾಧ್ಯಾಪಕರು

ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – ೫೭೪೧೯೯

೨೦೨೧

ವಿಷಯಾನುಕ್ರಮಣಿಕೆ

ಅಧ್ಯಾಯ ೧: ಪ್ರಸ್ತಾವನೆ

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೨ ಅಧ್ಯಯನದ ಸೈದ್ಧಾಂತಿಕ ವಿಧಾನ

೧.೩ ಈ ವಿಷಯದಲ್ಲಿ ಈ ವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಅಧ್ಯಾಯ ೨: ಸಂಸ್ಕೃತಿ– ಪರಿಕಲ್ಪನೆ

೨.೧ 'ಸಂಸ್ಕೃತಿ'– ಪರಿಕಲ್ಪನೆ

೨.೨ ಸಂಸ್ಕೃತಿ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

೨.೩ ಬದಲಾದ ಸನ್ನಿವೇಶದಲ್ಲಿ ಸಂಸ್ಕೃತಿ ಸಂರಚನಾ ಸ್ವರೂಪ.

ಅಧ್ಯಾಯ ೩: ದಲಿತ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನಾ ಸ್ವರೂಪ

೩.೧ ಭಾಷೆ

೩.೨ ಜಾತಿ ವ್ಯವಸ್ಥೆ

೩.೩ ನಂಬಿಕೆಗಳು (ಆಚರಣೆ)

೩.೪ ಆಹಾರ ಪದ್ಧತಿ

೩.೫ ಶಿಕ್ಷಣ (ಅಕ್ಷರ ಸಂಸ್ಕೃತಿ)

೩.೬ ಲಿಂಗದ ಪ್ರಶ್ನೆ

ಅಧ್ಯಾಯ ೪: ಬಂಡಾಯ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನಾ ಸ್ವರೂಪ

೪.೧ ಶ್ರಮ

೪.೨ ಜಾತಿ ವರ್ಗಗಳ ಕುರಿತ ಪ್ರಶ್ನೆ

೪.೩ ದೇಸೀ ಜೀವನ ಕ್ರಮ

೪.೪ ಆರ್ಥಿಕತೆ

ಅಧ್ಯಾಯ ೫: ಮಹಿಳಾ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನಾ ಸ್ವರೂಪ

೫.೧ ಸಾಮಾಜಿಕ ಬದುಕು ಸಂಬಂಧ

೫.೨ ದಾಂಪತ್ಯ

೫.೩ ದೇಸೀ ಜೀವನ ಕ್ರಮ

೫.೪ ಅಂತರ್ ಜಾತಿಯ ವಿವಾಹ

೫.೫ ಪುರುಷ ಸ್ವಾಮ್ಯದ ಸ್ವರೂಪ

ಅಧ್ಯಾಯ ೬: ಮುಸ್ಲಿಂ ಸಂವೇದನೆಯ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನಾ ಸ್ವರೂಪ

೬.೧ ಧರ್ಮ

೬.೨ ದಾಂಪತ್ಯ

೬.೩ ಸಾಮಾಜಿಕ ಬದುಕು–ಸಂಬಂಧ

೬.೪ ಶಿಕ್ಷಣ

೬.೫ ವೃತ್ತಿ

ಅಧ್ಯಾಯ ೭: ಉಪಸಂಹಾರ

ಅನುಬಂಧಗಳು

ಗ್ರಂಥ ಋಣ

ಅಧ್ಯಾಯ– ೧.

ಪ್ರಸ್ತಾವನೆ

ಒಂದು ದೃಷ್ಟಿಯಿಂದ ನೋಡಿದರೆ 'ಕಾದಂಬರಿ' ಎನ್ನುವ ಸಾಹಿತ್ಯ ರೂಪದ ಚರಿತ್ರೆ ಸುದೀರ್ಘವಾದುದು. ಆದರೆ ಇಂದು ಸಾಮಾನ್ಯ ಪದದಿಂದ ನಿರ್ದೇಶಿಸುವ ಸಾಹಿತ್ಯ ರೂಪದ ಚರಿತ್ರೆ ಕಳೆದ ಇನ್ನೂರು ವರ್ಷಗಳದ್ದು. ಮಹಾಕಾವ್ಯ, ನಾಟಕ ಇಂತಹ ರೂಪಗಳಿಗೆ ಪಾಶ್ಚಾತ್ಯ ಸಾಹಿತ್ಯದಲ್ಲಿರುವ ದೀರ್ಘ ಚರಿತ್ರೆ ಇದಕ್ಕಿಲ್ಲ. ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಪ್ರಭಾವಶಾಲಿಯೂ, ಜನಪ್ರಿಯವೂ ಆಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಹೊಸಗನ್ನಡದಲ್ಲಿ ಸಣ್ಣಕತೆ, ಪ್ರಬಂಧ, ಭಾವಗೀತೆ, ಜೀವನ ಚರಿತ್ರೆ ಮೊದಲಾದ ಹೊಸ ಪ್ರಕಾರಗಳು ಹುಟ್ಟಿದಂತೆ 'ನೋವೆಲ್' ಎಂಬ ಪ್ರಕಾರ 'ಕಾದಂಬರಿ' ಎಂಬ ಹೆಸರಿನಿಂದ ಪ್ರಚುರವಾಯಿತು.

ಇಂಗ್ಲೀಷ್‌ನ 'ನಾವೆಲ್' ಪದವು ಲ್ಯಾಟಿನ್ 'ನೋವಸ್' ಎಂದರೆ 'ಹೊಸತು' ಎನ್ನುವ ಪದದಿಂದ ಬಂದದ್ದು ಎಂಬುದು ವಿದ್ವಾಂಸರ ಅಭಿಪ್ರಾಯ. 'ಕಾದಂಬರಿ' ಎಂಬ ಹೆಸರು ಹೇಗೆ ಬಂದೀತೆಂಬ ವಿಷಯ ಬಹಳ ಕುತೂಹಲವನ್ನು ಹುಟ್ಟಿಸುವಂತದ್ದು. ಕನ್ನಡದಲ್ಲಿ 'ಕಾದಂಬರಿ' ಎಂಬ ಹೆಸರು ಪ್ರಚುರ ವಾದುದು ಬಹುಶಃ ಬಾಣನ ಕಾದಂಬರಿಯಿಂದ. ಸಂಸ್ಕೃತದಲ್ಲಿ ಬಾಣಭಟ್ಟನು ರಚಿಸಿದ ಗದ್ಯ ಕಾವ್ಯ 'ಕಾದಂಬರಿ' ಹೆಸರಿನಿಂದ ಪ್ರಸಿದ್ಧವಾಗಿದೆ. ಬಾಣನ ಕಾದಂಬರಿ ಗದ್ಯದಲ್ಲಿ ರೂಪುಗೊಂಡಿರುವ ಸಂಕೀರ್ಣ ಕತೆ. ಅದರಲ್ಲಿ ಕಾದಂಬರಿಯ ಮಹಾಶ್ವೇತೆ, ಚಂದ್ರಾಪೀಡ, ಪುಂಡರೀಕ, ಕಪಿಂಜಲ, ಶೂದ್ರಕ ಮೊದಲಾದ ವ್ಯಕ್ತಿಗಳ ಜೀವನ ವೃತ್ತಾಂತ ನಿರೂಪಿತವಾಗಿದೆ. ಕೆಲವೇಳೆ ಕತೆ ಭೂಲೋಕದಿಂದ ಗಂಧರ್ವಲೋಕಕ್ಕೂ ಹಿಂದಿನ ಜೀವನದಿಂದ ಮುಂದೆ ಮೂರು ಜನ್ಮಗಳಿಗೂ ಹರಿದಾಡುತ್ತವೆ. ಇಂಥದ್ದೇ ಕಥೆಗಳನ್ನು 'ಕಾದಂಬರಿ' ಎಂಬ ಸಾಮಾನ್ಯ ನಾಮಪದದಿಂದ ಕರೆದಿರುವುದು ಉಚಿತವಾಗಿ ಇದೆ. ತೆಲುಗು ಮೊದಲಾದ ಭಾಷೆಗಳಲ್ಲಿ ನಾವೆಲ್, ನಾವೆಲು ಎಂಬ ಪದಗಳೂ ಬಳಕೆಯಲ್ಲಿವೆ. ಬಂಗಾಳಿ ಭಾಷೆಯಲ್ಲಿ ಕಾದಂಬರಿಯನ್ನು 'ಉಪನ್ಯಾಸ' ಎನ್ನಲಾಗುತ್ತದೆ. ಉತ್ತರ ಕರ್ನಾಟಕದಲ್ಲಿ ತುರಮರಿಯವರಿಂದ 'ಕಾದಂಬರಿ' ಕಾವ್ಯದ ಹೊಸಗನ್ನಡ ಗದ್ಯ ರೂಪ ಎಂಬ ಹೆಸರಿನಿಂದ ಪ್ರಕಟವಾಗಿ (೧೮೭೫) ಜನರ ಮನಸ್ಸನ್ನು ಆಕರ್ಷಿಸಿತ್ತು. ಕಾದಂಬರಿ ಕಾವ್ಯದ ಸೊಗಸು ನಾಗವರ್ಮನ ಕೃತಿಯ ಮೂಲಕ ಕನ್ನಡಿಗರಿಗೆ ಹಿಂದಿನಿಂದಲೂ ಪರಿಚಯವಾಗಿತ್ತು. ಕಥೆ, ಶೈಲಿ, ನಿರೂಪಣೆ, ವರ್ಣನೆ, ಚಮತ್ಕೃತಿ, ರಸ ಮೊದಲಾದ ದೃಷ್ಟಿಗಳಿಂದ ಕಾದಂಬರೀ ಕಾವ್ಯ ಜನಮನವನ್ನು ಸೂರೆಗೊಂಡಿತು. ಆದುದರಿಂದ ಸಂಸ್ಕೃತದ ಕಾದಂಬರಿ ಕಾವ್ಯದಂತೆ ರಮ್ಯವಾದ ಎಲ್ಲಾ ಕೃತಿಗಳನ್ನು 'ಕಾದಂಬರಿ' ಎಂಬ ಹೆಸರಿನಿಂದಲೇ ಕರೆಯುವ ವಾಡಿಕೆ ಏರ್ಪಟ್ಟಿತು. ಹೀಗಾಗಿ ನಾವೆಲ್ ಜಾತಿಗೆ 'ಕಾದಂಬರಿ' ಎಂದು ಕನ್ನಡಿಗರು ಕೊಟ್ಟ ಹೆಸರು ಸಾರ್ಥಕವಾಗಿ ಸ್ಥಿರವಾಗಿ ಉಳಿಯಿತು.

ಇಪ್ಪತ್ತನೇ ಶತಮಾನದ ಮೂರನೇ ದಶಕದಿಂದ ಮುಂದಕ್ಕೆ ಆಧುನಿಕ ಪ್ರವೃತ್ತಿಯ ಕಾದಂಬರಿಗಳ ನಿರ್ಮಾಣವನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ವಸ್ತು, ನಿರೂಪಣೆ, ಶೈಲಿ, ತಂತ್ರಗಳಲ್ಲಿ ಆಧುನಿಕತೆ ಈ

ಕಾದಂಬರಿಗಳ ನಿರ್ಮಾಣದ ಮುಖ್ಯ ವಸ್ತುಗಳಾಗಿ ಗೋಚರಿಸುತ್ತವೆ. ಆದುದರಿಂದ ಈ ಕಾಲಕ್ಕೆ ನಿರ್ಮಾಣ ಶೀಲಯುಗವೆಂದು ಹೆಸರಿಡಲಾಗಿದೆ. ಈ ಕಾಲಘಟ್ಟದಲ್ಲಿ ಕುವೆಂಪು, ಶಿವರಾಮ ಕಾರಂತ, ಆನಂದಕಂದ, ರಂ. ಶೀ ಮುಗಳಿ, ಅ.ನ.ಕೃ, ಕಡೆಂಗೋಡ್ಲು ಶಂಕರಭಟ್ಟ, ಶ್ರೀರಂಗ, ಮಿರ್ಜಿ ಅಣ್ಣಾರಾಯ, ದೇವುಡು ಮೊದಲಾದವರನ್ನು ಗುರುತಿಸಬಹುದು.

ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯು ವಸ್ತು, ಶೈಲಿ ಪರಿಣಾಮಗಳ ದೃಷ್ಟಿಯಿಂದ ನಿಜವಾಗಿಯೂ ಮೊದಲ ಬಾರಿಗೆ ವೈಶಿಷ್ಟ್ಯವನ್ನು ಸ್ಥಾಪಿಸಿದ ಕೃತಿ. ಶೂದ್ರನೊಬ್ಬನ ಬದುಕು ಹೇಗೆ ತುಳಿತಕ್ಕೆ ಒಳಗಾಗಿ ನಾಶವಾಯಿತೆಂಬುದನ್ನು ಈ ಕಾದಂಬರಿಯು ಜೀವಂತವಾಗಿ ಚಿತ್ರಿಸುತ್ತದೆ. ಸ್ವಾತಂತ್ರೋತ್ತರ ಕಾಲದಲ್ಲಿ ಕಾದಂಬರಿಗಳನ್ನು ರಚಿಸಿದ ಕೆಲವು ಕಾದಂಬರಿಕಾರರನ್ನು ಗುರುತಿಸುವುದಾದರೆ ಶಿವರಾಮ ಕಾರಂತ, ಕುವೆಂಪು, ರಾವ್ ಬಹದ್ದೂರ್, ದೇವುಡು, ಬಿ ಪುಟ್ಟಸ್ವಾಮಯ್ಯ, ಶ್ರೀನಿವಾಸ, ಎಂ.ಆರ್ ಶ್ರೀನಿವಾಸಮೂರ್ತಿ, ಅ.ನ.ಕೃ, ಶ್ರೀರಂಗ,ಗೋಕಾಕ್, ಕೆ.ವಿ ಅಯ್ಯರ್, ಮಿರ್ಜಿ ಅಣ್ಣಾರಾಯ, ತ.ರಾ.ಸು, ಬಸವರಾಜ ಕಟ್ಟೀಮನಿ, ವಿ. ಎಂ. ಇನಾಂದಾರ್, ಚದುರಂಗ, ಆನಂದಕಂದ, ಎಸ್. ಅನಂತನಾರಾಯಣ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ವ್ಯಾಸರಾಯ ಬಲ್ಲಾಳ, ಬೀಚಿ, ಕೃಷ್ಣಮೂರ್ತಿ ಪುರಾಣಿಕ, ರಾಮಚಂದ್ರ, ಭಾರತೀಸುತ, ಎಸ್.ಎಲ್ ಭೈರಪ್ಪ, ವಿಶುಕುಮಾರ್, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಯು.ಆರ್ ಅನಂತಮೂರ್ತಿ, ಪಿ. ಲಂಕೇಶ್, ಎ ಕೆ ರಾಮಾನುಜನ್, ಶಂಕರ ಮೊಕಾಶಿ ಪುಣೇಕರರ, ಪೂರ್ಣಚಂದ್ರ ತೇಜಸ್ವಿ, ಶ್ರೀಕೃಷ್ಣ ಆಲನಹಳ್ಳಿ ಮೊದಲಾದವರನ್ನು ಗುರುತಿಸಬಹುದು.

ಸ್ತ್ರೀಯರೂ ಮುಂದೆ ಬಂದು ಕಾದಂಬರಿಗಳನ್ನು ರಚಿಸಿರುವುದು ಸ್ವಾತಂತ್ರೋತ್ತರ ಕಾಲದ ಒಂದು ವೈಶಿಷ್ಟ್ಯ. ತ್ರಿವೇಣಿ, ಅನುಪಮಾ ನಿರಂಜನ, ಎಂ.ಕೆ ಇಂದಿರಾ, ವಾಣಿ, ಜಯಲಕ್ಷ್ಮಿ, ಆರ್ಯಾಂಬ ಪಟ್ಟಾಭಿ, ಗೀತಾ ಕುಲಕರ್ಣಿ, ಕೆ. ಸರೋಜರಾವ್, ಎ.ಪಿ. ಮಾಲತಿ, ವೀಣಾ, ಬಿ.ಟಿ ಲಲಿತಾನಾಯಕ್, ಲತಾರಾಜಶೇಖರ್, ಸುಧಾಮೂರ್ತಿ ಮೊದಲಾದ ಅನೇಕ ಕಾದಂಬರಿಕಾರ್ತಿಯರು ಕನ್ನಡದಲ್ಲಿ ಕಾದಂಬರಿ ರಚನೆಯಲ್ಲಿ ತೊಡಗಿರುವುದು ಗಮನಾರ್ಹ.

ಎಪ್ಪತ್ತರ ದಶಕದ ಉತ್ತರಾರ್ಧದ ಹೊತ್ತಿಗೆ ಕನ್ನಡ ಕಾದಂಬರಿ ಪರಂಪರೆಯಲ್ಲಿ ಮಹತ್ವದ ಬದಲಾವಣೆ ಉಂಟಾಯಿತು. ಈಗಾಗಲೇ ರಚನೆ ಮಾಡಿರುವ ಕಾದಂಬರಿಕಾರರು ತಮ್ಮದೇ ಆಗಿರುವ ಸಂಪ್ರದಾಯವನ್ನು ನಿರ್ಮಿಸಿಕೊಂಡಿದ್ದರೂ ವಸ್ತು, ಶೈಲಿ, ಧೋರಣೆ, ಸವಿಂಧಾನ ಮೊದಲಾದ ವಿಷಯಗಳಲ್ಲಿ ಎದ್ದುಕಾಣುವ ತಮ್ಮತನದ ಮುದ್ರೆಯನ್ನು ತಮ್ಮ ಕಾದಂಬರಿಗಳಲ್ಲಿ ಇವರೆಲ್ಲಾ ಒತ್ತಿದ್ದರು. ತಮ್ಮ ಕೃತಿಗಳ ಬಗೆಗೆ ಪೂರ್ವ ನಿರೀಕ್ಷೆಯುಳ್ಳ ಓದುಗ ವರ್ಗವನ್ನೇ ಕಾದಂಬರಿಕಾರ ಹುಟ್ಟು ಹಾಕಿದ್ದರು. ಗ್ರಾಮಾಯಣದ ದರ್ಶನ ನೀಡಿದ ರಾವ್ ಬಹದ್ದೂರರು ಚಲೇಜಾವ್ ಚಳುವಳಿಯ ಸಂದರ್ಭದ ವಿವಿಧ ಬಗೆಯ ಜೀವನ ಶಕ್ತಿಯುಳ್ಳ ವ್ಯಕ್ತಿಗಳ ಅನುಭವವನ್ನು ಸೂಕ್ಷ್ಮ ಕಲೆಗಾರಿಕೆಯಲ್ಲಿ ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಸೃಷ್ಟಿ ಕ್ರಿಯೆಯಲ್ಲಿ ಅನುಭವದ ತಾತ್ವಿಕತೆಗಿಂತ, ಅಭಿವ್ಯಕ್ತಿಯ ತಾಂತ್ರಿಕತೆಗಿಂತ 'ಅನುಭವ'ವೇ ಮುಖ್ಯವಾದ ಸಂದರ್ಭ ದಲಿತ ಬಂಡಾಯ ಚಳುವಳಿಯದು. 'ಕಾದಂಬರಿ' ರಚನೆಯ ಹಿಂದೆ ಕೆಲಸ ಮಾಡಿದ ಕಾಳಜಿಯನ್ನೇ

ಪ್ರಧಾನ ನೆಲೆಗೆ ತರುವ ಹವಣಿಕೆ ಈ ಸಂದರ್ಭದ ಕಾದಂಬರಿಗಳದು. ವಸ್ತು, ತಂತ್ರ, ಶೈಲಿ, ವರ್ಣನೆಗಳು ತಮಗೆ ತಾವೇ ಮುಖ್ಯವಾಗದೆ ಅನುಭವದ ಒಡಲಾಳದಿಂದ ಮೂಡಿಬರುವ ಬದ್ಧತೆಗೆ ಪ್ರಾಧಾನ್ಯ ಬಂತು. ದೇವನೂರು ಮಹಾದೇವರ ಕಿರು ಕಾದಂಬರಿ 'ಒಡಲಾಳ'ದ ಕೇಂದ್ರ ಪ್ರತಿಮೆ ಹಿಂಗಿಸಲು ಅಸಾಧ್ಯವಾಗುವ ಹಸಿವೆಯ ಬೆಂಕಿ. ಈ ಹಸಿವಿನ ಬೆಂಕಿ ನವೋದಯದ ಸುಧಾರಣಾವಾದೀ ಸುರಕ್ಷಿತ ನೆಲೆಯನ್ನು ದುಸ್ವಪ್ನದಂತೆ ಕಾಡಬಲ್ಲ ಕ್ರಾಂತಿಯ ಬೆಂಕಿ. ದುಸ್ವಪ್ನವಾದದ್ದು ಪ್ರಗತಿಶೀಲರಲ್ಲಿ ಅತೀ ಸರಳೀಕರಣಗೊಂಡು ರಂಜನೆಯ ವಿಷಯವಾಯಿತು. ಆದರೆ ದಲಿತ ಬಂಡಾಯದ ಸಂದರ್ಭ ಸ್ಪಷ್ಟವಾಗಿ ಸಾಮಾಜಿಕ ಸಂಚಲನಗಳನ್ನು ಸಂಘಟಿತ ರೂಪದಲ್ಲಿ ಸಾಧ್ಯವಾಗಿಸಿತು. ದಲಿತ ಸಂಘರ್ಷ ಸಮಿತಿ, ಬಂಡಾಯ ಸಂಘಟನೆಗಳು ಕನ್ನಡದ ಮಹತ್ವದ ಕಾದಂಬರಿಕಾರರ ಸಾಮಾಜಿಕ ಬದ್ಧತೆಯ ನೆಲೆಗಳಾದವು. ವರ್ಣವ್ಯವಸ್ಥೆಯ ಸಂಕೀರ್ಣ ಗ್ರಾಮ ಸಮಾಜದ ಶೋಷಣೆಯ ಸ್ವರೂಪವನ್ನು ವಾಸ್ತವತಾವಾದಿ ನೆಲೆಯಲ್ಲಿ ಕಂಡರಿಸುವ ಯತ್ನ ಹಲವಾರು ಕಾದಂಬರಿಗಳದು. ಜಾತಿ, ಅಸ್ಪೃಶ್ಯತೆ, ವರ್ಗಸಂಬಂಧಗಳು, ಲಿಂಗ ವ್ಯವಸ್ಥೆಗಳ ನಡುವಿನ ಸಂಬಂಧಗಳ ಜಟಿಲತೆಯನ್ನು ಬರಗೂರು ರಾಮಚಂದ್ರಪ್ಪನವರ 'ಒಂದು ಊರಿನ ಕತೆ' ಸ್ಪಷ್ಟಪಡಿಸುತ್ತದೆ. 'ಸೂರ್ಯ', 'ಉಕ್ಕಿನ ಕೋಟೆ', 'ಹುತ್ತ' ಕಾದಂಬರಿಗಳಲ್ಲಿ ವ್ಯವಸ್ಥೆಯ ಕ್ರೌರ್ಯದ ಬಹುಮುಖಗಳನ್ನು ಹಾಗೂ ಶೋಷಿತರ ಪ್ರತಿರೋಧವನ್ನು ಬರಗೂರರು ಮುಖಾಮುಖಿಯಾಗಿಸುತ್ತಾರೆ. ಸಾಮಾಜಿಕ ಚಳುವಳಿಯ ತಾತ್ವಿಕತೆಯ ವ್ಯಾಖ್ಯಾನರೂಪವಾಗಿ ಈ ಕಾದಂಬರಿಗಳು ನಿಲ್ಲುತ್ತವೆ.

ಎಪ್ಪತ್ತರ ದಶಕದ ಉತ್ತರಾರ್ಧ ಕನ್ನಡದ ಹಿರಿಯ ಸಾಹಿತಿಗಳಿಗೆ ಭ್ರಮನಿರಸನವನ್ನು ಉಂಟು ಮಾಡಿದ ಕಾಲವೆನ್ನಬಹುದು. ಗ್ರಾಮ ನಗರಗಳಲ್ಲಿನ ಏಕರೂಪ ಭ್ರಷ್ಟ ರೂಪದೊಂದಿಗೆ, ಇನ್ನಿಲ್ಲದ ಸಾಂಸ್ಕೃತಿಕ ಬಿಕ್ಕಟ್ಟುಗಳು ಮೂಡಿ ಬಂದ ಕಾಲವಿದು. 'ನಾವು ಕಟ್ಟಿದ ಸ್ವರ್ಗ' ಎಂಬ ವ್ಯಂಗ್ಯದ ನೆಲೆಯ ಕಾದಂಬರಿಯನ್ನು ಕಾರಂತರು ಬರೆದರೆ, ಎಸ್.ಎಲ್ ಭೈರಪ್ಪನವರು ಪರ್ವ ದ ಮೂಲಕ ಬಿಕ್ಕಟ್ಟುಗಳಿಗೆ ಪರ್ಯಾಯವನ್ನು ಹುಡುಕುವ ಹವಣಿಕೆಯಲ್ಲಿ ತೊಡಗಿದರು. ನಗರ ಹಾಗೂ ಗ್ರಾಮವೆಂಬ ಭಿನ್ನತೆಯನ್ನು ಕಾಯ್ದುಕೊಳ್ಳಲಾರದಷ್ಟು ಸಂಕೀರ್ಣಗೊಂಡ ಸಾಮಾಜಿಕ ಸಂದರ್ಭವನ್ನು ಎಂಭತ್ತರ ದಶಕದ ಕಾದಂಬರಿಗಳು ವಿಶ್ಲೇಷಣೆಗೆ ಒಳಪಡಿಸುತ್ತವೆ. ಚದುರಂಗರ 'ವೈಶಾಖ', ತೇಜಸ್ವಿಯವರ 'ಚಿದಂಬರ ರಹಸ್ಯ', ದೇವನೂರು ಮಹಾದೇವ ಅವರ 'ಕುಸುಮಬಾಲೆ', ಮನಜ ಅವರ ಮಾಗಿ, ಕುಂ.ವೀರಭದ್ರಪ್ಪನವರ 'ಕಪ್ಪು', 'ಪಕ್ಷಿ', ಅರವಿಂದ ಮಾಲಗತ್ತಿಯವರ 'ಕಾರ್ಯ', ಶ್ರೀಕೃಷ್ಣ ಆಲನಹಳ್ಳಿ ಅವರ 'ಭುಜಂಗಯ್ಯನ ದಶಾವತಾರಗಳು' ಇವು ಸಾಮಾಜಿಕ ಸ್ಥಿತ್ಯಂತರಗೊಳ್ಳುತ್ತಿರುವ ಭಾರತದ ದರ್ಶನವನ್ನು ಮಾಡಿಕೊಡುತ್ತವೆ. ಈ ಕೃತಿಗಳು ದಲಿತ ಮತ್ತು ಮಹಿಳೆ ಹಾಗೂ ಅಂತಾರಾಷ್ಟ್ರೀಯ ರಾಜಕಾರಣದ ನೆಲೆಗಳಿಂದ ಸ್ಥಿತ್ಯಂತರದ ಸೂಕ್ಷ್ಮಗಳನ್ನು ಅರ್ಥೈಸಲೆತ್ನಿಸುತ್ತವೆ.

'ವೈಶಾಖ' ಮತ್ತು 'ಕುಸುಮಬಾಲೆ' ಕಾದಂಬರಿಗಳು ಸ್ತ್ರೀ ಶೋಷಣೆಯೊಂದಿಗೆ ಹಾಸುಹೊಕ್ಕಾಗಿರುವ ವರ್ಣ–ವರ್ಗ ಸಮಾಜದ ಬೇರುಗಳನ್ನು ಶೋಧಿಸಲೆತ್ನಿಸುತ್ತವೆ. ಎರಡೂ ಕಾದಂಬರಿಗಳಲ್ಲಿ ಲೈಂಗಿಕತೆ ಪ್ರಮುಖ ವಿಷಯವಾಗಿದೆ. ಜಾತಿ ಮತ್ತು ಹೆಣ್ಣಿನ ಪಾವಿತ್ರ್ಯ ಪರಿಕಲ್ಪನೆಗಳು ಒಗ್ಗೂಡಿ ಬ್ರಾಹ್ಮಣ ಜಾತಿಯ ರುಕ್ಮಿಣಿಯನ್ನೂ, ದಲಿತ ಲಕ್ಕನನ್ನೂ ಬಲಿ ತೆಗೆದುಕೊಳ್ಳುವ ಮಾರ್ಮಿಕ ಕಥನ 'ವೈಶಾಖ' ಕಾದಂಬರಿಯಲ್ಲಿದೆ. ಮಾನವ ಅಸ್ತಿತ್ವವೇ

ನಿರಾಕೃತಗೊಂಡ ದಲಿತ ಸಮುದಾಯದ ಬದುಕನ್ನು ಹೋರಾಟದ ಬೃಹತ್ ರೂಪಕವಾಗಿ ದೇವನೂರರ 'ಕುಸುಮಬಾಲೆ' ಹಿಡಿದಿಟ್ಟಿದೆ. ಕರುಳುಬಳ್ಳಿ ತೊಡಕುಗಳನ್ನು ಆವರಿಸಿರುವ ಶ್ರದ್ಧೆ-ನಂಬಿಕೆಗಳ ದಟ್ಟ ಲೋಕದೊಳಗೆ ಭೂತ- ವರ್ತಮಾನ-ಭವಿಷ್ಯವೆಂಬ ಕಾಲ ಪರಿಗಣನೆಯಿಲ್ಲ. ವರ್ಣ ವ್ಯವಸ್ಥೆಯ ಭದ್ರ ಬೇರುಗಳುಳ್ಳ ಗಿಡದ ಟೊಂಗೆಯಲ್ಲರಳುವ ಕುಸುಮವು ವರ್ಣಸಂಕರದ ಸಹಜ ಧರ್ಮಕ್ಕೆ ಅಧೀನ. ಈ ಸಹಜತೆಯನ್ನು ಹೊಸಕಿ ಹಾಕಬಲ್ಲ ವ್ಯವಸ್ಥೆಯ ಹಿಂಸಾಗುಣಕ್ಕೆ ಮಾಂತ್ರಿಕ ಶಕ್ತಿಯಿದೆ. ಸಾವಿನೆದುರು ಬದುಕಲೆಳಸುವ ಹೋರಾಟದಲ್ಲಿ ಮೈದುಂಬಿ ಕೊಳ್ಳದಿದ್ದರೆ ಗತ್ಯಂತರವಿಲ್ಲ. ಕ್ರಾಂತಿಯ ಸೂಚಕವಾದ ರಕ್ತದೊಂದಿಗಿನ ನೆನಪುಗಳೊಂದಿಗೆ ಜೀವಂತ ಸಂಬಂಧವನ್ನು ಸ್ಥಾಪಿಸುತ್ತ ಕಾಯುತ್ತ ಕೂತ ದಲಿತ ಪ್ರಜ್ಞೆಯ ಜಾಗರಣವನ್ನು 'ಕುಸುಮಬಾಲೆ' ಪ್ರತಿಮಿಸುತ್ತದೆ. ಸಾಂಸ್ಕೃತಿಕ ನೆನಪುಗಳ ಮೂಲದ್ರವ್ಯವನ್ನು ಸಮಕಾಲೀನ ದಲಿತ-ಬಂಡಾಯ ಹೋರಾಟದ ತಾತ್ವಿಕ ಅಂಶವಾಗಿ ಹೇಗೆ ವಿನ್ಯಾಸಗೊಳಿಸಿಕೊಳ್ಳಬಹುದೆಂಬ ಮಹತ್ವದ ಸೂಚನೆಗಳನ್ನು ಈ ಕಾದಂಬರಿಯೊಳಗೆ ನಾವು ಗುರುತಿಸಬಹುದು.

ಸಾಮಾಜಿಕ ಶೋಷಣೆಯನ್ನು ಸ್ತ್ರೀ ಕೇಂದ್ರದಿಂದ ನೋಡುತ್ತಾ ವಿಶಿಷ್ಟವಾಗಿ ವ್ಯಾಖ್ಯಾನಿಸುವ ಕೃತಿ ಮ.ನ.ಜ ಅವರ 'ಮಾಗಿ'. ಪುರುಷ ಪ್ರಧಾನ ಕೌಟುಂಬಿಕ ಸಂರಚನೆಯೊಳಗೆ ಸೇರಿಯೂ ಸೇರದ ಮಹಿಳೆಯ ಅತಂತ್ರ ಸ್ಥಿತಿಯನ್ನು ಹಿಡಿದಿಡುತ್ತದೆ. ದಲಿತ ಮಹಿಳೆಯೊಬ್ಬಳ ಶ್ರಮ ಜೀವನದ ಮೌಲ್ಯವನ್ನು ಹೊಸ ಆರ್ಥಿಕ ಪರಿಭಾಷೆಯಲ್ಲಿ ಈ ಕೃತಿ ಕಟ್ಟುತ್ತದೆ. ಮುಸ್ಲಿಂ ಸಮುದಾಯದ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ಮೌಲ್ಯಗಳ ವಸ್ತುನಿಷ್ಠ ವಿಶ್ಲೇಷಣೆಯನ್ನು ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿಯ ತೀರದಲ್ಲಿ', 'ಸಹನಾ', 'ವಜ್ರಗಳು' ಕಾದಂಬರಿಗಳು ಮಾಡಿವೆ. ಪಿತೃಪ್ರಧಾನ ಮೌಲ್ಯ ವ್ಯವಸ್ಥೆಯಡಿಯಲ್ಲಿ ನಲುಗಿ ಹೋದ ಮುಸ್ಲಿಂ ಮಹಿಳೆಯರ ಬವಣೆಯ ಕಥನ ಬಂಡಾಯದ ಆಶಯಕ್ಕೆ ಪೂರಕವಾಗಿದೆ. ಒಟ್ಟಿನಲ್ಲಿ ಎಂಬತ್ತರ ದಶಕದ ಕಾದಂಬರಿಗಳು ವ್ಯಕ್ತಿ-ಸಮೂಹ ಸಾಧ್ಯತೆಗಳ ವಿಸ್ತಾರದ ಅರಿವನ್ನು ಹೆಚ್ಚಿಸಿದವು ಎನ್ನುವುದರಲ್ಲಿ ಸಂಶಯವಿಲ್ಲ.

ದಲಿತರ ವಿಚಾರ-ಭಾವ ದ್ರವ್ಯದ ಹರಣವನ್ನು ಕುರಿತ 'ಕಾರ್ಯ'ದ ಕಥನದ ಮುಂದುವರಿಕೆಯಾಗಿ ೧೯೯೨ರಲ್ಲಿ ಬಂದ ಮುಳ್ಳೂರು ನಾಗರಾಜ್ ಅವರ 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿಯಲ್ಲಿ ಕಂಡುಬರುತ್ತದೆ. ಶೋಷಣೆಯ ಮೂಲವೇ ಮಿದುಳ ಹರಣವೆಂಬುದನ್ನು ಜಾನಪದೀಯ ಶೈಲಿಯಲ್ಲಿ ಕೃತಿ ನಿರೂಪಿಸುತ್ತದೆ. ಈ ಕೃತಿಯಲ್ಲಿ ಶುದ್ಧತೆ- ಅಶುದ್ಧತೆಯ ಪರಿಕಲ್ಪನೆಯನ್ನಾಧರಿಸಿದ ವರ್ಣಾಶ್ರಮ ವ್ಯವಸ್ಥೆಯ ಐತಿಹಾಸಿಕ ಪ್ರಕ್ರಿಯೆಯನ್ನು ಆಧುನಿಕ ಪೌರಾಣಿಕ ನೆಲೆಯಲ್ಲಿ ಹಿಡಿದಿಡಲಾಗಿದೆ. ವರ್ಣಸಂಕರದಿಂದ ಮೊಳೆಯುವ ಸ್ತ್ರೀ-ಪುರುಷರ ಸಂಬಂಧಗಳು ಪ್ರೇಮ- ದ್ವೇಷ-ಅಸೂಯೆ- ಪ್ರತೀಕಾರ-ಪರಿವರ್ತನೆಗಳ ಸುಳಿಯಲ್ಲಿ ಸಿಲುಕಿಕೊಳ್ಳುವುದನ್ನು ಕಾದಂಬರಿ ಚಿತ್ರಿಸುತ್ತದೆ. ಕತ್ತಲರಾಜ್ಯದ ಸಾಂಕೇತಿಕತೆಯನ್ನು ಪ್ರಮುಖ ತಾತ್ವಿಕ ಪ್ರಶ್ನೆಯಾಗಿ ಬೆಳೆಸುವ ಪಾತ್ರವಾಗಿ ಬಸರಾಜು ಕಾಣಿಸುತ್ತಾನೆ. ಆದರೆ ಸಂಘಟನೆಯು ತಾತ್ವಿಕತೆಯ ಅರಿವಿಲ್ಲದ ವ್ಯಕ್ತಿಗಳಲ್ಲಿರುವುದು ನೋವಿನ ಸಂಗತಿ. ಸಮಕಾಲೀನ ದಲಿತ ಬಂಡಾಯ ಸಂಘಟನೆಗಳ ಕುರಿತಾದ ಲೇಖಕರ ನಿಲುವು ಇದಾಗಿರಬಹುದೆನಿಸುತ್ತದೆ.

ಕಥನದ ಸಾಂಪ್ರದಾಯಿಕ ಕ್ರಮಗಳಿಂದ ಬಿಡಿಸಿಕೊಂಡ ಸವಿತಾ ನಾಗಭೂಷಣ 'ಸ್ತ್ರೀಲೋಕ' ಮಹಿಳಾ ಸಂಸ್ಕೃತಿಯ ವಿನೂತನ ಅಭಿವ್ಯಕ್ತಿಯಾಗಿದೆ. ಮಹಿಳೆಯರಿಬ್ಬರ ಸಂಭಾಷಣೆಯ ಘಟಕಗಳ ಮೂಲಕ ನಿತ್ಯ ದೈನಿಕವನ್ನು, ವೈವಿಧ್ಯಮಯ ಗ್ರಹಿಕೆಗಳ ನೆಲೆಯಲ್ಲಿ ಈ ಕಾದಂಬರಿ ಸೃಷ್ಟಿಸುತ್ತದೆ. ಎಲ್ಲವನ್ನೂ ತಾತ್ವೀಕರಿಸುವ ಬೌದ್ಧಿಕತೆಯ ಅಹಂಕಾರಕ್ಕೆ ಉತ್ತರವೆಂಬಂತೆ ಸ್ತ್ರೀಲೋಕವನ್ನು ಈ ಕೃತಿ ಪುನರ್ ವ್ಯಾಖ್ಯಾನಿಸುತ್ತದೆ. ಎಂಬತ್ತು ಹಾಗೂ ತೊಂಭತ್ತರ ದಶಕದ ದಲಿತ ಬಂಡಾಯ ಕಥಾಸಾಹಿತ್ಯ ಈಗಾಗಲೇ ಸಿದ್ಧಗೊಂಡಿದ್ದ ತಾತ್ವಿಕತೆಯ ಒಳ ಶೋಧವನ್ನು ಸೂಕ್ಷ್ಮ ನೆಲೆಗೆ ವಿಸ್ತರಿಸಲು ಪ್ರಯತ್ನಿಸಿತು. ಹಾಗಾಗಿ ಶೋಷಣೆ ಕಥನವನ್ನು ಸಮಕಾಲೀನ ಹಾಗೂ ಪುರಾತನ ನೆಲೆಗಳೆರಡರಲ್ಲೂ ಏಕಕಾಲಕ್ಕೆ ನಿರೂಪಿಸುವಂಥ ವಿನೂತನ ತಂತ್ರವನ್ನು ಬಳಸಿಕೊಳ್ಳಲಾಯಿತು. ಆ ಮೂಲಕ ಆಚರಣಾತ್ಮಕ ಭಾವ ದ್ರವ್ಯಕ್ಕೆ ವೈಚಾರಿಕ ಚಾರಿತ್ರಿಕ ವೇದಿಕೆಯನ್ನು ಕಲ್ಪಿಸಲಾಯಿತು. ಹಾಗೆಯೇ ಸಮಕಾಲೀನ ಸಮಾಜದ ವಾಸ್ತವದಲ್ಲಿನ ಹೋರಾಟಕ್ಕೆ ಭದ್ರವಾದ ಸಾಂಸ್ಕೃತಿಕ ಭಾವಕೋಶ ನಿರ್ಮಾಣಗೊಂಡಿತು. ಸ್ವಾತಂತ್ರ್ಯೋತ್ತರ ಭಾರತೀಯ ಸಾಮಾಜಿಕ ಸಂದರ್ಭದ ಸಂಚಲನಗಳನ್ನು ಶೋಷಿತರ ನೆಲೆಯಿಂದ ಹಿಡಿದಿಡುವ ಕಾದಂಬರಿಗಳು ಸಾಕಷ್ಟು ಬಂದಿವೆ. ಭೂಮಿ ಮೇಲಿನ ಹಕ್ಕು, ವಿದ್ಯೆ ಹಾಗೂ ಉದ್ಯೋಗಾವಕಾಶಗಳ ಬೇಡಿಕೆ, ಸ್ವಾಭಿಮಾನ ಗಳಿಕೆ, ಸಾಂಸ್ಕೃತಿಕ ಗುರುತುಗಳ ಬಗೆಗಿನ ಹೆಮ್ಮೆ ಇತ್ಯಾದಿಗಳು ಕಾದಂಬರಿಗಳ ಪ್ರಮುಖ ಆಶಯಗಳಾಗಿವೆ.

ಕನ್ನಡ ಕಾದಂಬರಿಗಳು ಬೇರೆ ಬೇರೆ ಸಿದ್ಧಾಂತ ಮತ್ತು ವೈಚಾರಿಕತೆಗಳ ಕಾಲಘಟ್ಟಗಳಲ್ಲಿಯೂ ತನ್ನ ಸ್ವಂತಿಕೆ ಯನ್ನು, ತನ್ನತನವನ್ನು ಸಂರಕ್ಷಿಸಿಕೊಳ್ಳುವ ಕಾಳಜಿ ಗೋಚರಿಸುತ್ತದೆ. ಇಪ್ಪತ್ತನೇ ಶತಮಾನದ ಆರಂಭದಿಂದ ಇಲ್ಲಿಯವರೆಗೆ ಕನ್ನಡ ಕಾದಂಬರಿಕಾರರು ಸಾಮ್ರಾಜ್ಯಶಾಹಿ, ವಸಾಹತುಶಾಹಿ ಆಡಳಿತ ದಿಂದುಂಟಾದ ಆಧುನಿಕತೆ, ವೈಚಾರಿಕತೆಗಳ ಅನುಭವದಿಂದ ಕನ್ನಡ ನಾಡಿನ ಜನಜೀವನವನ್ನು, ಆ ಮೂಲಕ ಸಂಸ್ಕೃತಿಯ ಬಹುಮುಖತೆಯನ್ನು ಕಾದಂಬರಿಗಳಲ್ಲಿ ಹೇಗೆ ಕಂಡುಕೊಂಡಿದ್ದಾರೆ ಎಂಬುದನ್ನು ಮತ್ತು ಎಪ್ಪತ್ತರ ದಶಕದ ನಂತರದ ಕಾದಂಬರಿಗಳಲ್ಲಿ ಸಂಸ್ಕೃತಿ ಚಹರೆಗಳು ಹೇಗೆ ಬದಲಾವಣೆಗೊಂಡವು ಎಂಬ ನಿಲುವನ್ನು ಗ್ರಹಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಅಧ್ಯಯನದ ಉದ್ದೇಶ:

ಕನ್ನಡ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪ (೧೯೭೫ರ ನಂತರದ ಪ್ರಮುಖ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ವಿಷಯದ ಬಗ್ಗೆ ಅಧ್ಯಯನ ಕೈಗೊಳ್ಳುವುದಕ್ಕೆ ಕೆಲವು ಪ್ರಮುಖ ಕಾರಣಗಳಿವೆ. ಅಕ್ಷರಜ್ಞಾನ ಬಂದಾಗಿನಿಂದಲೂ ಕಾದಂಬರಿಗಳನ್ನು ಓದುವುದೆಂದರೆ ನನಗೆ ಎಲ್ಲಿಲ್ಲದ ಆಸಕ್ತಿ. ಸಾಹಿತ್ಯದ ಇತರ ಪ್ರಕಾರಗಳಿಗೆ ಹೋಲಿಸಿದರೆ ಕಾದಂಬರಿಗಳು ಹಲವು ಸಂಸ್ಕೃತಿಗಳ ವೈವಿಧ್ಯತೆಯನ್ನು, ಬದುಕಿನ ಸಮಗ್ರ ವಿವರಗಳನ್ನು

ಕಟ್ಟಿಕೊಡುವಂತೆ ಕಾಣಿಸಲು ಆರಂಭಿಸಿದವು. ಇತಿಹಾಸವನ್ನು ಪುನರ್‌ರಚಿಸುವಲ್ಲಿ, ಪ್ರಸ್ತುತ ವಿದ್ಯಮಾನವನ್ನು ಅರ್ಥೈಸುವಲ್ಲಿ ಕಾದಂಬರಿಗಳು ಮಹತ್ವದ ಪಾತ್ರ ವಹಿಸುತ್ತವೆ ಅನಿಸಿತು. ಆದ್ದರಿಂದಲೇ ಕಾದಂಬರಿಗಳನ್ನು ಆಕರವಾಗಿರಿಸಿಕೊಂಡು ಅಧ್ಯಯನಕ್ಕೆ ತೊಡಗಿದ್ದೇನೆ. ಕಾದಂಬರಿ ಎನ್ನುವ ಸಾಹಿತ್ಯ ಪ್ರಕಾರ ಬದುಕಿನ ಎಲ್ಲಾ ಮಗ್ಗುಲುಗಳನ್ನು ಹಿಡಿದಿಟ್ಟುಕೊಳ್ಳುವ ವ್ಯಾಪ್ತಿಯನ್ನು ಹೊಂದಿರುದರಿಂದ ಬದುಕಿನ ಸಮಗ್ರ ಅದ್ಯಯನಕ್ಕೆ ಅತ್ಯಂತ ಗಂಭೀರ ಪ್ರಕಾರವೆನ್ನುವುದರಲ್ಲಿ ಅನುಮಾನವಿಲ್ಲ.

೧೯೭೦ರ ದಶಕ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಬಹಳ ಮುಖ್ಯವಾದ ಕಾಲಘಟ್ಟವಾಗಿದೆ. ಅದುವರೆಗೆ ಸಾಮಾನ್ಯವಾಗಿದ್ದ ಕೃತಿಗಳ ವಸ್ತು, ಭಾಷಾ ಬಳಕೆ ಮತ್ತು ಕೃತಿಕಾರರ ಧೋರಣೆಗಳು ಎಪ್ಪತ್ತರ ದಶಕದ ನಂತರ ಭಿನ್ನವಾಗುತ್ತಾ ಸಾಗಿದವು. ಒಂದು ಕಡೆ ಈ ದಶಕದಲ್ಲಿ ಶಿಕ್ಷಣಕ್ಕೆ ತೆರೆದುಕೊಂಡ ದಲಿತರಲ್ಲಿ ಜಾಗೃತಿ ಮೂಡಿ ಸಂಘಟನೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿ ಕೊಂಡರೆ, ಇನ್ನೊಂದೆಡೆ ಮಾರ್ಕ್ಸ್, ಲೋಹಿಯಾ ಮತ್ತು ಅಂಬೇಡ್ಕರ್ ವಿಚಾರ ಧಾರೆಗಳ ಪ್ರಭಾವಕ್ಕೆ ಒಳಗಾದ ಹೊಸ ಬರಹಗಾರರ ತಂಡ ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಹಲವು ಬದುಕುಗಳ ಲೋಕವನ್ನು ಮೊದಲ ಬಾರಿಗೆ ಅನಾವರಣಗೊಳಿಸಿತು. ಅವುಗಳೆಂದರೆ ಮುಸ್ಲಿಂ ಸಮುದಾಯ ಲೋಕ, ದಲಿತ ಲೋಕ ಮತ್ತು ಮಹಿಳಾ ಲೋಕ. ದಲಿತರು, ಮುಸ್ಲಿಮರು ಮತ್ತು ಮಹಿಳೆಯರು ಈ ದಶಕಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡರು. ಹಾಗೂ ಮೊತ್ತ ಮೊದಲ ಬಾರಿಗೆ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿ ತಮ್ಮ ಅನುಭವ, ಆಲೋಚನೆ, ಕನಸು, ಸಂಸ್ಕೃತಿಗಳ ಕುರಿತು ಬರೆಯತೊಡಗಿದರು. ಪರ್ಯಾಯ ಸಂಸ್ಕೃತಿಗಳ ಕುರಿತಂತೆ ಆಲೋಚಿಸ ತೊಡಗಿದರು. ಇದರೊಂದಿಗೆ ಈ ವಿಷಯಗಳಿಗೆ ಸಂಬಂಧಿಸಿದಂತೆಯೇ ಈಗಾಗಲೇ ರಚಿತವಾಗಿರುವ ದಲಿತ ಬಂಡಾಯಗಾರರು ಬರೆದ ಕೃತಿಗಳು ನಮಗೆ ಲಭ್ಯವಾಗಿವೆ. ಈ ಹಿನ್ನಲೆಯಲ್ಲಿ ಕನ್ನಡ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪ (೧೯೭೫ರ ನಂತರದ ಪ್ರಮುಖ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ದಲಿತ ಮತ್ತು ಬಂಡಾಯ ಕಾಲಘಟ್ಟದ ಪ್ರಮುಖ ಕಾದಂಬರಿಗಳು ಅಧ್ಯಯನದ ಆಕರಗಳಾಗುತ್ತವೆ. ಇಡೀ ಕನ್ನಡ ಕಾದಂಬರಿ ಕ್ಷೇತ್ರದ ಹರವು ವಿಸ್ತಾರವನ್ನು ಓದಿನ ತೆಕ್ಕೆಗೆ ಒಗ್ಗಿಸಿಕೊಳ್ಳುವುದು ಸಂಶೋಧನೆಯ ಕಾಲಮಿತಿಯಿಂದ ಅಸಾಧ್ಯದ ಕೆಲಸ. ಆ ಕಾರಣಕ್ಕೆ ಕಾಲದ ಮಿತಿಯನ್ನು ಇರಿಸಿಕೊಂಡು ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗುತ್ತದೆ. ಕಾದಂಬರಿಗಳಲ್ಲಿ ಸಂಸ್ಕೃತಿಯ ಚಹರೆಗಳು ಅನಾವರಣಗೊಂಡಿರುವುದರ ಕುರಿತು ಈಗಾಗಲೇ ಬಿಡಿ ಬಿಡಿಯಾಗಿ ಅಧ್ಯಯನಗಳು ನಡೆದಿವೆ. ಆದರೆ ಅವೆಲ್ಲವನ್ನೂ ಸಮಗ್ರ ನೆಲೆಯಲ್ಲಿ ಹಿಡಿದಿಡುವ ಪ್ರಯತ್ನಗಳು ಇನ್ನೂ ನಡೆದಿಲ್ಲ. ಹಾಗಾಗಿ ಈ ಶೀರ್ಷಿಕೆಯ ಮೂಲಕ ಸಂಸ್ಕೃತಿ ಸಂರಚನೆಯನ್ನು ಆಯಾ ಪಂಥಗಳಲ್ಲಿ ಜಾತಿ, ಧರ್ಮ, ಲಿಂಗ, ಶಿಕ್ಷಣ, ಭಾಷೆ, ಸಾಮಾಜಿಕ ಬದುಕು ಸಂಬಂಧ, ಅಂತರ್ಜಾತಿ ವಿವಾಹ ಮೊದಲಾದ ಅಂಶಗಳ ಮೂಲಕ ನಿಖರವಾಗಿ ಗುರುತಿಸುವ ಅಧ್ಯಯನಕ್ಕೆ ಒಳಪಡಿಸುವ ಮತ್ತು ಸ್ಪಷ್ಟ ತೀರ್ಮಾನಗಳನ್ನು ನೀಡುವ ಉದ್ದೇಶವನ್ನು ಹೊಂದಿದೆ.

೧೯೭೦ರವರೆಗೆ ಇಂಗ್ಲೀಷ್ ವಿದ್ಯಾಭಾಸ ಪಡೆದ ಮೇಲ್ವರ್ಗ, ಮೇಲ್ಜಾತಿಯವರು ಸಾಂಪ್ರದಾಯಿಕ ನೆಲೆಯಲ್ಲೇ ಸಂಸ್ಕೃತಿಯನ್ನು ಗುರುತಿಸಲು ಪ್ರಯತ್ನಿಸಿದರು. ಹಾಗಾಗಿ ಆವರೆಗಿನ ಸಂಸ್ಕೃತಿಯ ಕುರಿತ ಕಲ್ಪನೆಗಳು ಮೇಲ್ವರ್ಗದ ಆಲೋಚನಾ ಕ್ರಮದಲ್ಲಿಯೇ ರೂಪಿತವಾಗಿವೆ. ಇಂತಹ ಆಲೋಚನೆಗೆ ಭಿನ್ನವಾಗಿ ೧೯೭೦ರ ಹೊತ್ತಿಗೆ ಆಧುನಿಕ ಶಿಕ್ಷಣ ಪಡೆದ ದಲಿತರು ಮತ್ತು ದಲಿತೇತರ ವರ್ಗ ಸಾಹಿತ್ಯ ರಚನೆಯಲ್ಲಿ ತೊಡಗಿದರು. ಅವರ ಪ್ರಧಾನ ಕಾಳಜಿ ತಮ್ಮ ಪರಿಸರದ ಬದುಕನ್ನು ದಾಖಲೀಕರಣಗೊಳಿಸುವುದಾಗಿತ್ತು. ಸಂಸ್ಕೃತಿಯ ಬಗೆಗಿನ ವಿಭಿನ್ನ ಆಲೋಚನಾ ಕ್ರಮಗಳು, ಸಂಸ್ಕೃತಿಯ ಹೊಸ ವ್ಯಾಖ್ಯಾನಗಳು ಕನ್ನಡ ಸಾಹಿತ್ಯದಲ್ಲಿ ಕಾಲದ ಅನಿವಾರ್ಯತೆ ಎಂಬಂತೆ ದಾಖಲೆಗೊಂಡವು. ಈ ರೀತಿ ದಾಖಲೆಗೊಂಡಿರುವಂತಹ ಭಿನ್ನ ಸಂಸ್ಕೃತಿ ಮತ್ತು ಸಂಸ್ಕೃತಿಯನ್ನು ನಿರ್ವಚಿಸಿಕೊಂಡದ್ದರ ಕ್ರಮವನ್ನು ಪ್ರಧಾನವಾಗಿ ಈ ಸಂಶೋಧನೆಯಲ್ಲಿ ಚರ್ಚಿಸಲಾಗಿದೆ. ಈ ಅಧ್ಯಯನದ ಆರಂಭದಲ್ಲಿ ಸಂಸ್ಕೃತಿಯ ಕುರಿತ ಪರಿಕಲ್ಪನೆಗಳನ್ನು, ಸಂಸ್ಕೃತಿಯ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿಯನ್ನು ಹಂತ ಹಂತವಾಗಿ ವಿವರಿಸುವ ಮೂಲಕ ಬದಲಾದ ಸನ್ನಿವೇಶದಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪವನ್ನು ಸ್ಪಷ್ಟವಾಗಿ ಗುರುತಿಸಿ ವಿವರಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಎಪ್ಪತ್ತರ ದಶಕದಲ್ಲಿ ಸಂಸ್ಕೃತಿಯ ಸ್ವರೂಪದ ಕುರಿತ ಕಲ್ಪನೆಗಳು ಈ ಹಿಂದಿನ ಸಂಸ್ಕೃತಿಯ ಕುರಿತ ಕಲ್ಪನೆಗಿಂತ ಭಿನ್ನ ನೆಲೆಯಲ್ಲಿ ಮೂಡಿ ಬಂದಿರುವುದರಿಂದ ಈ ಸಂದರ್ಭದಲ್ಲಿ ರಚನೆಗೊಂಡ ಕಾದಂಬರಿಗಳಲ್ಲಿ ಸಂಸ್ಕೃತಿಯ ಬಗೆಗೆ ಹೊಂದಿರುವ ಧೋರಣೆಗಳನ್ನು ತಾರ್ಕಿಕವಾಗಿ ಚರ್ಚಿಸಿ ನಿರ್ವಚಿಸಿಕೊಳ್ಳುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ದಲಿತರೇ ಬರೆದಿರುವ ಕಾದಂಬರಿಗಳಲ್ಲಿ ಅನಾವರಣಗೊಂಡಿರುವ ದಲಿತ ಸಂಸ್ಕೃತಿಯ ಸ್ವರೂಪವನ್ನು ತೌಲನಿಕವಾಗಿ ವಿವೇಚಿಸಲು ಅಗತ್ಯವಿರುವ ಸೈದ್ಧಾಂತಿಕ ಹಿನ್ನಲೆಯನ್ನು ರೂಪಿಸಿಕೊಳ್ಳುವ ಆಶಯವನ್ನು ಈ ಅಧ್ಯಯನ ಹೊಂದಿದೆ. ಪರ್ಯಾಯ ಸಂಸ್ಕೃತಿಯ ಕುರಿತಂತೆ ದಲಿತ ಮತ್ತು ಬಂಡಾಯ ಲೇಖಕರ ಆಲೋಚನಾ ವಿಧಾನವನ್ನು ಗುರುತಿಸುವುದು ಮತ್ತು ಅವುಗಳು ಕಾದಂಬರಿಗಳಲ್ಲಿ ಹೇಗೆ ವ್ಯಕ್ತವಾಗಿವೆ ಎಂಬುದನ್ನು ಗುರುತಿಸಿ ಇನ್ನೂ ಅನಾವರಣಗೊಳ್ಳದ ಅಂಶಗಳು ಯಾವುವು? ಎಂಬಿತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡು ಅವುಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಇವು ಈ ಮಹಾ ಪ್ರಬಂಧದ ಪ್ರಮುಖ ಆಶಯಗಳಾಗಿವೆ.

ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ:

ಈ ಅಧ್ಯಯನದಲ್ಲಿ ೧೯೭೪ರ ನಂತರದ ಕನ್ನಡದ ಪ್ರಮುಖ ಕಾದಂಬರಿಗಳನ್ನು ಅಧ್ಯಯನಕ್ಕೆ ಆಕರಗಳಾಗಿ ಬಳಸಲಾಗಿದೆ. ಈ ಅಧ್ಯಯನವು ೧೯೭೪ರ ನಂತರದ ಪ್ರಮುಖ ಸಾಹಿತ್ಯ ಘಟ್ಟಗಳನ್ನು ಕೇಂದ್ರವಾಗಿಟ್ಟುಕೊಂಡಿದೆ. ದಲಿತ, ಬಂಡಾಯ ಕಾಲಘಟ್ಟದ ಪ್ರಧಾನ ಕಾದಂಬರಿಗಳು ಈ ಅಧ್ಯಯನದ ಕೇಂದ್ರವಾಗಿದೆ. ೧೯೭೪ರ ನಂತರದ ಕಾಲದಲ್ಲಿ ಅನೇಕರ ಕಾದಂಬರಿಗಳು ಬಂದಿವೆಯಾದರೂ, ನನ್ನ ಸಂಶೋಧನೆಯು ದಲಿತ, ಬಂಡಾಯ ಕಾಲಘಟ್ಟವನ್ನೇ ಕೇಂದ್ರವಾಗಿರಿಸಿರುವ ಕಾರಣ ಎಲ್ಲಾ ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ. ಕಾಲದ

ಪರಿಮಿತಿಯಿಂದಾಗಿ ಒಂದು ನಿರ್ದಿಷ್ಟ ಚೌಕಟ್ಟನ್ನು ಹಾಕಿಕೊಂಡು ಗಾಂಧಿವಾದ, ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್ ವಾದ ಮತ್ತು ಸ್ತ್ರೀವಾದಗಳ ಹಿನ್ನಲೆಯಲ್ಲಿ ಆಯ್ದ ಕಾದಂಬರಿಗಳನ್ನು ವಿಶ್ಲೇಷಣೆಗೊಳಪಡಿಸಿರುತ್ತೇನೆ. ಆಯ್ದ ಕಾದಂಬರಿಗಳು ಸಂಸ್ಕೃತಿಯನ್ನು ಮರು ನಿರ್ವಚಿಸುವಲ್ಲಿ ವಹಿಸಿದ ಪಾತ್ರಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸುವ ಮೂಲಕ ಒಂದು ತಾತ್ವಿಕ ಚೌಕಟ್ಟನ್ನು ಒದಗಿಸಲಾಗಿದೆ. ದಲಿತ ಬಂಡಾಯ ಕಾಲಘಟ್ಟದ ಪ್ರಮುಖ ಕಾದಂಬರಿಗಳನ್ನು ಅವು ಒಳಗೊಂಡಿರುವ ಸಾಂಸ್ಕೃತಿಕ ನೆಲೆಗಟ್ಟಿನ ಮೂಲಕ ವಿವರಿಸಲಾಗಿದೆ. ಇಂಗ್ಲೀಷ್ ಶಿಕ್ಷಣ ಪಡೆದ ಶೂದ್ರ ಮಧ್ಯಮ ವರ್ಗ ವಸಾಹತುವಾದದ ಚಾರಿತ್ರಿಕ ಯುಗದಲ್ಲಿ ತಮ್ಮನ್ನು ಭಾಷಿಕವಾಗಿ ಪುನರ್ ನಿರ್ಮಿಸಿಕೊಂಡ ಪ್ರಧಾನ ಮಾದರಿಗಳನ್ನು ತಿಳಿಯುವುದು ಮುಖ್ಯವಾಗಿದೆ. ಹೀಗಾಗಿ ದಲಿತ ಬಂಡಾಯ ಕಾಲಘಟ್ಟದ ಕಾದಂಬರಿಗಳನ್ನು ಒಟ್ಟಾಗಿ ಗಮನಿಸುವ ಮೂಲಕ ಈ ಕಾಲಕ್ಕೆ ಸಂಬಂಧಿಸಿದ ಮುಖ್ಯ ಪ್ರಶ್ನೆಗಳನ್ನು ಭಿನ್ನ ಭಿನ್ನ ಸಮುದಾಯಗಳ ಹಿನ್ನಲೆಯಿಂದ ಬೆಳೆದು ಬಂದ ಲೇಖಕರು ಹೇಗೆ ಎದುರಿಸಿದ್ದಾರೆ ಎಂಬುದನ್ನು ಈ ಮಹಾಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

ಈ ಮಹಾ ಪ್ರಬಂಧದಲ್ಲಿ ಒಟ್ಟು ಏಳು ಅಧ್ಯಾಯಗಳಿದ್ದು, ಆಧ್ಯಾಯ-೧ರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ. (ಸೈದ್ಧಾಂತಿಕ ವಿಧಾನದ ಮೂಲಕ) ಈ ವಿಷಯದಲ್ಲಿ ಈವರೆಗೆ ನಡೆದಿರುವ ಅಧ್ಯಯನದ ಸಮೀಕ್ಷೆಯನ್ನು ಮಾಡಲಾಗಿದೆ. ಎರಡನೆಯ ಅಧ್ಯಾಯದಲ್ಲಿ 'ಸಂಸ್ಕೃತಿ'ಯ ಪರಿಕಲ್ಪನೆಯ ಕುರಿತಂತೆ ಇದುವರೆಗೆ ನಡೆಸಿದ ವಿದ್ವಾಂಸರ ಚರ್ಚೆಗಳನ್ನು ವಿವರಿಸಲಾಗಿದೆ. ಸಂಸ್ಕೃತಿಯ ಸ್ವರೂಪ, ಉದ್ದೇಶ, ಮತ್ತು ವ್ಯಾಪ್ತಿಯನ್ನು ವಿಶ್ಲೇಷಿಸಿದ ಬಳಿಕ ಬದಲಾದ ಸನ್ನಿವೇಶದಲ್ಲಿ ಸಂಸ್ಕೃತಿಯ ಸಂರಚನಾ ಸ್ವರೂಪದ ಅಗತ್ಯತೆಯ ಅನಿವಾರ್ಯತೆಯನ್ನು ವಿಶ್ಲೇಷಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಕಾದಂಬರಿಗಳ ವಿಶ್ಲೇಷಣೆ ಆರಂಭವಾಗುತ್ತದೆ. 'ದಲಿತ ಕಾದಂಬರಿ'ಗಳಲ್ಲಿ ಸಂಘಟಿತವಾದ ಸಂಸ್ಕೃತಿಯ ಸಂರಚನೆಯನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ದಲಿತ ಕಾದಂಬರಿಗಳಲ್ಲಿ ಜಾತಿ, ಧರ್ಮ, ಲಿಂಗ, ಶಿಕ್ಷಣ, ವೃತ್ತಿ, ಭಾಷೆಯ ಸ್ವರೂಪಗಳನ್ನು ವಿಶ್ಲೇಷಿಸಲಾಗಿದೆ. ಆ ಮೂಲಕ ಪರ್ಯಾಯ ಸಂಸ್ಕೃತಿಯ ಅಗತ್ಯತೆಯನ್ನು ಗುರುತಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ 'ಬಂಡಾಯ ಕಾದಂಬರಿ'ಗಳಲ್ಲಿ ಸಂಘಟಿತವಾದ ಸಂಸ್ಕೃತಿಯ ಸಂರಚನೆಯನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬಂಡಾಯ ಕಾದಂಬರಿಗಳಲ್ಲಿ ಶ್ರಮ, ಆರ್ಥಿಕತೆ, ದೇಸೀ ಜೀವನ ಕ್ರಮ, ಜಾತಿ ವರ್ಗಗಳ ಕುರಿತ ಸಮಸ್ಯೆಗಳನ್ನು ಗುರುತಿಸುವ ಮತ್ತು ಅದಕ್ಕೆ ಉತ್ತರಗಳನ್ನು ಕಾದಂಬರಿಗಳಲ್ಲಿ ಕಂಡುಕೊಳ್ಳುವ ಬಗೆಯನ್ನು ವಿವೇಚಿಸಿಕೊಳ್ಳಲಾಗಿದೆ. ಐದನೆಯ ಅಧ್ಯಾಯದಲ್ಲಿ 'ಮಹಿಳಾ ಕಾದಂಬರಿ'ಗಳಲ್ಲಿ ಸಂಸ್ಕೃತಿ'ಯ ಸಂರಚನೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳನ್ನು ದಾಂಪತ್ಯ, ಸಾಮಾಜಿಕ ಬದುಕು ಸಂಬಂಧ, ದೇಸೀ ಜೀವನ ಕ್ರಮ, ಅಂತರ್ಜಾತಿಯ ವಿವಾಹ, ಪುರುಷ ಸಾಮ್ಯದ ಸ್ವರೂಪಗಳಲ್ಲಿ ಗುರುತಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ 'ಮುಸ್ಲಿಂ ಕಾದಂಬರಿ'ಗಳಲ್ಲಿ ಸಂಘಟಿತವಾದ 'ಸಂಸ್ಕೃತಿ'ಯ ಸಂರಚನೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅವುಗಳನ್ನು ದಾಂಪತ್ಯ, ಶಿಕ್ಷಣ, ಸಾಮಾಜಿಕ ಬದುಕು ಸಂಬಂಧ, ವೃತ್ತಿ, ಧರ್ಮ, ಅಂತರ್ಜಾತಿಯ ವಿವಾಹ ಮತ್ತು ಪುರುಷಸ್ವಾಮ್ಯದ ಸ್ವರೂಪ ಮೊದಲಾದ ಅಂಶಗಳಲ್ಲಿ ಗುರುತಿಸಲಾಗಿದೆ. ವಿವಿಧ ಕಾಲಘಟ್ಟದ ಕಾದಂಬರಿಕಾರರು ಇವುಗಳಲ್ಲಿ ಯಾವ ಅಂಶಗಳತ್ತ ಗಮನ ಹರಿಸಿದ್ದಾರೆ, ಯಾವುದನ್ನು ಗುರುತಿಸಲು

ಅವರಿಂದ ಸಾಧ್ಯವಾಗಿಲ್ಲ? ಮತ್ತು ಅದಕ್ಕೆ ಕಾರಣಗಳೇನು ಎಂಬುದನ್ನು ಇಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಏಳನೆಯ ಅಧ್ಯಾಯದಲ್ಲಿ ಸಂಶೋಧನೆಯ ಫಲಿತಾಂಶಗಳನ್ನು ನೀಡಲಾಗಿದೆ. ದಲಿತ ಬಂಡಾಯ ಕಾಲಘಟ್ಟದ ಕನ್ನಡ ಕಾದಂಬರಿಗಳಲ್ಲಿ ನಿರೂಪಿತವಾದ 'ಸಂಸ್ಕೃತಿ ಸಂರಚನೆ'ಯ ವೈಶಿಷ್ಟ್ಯಗಳನ್ನು ಈ ಭಾಗದಲ್ಲಿ ಮಾಡಲಾಗಿದೆ.

ಅಧ್ಯಯನದ ಸೈದ್ಧಾಂತಿಕ ವಿಧಾನ:

ಕನ್ನಡ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪವನ್ನು (೧೯೭೪ರ ನಂತರದ ಪ್ರಮುಖ ಕಾದಂಬರಿಗಳನ್ನು ಅನುಲಕ್ಷಿಸಿ) ಗುರುತಿಸಿಕೊಳ್ಳಲು ಅಧ್ಯಯನದ ಸಲುವಾಗಿ ಸಾಹಿತ್ಯ ಅಧ್ಯಯನದ ಮಾದರಿಗಳ ಸೈದ್ಧಾಂತಿಕ ಚೌಕಟ್ಟುಗಳನ್ನು ಅಳವಡಿಸಲಾಗಿದೆ. ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಮಾದರಿಗಳು ಈ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಅನಿವಾರ್ಯವಾಗಿದ್ದು, ಈ ಮಾದರಿಗಳನ್ನು ಅಳವಡಿಸಲಾಗಿದೆ. ಮಾರ್ಕ್ಸ್‌ವಾದ, ಲೋಹಿಯವಾದ, ಗಾಂಧೀವಾದ, ಅಂಬೇಡ್ಕರ್‌ವಾದ, ಸ್ತ್ರೀವಾದದ ಹಿನ್ನಲೆಯಲ್ಲಿ ಆಯ್ದ ಕಾದಂಬರಿಗಳನ್ನು ವಿವರಿಸಲಾಗಿದೆ.

ಈವರೆಗೆ ನಡೆದ ಅಧ್ಯಯನಗಳು:

ಸಂಸ್ಕೃತಿಗೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಅಧ್ಯಯನಗಳು ಹಾಗೂ ಪೂರಕವಾಗಿ ನಡೆದಿರುವ ಅಧ್ಯಯನಗಳು ಈ ಕೆಳಗಿನಂತಿವೆ.

- ಡಾ. ನಿತ್ಯಾನಂದ ಬಿ. ಶೆಟ್ಟಿಯವರ ಸಂಶೋಧನಾ ಗ್ರಂಥ 'ಕನ್ನಡ ಸಂಸ್ಕೃತಿ ವಾಙ್ಮಯ' (೨೦೦೬)ದಲ್ಲಿ ಸಂಸ್ಕೃತಿಯ ಕುರಿತು ದೀರ್ಘವಾದ ಚರ್ಚೆಗಳಿವೆ. ಸಂಸ್ಕೃತಿಗೂ ಭಾಷೆಗೂ ನಡುವೆ ಇರುವ ಅಧಿಕಾರದ ಸಂಬಂಧ, ಸಂಸ್ಕೃತಿ ಪರಿಕಲ್ಪನೆಯ ಸ್ವರೂಪ, ಆಧುನಿಕ ತತ್ವ ಚಿಂತನೆಗಳಲ್ಲಿ ಸಂಸ್ಕೃತಿಯ ಗ್ರಹಿಕೆ, ಕನ್ನಡದಲ್ಲಿ ನಡೆದ ಸಂಸ್ಕೃತಿ ವಾಙ್ಮಯದ ನಿರ್ವಚನವನ್ನು ತುಂಬಾ ಗಂಭೀರವಾಗಿ ಅಧ್ಯಯನ ನಡೆಸಿದ ವಿವರಗಳಿವೆ. ಸ್ವದೇಶಿ ಸಂಸ್ಕೃತಿ ಚಿಂತಕರಾದ ಹರ್ಡೇಕರ್ ಮಂಜಪ್ಪನಿಂದ ಆರಂಭಿಸಿ ಆಲೂರು ವೆಂಕಟರಾವ್, ಡಿ.ವಿ.ಜಿ, ಶಂಬಾ ಜೋಷಿ, ಚಿದಾನಂದ ಮೂರ್ತಿಯವರೆಗೂ ಸಂಸ್ಕೃತಿ ಚಿಂತನೆಗಳನ್ನು ತಾತ್ವಿಕ ನೆಲೆಯಲ್ಲಿ ಗುರುತಿಸಿದ ವಿವರಗಳಿವೆ.
- ಕೆ. ಕೃಷ್ಣಪ್ಪ ಅವರ 'ಹೊಸಕೋಟೆ ತಾಲೂಕು ಒಂದು ಸಾಂಸ್ಕೃತಿಕ ಅಧ್ಯಯಯನ' (೨೦೦೨) ಎಂಬ ಸಂಶೋಧನಾ ಗ್ರಂಥದಲ್ಲಿ ಸಂಸ್ಕೃತಿಯ ಸ್ವರೂಪದ ಕುರಿತ ಹಾಗೆ ವಿವರಗಳು ದೊರೆಯುತ್ತವೆ.
- ರಹಮತ್ ತರೀಕೆರೆ ಅವರ 'ಸಾಂಸ್ಕೃತಿಕ ಅಧ್ಯಯನ' (೨೦೦೪) ಕೃತಿಯಲ್ಲಿ ಸಂಸ್ಕೃತಿಯ ಕುರಿತ ಹಾಗೆ ಇರುವ ಅರ್ಥದ ಎಳೆದಾಟಗಳನ್ನೂ, ಸಂಸ್ಕೃತಿ ಶಬ್ದದ ಚರಿತ್ರೆಯನ್ನು, ಸಂಸ್ಕೃತಿ ಚಿಂತನೆ ಹಾಗೂ

ಚಿಂತಕರನ್ನು ಅಧ್ಯಯನ ಮಾಡುವ ಜೊತೆಗೆ ಕನ್ನಡದ ಸಂಸ್ಕೃತಿ ಚಿಂತನೆ ಮತ್ತು ಚಿಂತಕರ ಕುರಿತು ಸುದೀರ್ಘವಾದ ಚರ್ಚೆಯಿದೆ.

- ❖ ರಹಮತ್‌ತರೀಕೆರೆ ಅವರ 'ಕನ್ನಡ ಸಂಶೋಧನೆಯ ತಾತ್ವಿಕ ವಿಚಾರಗಳು' (೨೦೦೭) ಕೃತಿಯಲ್ಲಿ ಸಂಶೋಧನೆ ಎಂದರೇನು? ಎಂಬ ಭಾಗದಲ್ಲಿ ಸಂಸ್ಕೃತಿಯ ವ್ಯುತ್ಪತ್ತಿ, ಸಂಸ್ಕೃತಿ ಶಬ್ದಕ್ಕೆ ಇರುವ ವಿಭಿನ್ನ ಅರ್ಥಗಳನ್ನು, ಕನ್ನಡ ಅಥವಾ ಕರ್ನಾಟಕ ಸಂಸ್ಕೃತಿ ಪರಿಕಲ್ಪನೆಗಳಿಗೆ ಅರ್ಥ ತುಂಬಿದ ನಾಲ್ಕು ಚಾರಿತ್ರಿಕ ಘಟ್ಟಗಳನ್ನು ಸ್ಥೂಲವಾಗಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. 'ಜಾಗತೀಕರಣ ಚರ್ಚೆ:ಸಂಸ್ಕೃತಿ ನುಡಿಗಟ್ಟು" ಎಂಬ ಭಾಗದಲ್ಲಿ ಸಂಸ್ಕೃತಿ ಹಾಗೂ ಜಾಗತೀಕರಣ ಕುರಿತಂತೆ ಇರುವ ಕೆಲವು ಗಂಭೀರವಾದ ತಾತ್ವಿಕ ತೊಡಕನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಕರ್ನಾಟಕ: ಸಂಸ್ಕೃತಿಯೋ – ಸಂಸ್ಕೃತಿಗಳೋ? ಎಂಬ ಭಾಗದಲ್ಲಿ ಕನ್ನಡದಲ್ಲಿ ಈ ಪರಿಕಲ್ಪನೆಗಳು ಯವಾಗ ಹುಟ್ಟಿದವು. ಯಾವ್ಯಾವ ಕಾಲಘಟ್ಟಗಳಲ್ಲಿ ಯಾವ್ಯಾವ ಅರ್ಥಗಳಲ್ಲಿ ಬಳಕೆಯಾದವು? ಈಗ ಯಾವ ಅರ್ಥ ದಕ್ಕುತ್ತಿದೆ? ಯಾವಾಗ ಇವು ಬಹು ಭಾಷಿಕ, ಬಹು ಧಾರ್ಮಿಕ ಸಮುದಾಯಗಳನ್ನು ಒಳಗೊಳ್ಳುವ ವಿಶಾಲ ಪರಿಭಾಷೆ ಆಗುತ್ತವೆ? ಎಂಬುದರ ಕುರಿತು ದೀರ್ಘಾವಾದ ವಿವರಗಳಿವೆ.
- ❖ ಡಿ.ವಿ.ಜಿಯವರು 'ಸಂಸ್ಕೃತಿ' (೧೯೫೩) ಕೃತಿಯಲ್ಲಿ ಸಂಸ್ಕೃತಿ ಕಲ್ಪನೆಯನ್ನು ಚಾರಿತ್ರಿಕ ಸಂದರ್ಭದಲ್ಲಿಟ್ಟು ನೋಡುವ ಅಗತ್ಯದ ಕುರಿತ ವಿವರಗಳಿವೆ.
- ❖ ಡಾ. ತಾಳ್ತಜೆ ವಸಂತಕುಮಾರರ 'ಸಂಶೋಧನ ತರಂಗ' (೧೯೯೬) ಕೃತಿಯಲ್ಲಿ 'ಸಾಂಸ್ಕೃತಿಕ ಸಂಶೋಧನೆ' ಎಂಬ ಭಾಗದಲ್ಲಿ ಸಂಸ್ಕೃತಿಯ ಲಕ್ಷಣವನ್ನು ಕ್ರೋಢೀಕರಿಸಿರುವುದು ಗಮನಕ್ಕೆ ಬರುತ್ತದೆ. ಹಾಗೆಯೇ ಕನ್ನಡದಲ್ಲಿ ಸಾಂಸ್ಕೃತಿಕ ಸಂಶೋಧನೆ: ಸ್ಥಿತಿ–ಗತಿ ಭಾಗದಲ್ಲಿ ಸಾಂಸ್ಕೃತಿಕ ಅಧ್ಯಯನದ ಸ್ಥಿತಿ–ಗತಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ವಿವರಗಳಿವೆ.
- ❖ ಎಚ್.ತಿಪ್ಪೇರುದ್ರಸ್ವಾಮಿಯವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' (೧೯೬೮) ಸಂಶೋಧನಾ ಕೃತಿಯು ಶಾಸನಗಳಲ್ಲಿ ಸಂಸ್ಕೃತಿಯನ್ನು ಗುರುತಿಸುವ ಪ್ರಯತ್ನ ಮಾಡಿದೆ. ಅಲ್ಲಿ ನಮ್ಮ ರಾಜರಲ್ಲಿದ್ದ ಧಾರ್ಮಿಕ ಸಹನೆಯನ್ನು ವಿವರಿಸುವ ಪ್ರಯತ್ನವನ್ನು ಗುರುತಿಸಬಹುದು. ಇಲ್ಲಿ ಸಂಸ್ಕೃತಿಯನ್ನು ಧರ್ಮ, ಸಾಹಿತ್ಯ, ಕಲೆ ಮತ್ತು ರಾಜವಂಶಗಳ ಮೌಲ್ಯಗಳ ಸಂಬಂಧಗಳಲ್ಲಿ ಗುರುತಿಸಿದ ವಿವರಗಳಿವೆ.
- ❖ ಯು.ಆರ್.ಅನಂತಮೂರ್ತಿಯವರ 'ಪ್ರಜ್ಞೆ ಮತ್ತು ಪರಿಸರ' (೨೦೦೪) ಕೃತಿಯಲ್ಲಿ 'ಈ ನಮ್ಮ ಸಂಸ್ಕೃತಿ' ಭಾಗದಲ್ಲಿ ಭಾರತದ ಸಂಸ್ಕೃತಿಯ ಕುರಿತಂತೆ ಉಲ್ಲೇಖಿಸುತ್ತಾ ಪಾಶ್ಚಾತ್ಯ ಆಧುನಿಕ ಸಂಸ್ಕೃತಿಯನ್ನು ಟೀಕಿಸುವಾಗಲೂ ಅದಕ್ಕೆ ನಾವ್ಯಾಕೆ ಮನ ಸೋತೆವೆಂಬುದನ್ನು ಚಿಂತಿಸುವುದು ಕಂಡುಬರುತ್ತದೆ. ಪ್ರಾಚೀನ ಸಂಸ್ಕೃತಿಗೂ ಆಧುನಿಕ ಸಂಸ್ಕೃತಿಗೂ ನಡುವೆ ಇರುವ ಅರ್ಥದ ಪಲ್ಲಟಗಳನ್ನು ಈ ಭಾಗದಲ್ಲಿ ಗುರುತಿಸಿದ ವಿವರಗಳಿವೆ.

❖ ಮುಲ್ಲೇಪುರಂ. ಜಿ. ವೆಂಕಟೇಶ್ 'ಶಂ.ಬಾ ಸಂಸ್ಕೃತಿ ಚಿಂತನೆ' (೧೯೯೮) ಕೃತಿಯಲ್ಲಿ 'ಸಂಸ್ಕೃತಿ ಮತ್ತು ಶಂ.ಬಾ' ಭಾಗದಲ್ಲಿ ಕರ್ನಾಟಕದ ಏಕೀಕರಣದ ಬಗ್ಗೆ ಚಿಂತನೆ ಹೋರಾಟ ಕರ್ನಾಟಕದಾದ್ಯಂತ ನಡೆಯುತ್ತಿರುವಾಗ ಹಾಗೂ ಕನ್ನಡ ಸಂಸ್ಕೃತಿಯನ್ನು ವೈಭವದ ನೆಲೆಯಲ್ಲಿ ಗ್ರಹಿಸುತ್ತಿರುವಾಗ ಜೋಷಿಯವರು ಕನ್ನಡಿಗರೆಂದರೆ ಯಾರು? ಇವರು ಮೊದಲು ಎಲ್ಲಿದ್ದರು? ಯಾವ ಯಾವ ಜನಾಂಗ ಸೇರಿ ಇಂದಿನ ರೂಪ ಪಡೆದಿದ್ದಾರೆ? ಇವರ ಸಂಸ್ಕೃತಿ ಸಮಾಜದ ಒಟ್ಟು ಮೌಲ್ಯಗಳು ಯಾವುವು? ಎಂಬ ಹುಡುಕಾಟ ನಡೆಸಿರುವುದನ್ನು ಗುರುತಿಸಬಹುದು. ಪ್ರಮುಖವಾಗಿ ಮಾನವ ಸಂಸ್ಕೃತಿಯ ಹಿನ್ನೆಲೆಯಲ್ಲಿ ಭಾರತೀಯ ಸಂಸ್ಕೃತಿ ವಿರುದ್ಧ ಬಂಡೆದ್ದವದರ ಮುಖಾಂತರವಾಗಿ ಆರಂಭಿಸಿದ ಹಲವು ಬಗೆಯ ಅಧ್ಯಯನದ ವಿವರಗಳು ಸಂಸ್ಕೃತಿ ಅಧ್ಯಯನಕ್ಕೆ ಪೂರಕವಾದ ಮಾಹಿತಿಗಳನ್ನು ದೊರಕಿಸುತ್ತವೆ. ಮುಂದಿನ ಭಾಗದಲ್ಲಿ 'ಸಾಂಸ್ಕೃತಿಕ ಇತಿಹಾಸದ ಪರಿಕಲ್ಪನೆಯ, ಶಂಬಾ: ಅಧ್ಯಯನದ ನೆಲೆಗಳು, ಕಂನಡ ಸಂಸ್ಕೃತಿಯ ನೆಲೆಗಳೂ, ಕಂನಾಡು ಪರಿಕಲ್ಪನೆ, ಮತ್ತು ಮಾನವ ಸಂಸ್ಕೃತಿ ಕುರಿತ ಶಂಬಾ ಚಿಂತನೆಗಳು ಇವೆಲ್ಲವೂ ಸಂಸ್ಕೃತಿಯ ಚಿಂತನೆಗಳಿಗೆ ಹೊಸ ಆಯಾಮವನ್ನು ದೊರಕಿಸಿ ಕೊಟ್ಟ ವಿವರಗಳಿವೆ.

❖ ಪೂರ್ಣಚಂದ್ರ ತೇಜಸ್ವಿಯವರ 'ವಿಮರ್ಶೆಯ ವಿಮರ್ಶೆ' (೨೦೧೦) ಕೃತಿಯ ಐದನೆಯ ಅಧ್ಯಾಯದಲ್ಲಿ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'ಯ ಭಾಗದಲ್ಲಿ ಭಾರತೀಯ ಸಂಸ್ಕೃತಿ ಎಂದು ಒಬ್ಬ ಬ್ರಾಹ್ಮಣ ಆಲೋಚನೆ ಮಾಡಿದಾಗ ಉಂಟಾಗದೆ ಇರುವ ಗೊಂದಲ ಇಕ್ಕಟ್ಟುಗಳು ಒಬ್ಬ ಶೂದ್ರ ಆಲೋಚನೆ ಮಾಡಲಾರಂಭಿಸಿದಾಗ ಉಂಟಾಗುತ್ತದೆ ಹೇಗೆ? ಎಂಬುದನ್ನು ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ. ಇದು ಸಂಸ್ಕೃತಿ ಸಂರಚನೆಯ ಮೇಲೆ ಹೆಚ್ಚು ಬೆಳಕು ಚೆಲ್ಲುವ ಕೃತಿಯಾಗಿದೆ.

❖ ಡಿ.ಆರ್. ನಾಗರಾಜರ 'ಅಮೃತ ಮತ್ತು ಗರುಡ' (೧೯೮೦) ಕೃತಿಯಲ್ಲಿ ಯಾವುದನ್ನು ನಾವು ತೃತೀಯ ಜಗತ್ತಿನ ಸಂಸ್ಕೃತಿಗಳೆಂದು ವಿಶಾಲಾರ್ಥದಲ್ಲಿ ಗುರುತಿಸುತ್ತೇವೆಯೋ ಅಂತಹ ಸಂಸ್ಕೃತಿಯ ಆತಂಕ, ತಲ್ಲಣ, ಬಯಕೆ, ವಿಶಾದಗಳೆಲ್ಲದರ ಜೊತೆಗೆ ನಡೆಸಿದ ಮುಖಾಮುಖಿಯ ಅಧ್ಯಯನವನ್ನು ಸ್ಥೂಲವಾಗಿ ವಿವರಿಸುವ ಪ್ರಯತ್ನವಿದೆ. ಇಂಥ ಮುಖಾಮುಖಿ ಚರ್ಚೆಗಳ ಮೂಲಕವೇ ಡಿ.ಆರ್. ನಾಗರಾಜ್ ಕನ್ನಡದ ಸಾಂಸ್ಕೃತಿಕ ಬದುಕಿಗೆ ನಿರಂತರವಾಗಿ ಸಂಘರ್ಷವನ್ನು ಕೊಟ್ಟರು ಎಂಬುದು ಪ್ರಸ್ತಾವನೆಯ ಭಾಗದಲ್ಲಿ ವಿವೇಚಿಸಲಾಗಿದೆ.

❖ ನರಹಳ್ಳಿ ಬಾಲಸುಬ್ರಹ್ಮಣ್ಯರವರು ಸಂಪಾದಿಸಿರುವ 'ಸಾಹಿತ್ಯ ಸಂಸ್ಕೃತಿ' (೧೯೯೮) ಕೃತಿಯಲ್ಲಿ ಡಿ.ಆರ್. ನಾಗರಾಜರ 'ಆಶೀಶ್ ನಂದಿ ವಿಚಾರ' ಲೇಖನವು ಪ್ರಸ್ತುತ ಭಾರತ ಮತ್ತು ಗ್ರಾಮೀಣ ತತ್ವ ಪರಿಕಲ್ಪನೆಗೆ ಸಂಬಂಧಿಸಿದಂತೆ ಪ್ರಮುಖವಾಗಿ ಮೂರು ಮಾದರಿಗಳನ್ನು ನೀಡುತ್ತವೆ. ಇವು ಸಂಸ್ಕೃತಿ ಚಿಂತನೆಗೆ ಸಂಬಂಧಿಸಿದಂತೆ ಹಲವಾರು ವಿವರಗಳನ್ನು ಒಳಗೊಂಡಿದೆ.

❖ ಯು.ಆರ್. ಅನಂತಮೂರ್ತಿಯವರ 'ಬೆತ್ತಲೆ ಪೂಜೆ ಯಾಕೆ ಕೂಡದು?' (೧೯೯೬) ಕೃತಿಯಲ್ಲಿ 'ಆಶೀಶ್ ನಂದಿ ಮತ್ತು ಡಿ.ಆರ್. ನಾಗರಾಜರಿಗೆ ಸ್ಪಂದನ' ಭಾಗವು ನಮ್ಮ ಇಡೀ ಆಧುನಿಕ ಚಾರಿತ್ರಿಕ ಪ್ರಕ್ರಿಯೆಗಳ ಬಗ್ಗೆ ಹೊಸ ಬೆಳಕು ಚೆಲ್ಲುವಂತಹ ವಿವರಗಳನ್ನು ಒಳಗೊಂಡಿದೆ.

❖ ಸದಾನಂದ ಕಸವಳಿ ಮತ್ತು ವೀರಣ್ಣ ರಾಜೂರ ಸಂಪಾದಿಸಿರುವ 'ಮಹಾಮಾರ್ಗ' (೧೯೯೮) ಕೃತಿಯಲ್ಲಿ ಓ.ಎಲ್. ನಾಗಭೂಷಣ ಸ್ವಾಮಿಯವರ ಕನ್ನಡದ ಸಂಸ್ಕೃತಿ ಶೋಧ ಲೇಖನದಲ್ಲಿ ಸಂಸ್ಕೃತಿ ಶೋಧನೆಯ ಉದ್ದೇಶವನ್ನು ವಿವರಿವಾಗಿ ವಿಶ್ಲೇಷಿಸಲಾಗಿದೆ. ಜೊತೆಗೆ ಸಂಸ್ಕೃತಿ ಪರಿಕಲ್ಪನೆಯ ಕುರಿತು, ಸಂಸ್ಕೃತಿ ಮತ್ತು ಪ್ರಕೃತಿಗಳ ಸಂಬಂಧ ಮತ್ತು ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಜೊತೆಗೆ ನಮ್ಮ ಗತಕಾಲದ ವಿವರಗಳ ಮುಖಾಂತರ ನಮ್ಮ ಮುಂದಿನ ಬದುಕು ಹಸನಾಗುವಂತೆ ಸಮಕಾಲೀನ ಸಮಾಜವನ್ನು ಪರಿಣಮಿಸುವ ಚಿಂತನೆಯ ಪರಂಪರೆಯೊಂದನ್ನು ನಿರ್ಮಿಸಿಕೊಳ್ಳುವ ಕೆಲಸ, ಸಮಕಾಲೀನ ಬದುಕಿನ ವಿವರಗಳನ್ನು ಮತ್ತು ಅವುಗಳನ್ನು ರೂಪಿಸುತ್ತಿರುವ ವೈಚಾರಿಕ ಆಕೃತಿಗಳನ್ನು ತಾತ್ವಿಕವಾಗಿ ಗ್ರಹಿಸಿ ಮೌಲ್ಯಮಾಪನ ಮಾಡಿಕೊಳ್ಳುವ ಕೆಲಸ ಮತ್ತು ಕನ್ನಡ ಸಂಸ್ಕೃತಿ ಚಿಂತನೆಯನ್ನು ಜಾಗತಿಕ ಹಿನ್ನಲೆ ಮತ್ತು ಆಯಾಮದಲ್ಲಿ ಗ್ರಹಿಸಿ ನಿರೂಪಿಸುವ ಚರ್ಚೆ ಈ ಲೇಖನದಲ್ಲಿ.

❖ ದೇವುಡು ಅವರ 'ಕರ್ನಾಟಕ ಸಂಸ್ಕೃತಿ' (೨೦೦೮) ಕೃತಿಯಲ್ಲಿ ಸಂಸ್ಕೃತಿಯ ಉಲ್ಲೇಖಗಳಿವೆ. ಸಂಸ್ಕೃತಿ ಶಬ್ದದ ಬಳಕೆ, ಸಂಸ್ಕೃತಿಯ ಕುರಿತ ವ್ಯಾಖ್ಯಾನ ಹಾಗೂ ಸಂಸ್ಕೃತಿಯ ಸ್ವರೂಪದ ಕುರಿತು ಮಾಹಿತಿಗಳು ದೊರೆಯುತ್ತವೆ. (ಪು ೩-೧೮)

❖ ಮಾಸ್ತಿಯವರು ಸಂಪಾದಿಸಿರುವ 'ಜೀವನ' ಸಂಚಿಕೆ೧ರಲ್ಲಿ ಎಂ.ವಿ. ಸೀತಾರಾಮಯ್ಯನವರು ಪ್ರಕಟಿಸಿದ 'ಸಂಸ್ಕೃತಿಯ ಸ್ವರೂಪ' ಲೇಖನದಲ್ಲಿ ಸಂಸ್ಕೃತಿ, ನಾಗರೀಕತೆ, ಸಂಸ್ಕೃತಿ ಪದದ ಅರ್ಥ ನಿಶ್ಚಯ, ಸುಸಂಸ್ಕೃತರ ಲಕ್ಷಣ, ಸಾಹಿತ್ಯ ಸಂಸ್ಕೃತಿ, ವಿಶ್ವ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಸಂಸ್ಕೃತಿಯ ಕುರಿತ ಹಾಗೆ ವಿಸ್ತಾರವಾದ ಮಾಹಿತಿಗಳು ಇವೆ. (ಪು. ೧೬೩-೧೭೦)

❖ ಡಿ.ಆರ್. ನಾಗರಾಜರ 'ಸಾಹಿತ್ಯ ಕಥನ' (೧೯೯೦) ವಿಮರ್ಶಾ ಕೃತಿಯಲ್ಲಿ "ಆಶಿಶ್‌ನಂದಿ ರೂಪಕಾತ್ಮಕ ವಿಧಾನ" ಎಂಬ ಲೇಖನದಲ್ಲಿ ಆಶೀಶ್ ಮೊದಲು ಸಂಸ್ಕೃತಿಗಳ ಸಂವಾದದ ನೆಲೆಯಲ್ಲಿ ಯೋಚಿಸುತ್ತಿದ್ದವರು. ನಂತರ ವೈಚಾರಿಕ ಆಕೃತಿಗಳ ಮಟ್ಟದಲ್ಲಿ ಹೊಸ ದಿಕ್ಕಿನತ್ತ ಹೊರಳುವ ವಿವರಗಳಿವೆ. ಆಶೀಶರ ಚಿಂತನೆಯ ನಾಟಕೀಯತೆ ಇರುವುದೇ ಕೆಲವು ಮುಖ್ಯ ರಚನೆಗಳು ಭಾರತೀಯ ಸಮಾಜ, ಸಂಸ್ಕೃತಿಗಳಲ್ಲಿ ಸೊರಗಿ ಕಣ್ಮರೆಯಾದದ್ದನ್ನು ತೋರಿಸಿದ್ದರಲ್ಲಿ ಎಂಬ ವಿವರಗಳು ದೊರೆಯುತ್ತವೆ.

❖ ಡಾ. ಬಿ.ಎ. ವಿವೇಕ ರೈ ಯವರು ಸಂಪಾದಿಸಿದ 'ರೂಪಾಂತರ' (೨೦೦೩) ಕೃತಿಯಲ್ಲಿ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯರ 'ಸಾಂಸ್ಕೃತಿಕ ದಾಸ್ಯದಿಂದ ಬಿಡುಗಡೆ' ಲೇಖನದಲ್ಲಿ ಯಜಮಾನ ಸಂಸ್ಕೃತಿಯ ದಬ್ಬಾಳಿಕೆಯಿಂದ ಪಾರಾಗುವುದು ಹೇಗೆ? ಎಂಬ ಪ್ರಶ್ನೆಗೆ ಪರ್ಯಾಯ ಉತ್ತರಗಳನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ. ಮತ್ತು ಇದೇ ಕೃತಿಯಲ್ಲಿ ಡಾ. ಎಲ್. ಶೇಷಗಿರಿರಾಯರ "ಶ್ರೇಷ್ಠ ಸಂಸ್ಕೃತಿ ಚಿಂತಕ ಎಡ್ವರ್ಡ್ ಸೈದ್" ಎಂಬ ಭಾಗದಲ್ಲಿ ಸೈದ್ ಬದುಕು ಬರಹಗಳ ಜೊತೆಗೆ ಆತನ ಸಂಸ್ಕೃತಿ ಚಿಂತನೆಯ ದೀರ್ಘವಾದ ವಿವರಗಳಿವೆ.

- ಡಾ. ಜಿ.ಸಿ. ನಿಂಗಣ್ಣನವರ 'ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ' (೨೦೧೦) ದಲ್ಲಿ ಸಂಸ್ಕೃತಿ ಎಂದರೇನು? ಎಂಬುದಕ್ಕೆ ವಿವಿಧ ವಿದ್ವಾಂಸರ ಅಭಿಪ್ರಾಯಗಳ ಹಿನ್ನಲೆಯಲ್ಲಿ ಮಾಹಿತಿಯನ್ನು ಒದಗಿಸುವುದರೊಂದಿಗೆ ಸಂಸ್ಕೃತಿಯ ಲಕ್ಷಣಗಳನ್ನು ಕುರಿತು ವಿವರಗಳಿವೆ. ಜೊತೆಗೆ ಸಂಸ್ಕೃತಿ ಪದದ ಅರ್ಥ, ವ್ಯಾಖೆಗಳು, ಸಂಸ್ಕೃತಿಯ ಲಕ್ಷಣಗಳು, ಸಂಸ್ಕೃತಿ ಮತ್ತು ನಾಗರೀಕತೆ, ಸಂಸ್ಕೃತಿ ಮತ್ತು ನಾಗರಿಕತೆಗಳಿಗಿರುವ ವ್ಯತ್ಯಾಸಗಳ ಚರ್ಚೆಯು ಈ ಕೃತಿಯಲ್ಲಿದೆ.
- ಡಾ. ಕೆ. ಕೃಷ್ಣಪ್ಪ ಅವರ 'ಸಂಸ್ಕೃತಿಯ ಅಂತರ್‌ಶಿಸ್ತೀಯ ನೆಲೆಗಳು'ಕೃತಿಯಲ್ಲಿ ಸಂಸ್ಕೃತಿಯ ಸ್ವರೂಪ ಮತ್ತು ಅದರ ವಿವಿಧ ಪರಿಕಲ್ಪನೆಗಳ ಕುರಿತು ಸ್ಥೂಲವಾದ ವಿವರಗಳಿವೆ.
- ಡಾ. ಕೆ. ಮೋಹನ್ ಕೃಷ್ಣ ರೈ ಸಂಪಾದಿತ ಚರಿತ್ರೆಯ ಅಧ್ಯಯನದ ಅರ್ಧವಾರ್ಷಿಕ ಸಂಚಿಕೆ – ೨ (೨೦೦೮ ಜನವರು–ಜೂನ್) ಯಲ್ಲಿ ಪ್ರಕಟವಾದ ಮೊಗಳ್ಳಿ ಗಣೇಶರ 'ಚರಿತ್ರೆಯ ರಚನೆಯಲ್ಲಿ ಅವ್ಯಕ್ತ ಸಂಸ್ಕೃತಿ ಮತ್ತು ಸುಪ್ತ ಪ್ರಜ್ಞೆ' ಎಂಬ ಲೇಖನದಲ್ಲಿ ಪರಿಸರಕ್ಕೆ ತಕ್ಕಂತೆ ಚರಿತ್ರೆ ರೂಪುಗೊಳ್ಳುತ್ತದೆ. ಹಾಗೆಯೇ ಆಯಾ ಪರಿಸರದ ಪ್ರಭಾವದಲ್ಲಿ ಸಂಸ್ಕೃತಿಗಳು ವಿಕಾಸಗೊಂಡಿರುತ್ತವೆ. ಅಂದರೆ ಪರಿಸರ ಚರಿತ್ರೆ ಸಂಸ್ಕೃತಿ ಇವು ಬೇರೆ ಬೇರೆ ಅಲ್ಲ. ಚರಿತ್ರೆಯು ನಿಸರ್ಗ ಮತ್ತು ಸಂಸ್ಕೃತಿಗಳ ಪರಿಣಾಮ, ಆದ್ದರಿಂದಲೇ ಸಂಸ್ಕೃತಿಗಳು ಚರಿತ್ರೆಗೆ ಅಧೀನವಲ್ಲ. ಬೇಕಾದರೆ ಸಂಸ್ಕೃತಿಗಳನ್ನು ಚರಿತ್ರೆ ಬಳಸಿಕೊಳ್ಳಬಹುದು, ವಿರೂಪಗೊಳಿಸಿ ಬಿಡಬಹುದು. ಆದರೆ ಅಂತಹ ಚರಿತ್ರೆಯ ಯಾಜಮಾನ್ಯವನ್ನು ನಿಸರ್ಗವು ನಿರ್ಣಯಕವಾಗಿ ಉರುಳಿಸಬಲ್ಲುದು. ನಾಗರೀಕತೆಗಳು ಹುಟ್ಟಿ ಬೆಳೆದು ಆಕ್ರಮಣಕಾರಿಯಾದಾಗಲೆಲ್ಲ ಅವು ನಿಸರ್ಗದ ತೀರ್ಮಾನಗಳಿಗೆ ತಲೆಬಾಗಿವೆ ಅಥವಾ ತಲೆದಂಡ ಸಲ್ಲಿಸಿವೆ. ಹೀಗೆ ಚರಿತ್ರೆಯ ಜೊತೆಗಿನ ಸಂಸ್ಕೃತಿ ಮತ್ತು ನಿಸರ್ಗಗಳ ಸಂಬಂಧದ ವಿವರಗಳಿವೆ.
- ಮೊಗಳ್ಳಿ ಗಣೇಶ್ ರವರ 'ದಲಿತರು ಮತ್ತು ಜಾಗತೀಕರಣ' (೧೯೯೯) ಕೃತಿಯಲ್ಲಿ ತೃತೀಯ ಜಗತ್ತಿನ ತಿರಸ್ಕೃತ ಸಮುದಾಯಗಳು ಸಾಂಸ್ಕೃತಿಕ ಜಾಗತೀಕರಣಕ್ಕೆ ಒಳಗಾದುದರ ಕುರಿತ ವಿವರಗಳಿವೆ.
- ಡಾ. ಮೇಟಿ. ಮಲ್ಲಿಕಾರ್ಜುನ ಸಂಪಾದನೆಯ 'ಅರುಹು ಕುರುಹು'ಕನ್ನಡ ತ್ರೈಮಾಸಿಕ (ಜನವರಿ–ಮಾರ್ಚ್ ೨೦೧೨) ರ ಸಂಚಿಕೆಯಲ್ಲಿ ಡೊಮೆನಿಕ್ ಡಿ. ಅವರ 'ಸಂಸ್ಕೃತಿ ಅಧ್ಯಯನದ ಕಣ್ಕಟ್ಟು' ಎಂಬ ಲೇಖನದಲ್ಲಿ ಸಂಸ್ಕೃತಿ ಕಥನ ಸಾಗಿ ಬಂದಿರುವ ದಾರಿಯ ಕುರಿತ ವಿವರಣೆ ಇದೆ. ಸಂಸ್ಕೃತಿಯ ಪಲ್ಲಟವನ್ನು ಪ್ರಮುಖವಾಗಿ ಐದು ಪದಗಳಲ್ಲಿ ಗುರುತಿಸಿದ ವಿವರಗಳಿವೆ. ಅವೆಂದರೆ 'ಇಂಡಸ್ಟ್ರಿ', 'ಡೆಮಾಕ್ರಸಿ', 'ಕ್ಲಾಸ್', 'ಆರ್ಟ್' ಮತ್ತು 'ಕಲ್ಚರ್' ಈ ಪದಗಳ ಸಾಂಸ್ಕೃತಿಕ ರಾಜಕಾರಣದ ಚಾರಿತ್ರಿಕ ನಡೆಯನ್ನು ಗುರುತಿಸಿಕೊಳ್ಳುವಾಗ ಅವುಗಳಲ್ಲಿ ಆಧುನಿಕವಾದ ಅರ್ಥ ಹೇಗೆ ಘಟಿಸುತ್ತದೆ ಎನ್ನುವ ಸಂಗತಿಗಳ ವಿಸ್ತಾರವಾದ ವಿವರಗಳಿವೆ.

❖ ಪ್ರೊ. ವಿ.ಆರ್. ಬಡಿಗೇರರ 'ಸಾಹಿತ್ಯಿಕ ಸಿದ್ಧಾಂತ' (೨೦೧೦) "ಸಾಂಸ್ಕೃತಿಕ ಅಧ್ಯಯನಗಳು" ಎಂಬ ಭಾಗದಲ್ಲಿ ಸಂಸ್ಕೃತಿಯ ಕುರಿತ ಹಾಗೆ ಪಾಶ್ಚಿಮಾತ್ಯ ಸಂಸ್ಕೃತಿ ಚಿಂತಕರ ಅಭಿಪ್ರಾಯದ ಸ್ಥೂಲವಾದ ವಿವರಗಳಿವೆ.

❖ ಎನ್.ಎಸ್. ಶ್ರೀಧರಮೂರ್ತಿಯವರ 'ಬೆಳಕು ಬೆರಗು' (೨೦೦೫) ಕೃತಿಯಲ್ಲಿ 'ಸೇಡಿಯಾಪು ಕೃಷ್ಣಭಟ್ಟರ ಸಾಂಸ್ಕೃತಿಕ ಚಿಂತನೆಗಳು' ಎಂಬ ಭಾಗದಲ್ಲಿ ನಂಬಿಕೆ ವೈಯಕ್ತಿಕ ಅದನ್ನು ನಂಬಿ ಸಂಸ್ಕೃತಿ ಬೆಳೆಯುವುದಿಲ್ಲ ಅದರೆ ಶ್ರೇಷ್ಠವಾದದ್ದನ್ನು ಜತನದಿಂದ ಹಿಡಿದಿಡುವ ಜವಾಬ್ದಾರಿಯಿಂದ ಸಂಸ್ಕೃತಿ ಉಳಿಯುತ್ತದೆ, ಬೆಳೆಯುತ್ತದೆ ಎಂಬ ವಿವರಗಳಿವೆ.

❖ ಡಾ. ಯು. ಆರ್. ಅನಂತಮೂರ್ತಿಯವರ 'ಸಂಸ್ಕೃತಿಮತ್ತು ಅಡಿಗ' (೧೯೯೬) ಕೃತಿಯಲ್ಲಿ ಸಂಸ್ಕೃತಿಯ ಆಕರ್ಷಣೆ ವಿಕರ್ಷಣೆ ಭಾಗವು ನಮ್ಮ ಸಂಸ್ಕೃತಿಯು ಇಂದು ಅರ್ಥಹೀನವಾಗುತ್ತಿರುವುದರ ಸ್ಥೂಲ ವಿವರಗಳನ್ನು ಒಳಗೊಂಡಿದೆ.

❖ ಡಾ. ಸಿ. ಮುರಾರಿ ಬಲ್ಲಾಳ ಅವರ 'ಒಂಟಿ ಧ್ವನಿ' (೧೯೯೯) ಕೃತಿಯಲ್ಲಿ ಪರ್ಯಾಯ ಸಾಂಸ್ಕೃತಿಕ ಚಿಂತನೆ, ಸಂಸ್ಕೃತಿ, ವಿಜ್ಞಾನ ಸೌಂದರ್ಯೋಪಾಸನೆ, ಕನ್ನಡ ಸಮಾಜ ಸಂಸ್ಕೃತಿಯ ವಿನ್ಯಾಸಗಳು ಮತ್ತು ಕೈಗಾರಿಕೀಕರಣದ ವಿವರಗಳಿವೆ.

❖ ಡಾ. ರಾಜಾರಾಮ ಹೆಗಡೆಯವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ' (೨೦೦೪) ಕೃತಿಯಲ್ಲಿ ಕೆಲವು ಮುಖ್ಯ ಲೇಖನಗಳನ್ನು ಈ ಅಧ್ಯಯನದ ದೃಷ್ಟಿಯಿಂದ ಗಮನಿಸಬಹುದಾಗಿದೆ. ಮೂಲ ಅನುವಾದ ಓ.ಎಲ್. ನಾಗಭೂಷಣಸ್ವಾಮಿಯವರ 'ಭಾರತವನ್ನು ಕುರಿತು ಓರಿಯಂಟಲಿಸ್ಟರ ಗ್ರಹಿಕೆಗಳು' ಲೇಖನದಲ್ಲಿ ಓರಿಯಂಟಲಿಸಂ ವಿಮರ್ಶಾತ್ಮಕ ವ್ಯಾಖ್ಯಾನವು ಪೌರ್ವಾತ್ಯರ ನಾಗರೀಕತೆ ಮತ್ತು ಸಂಸ್ಕೃತಿಗಳನ್ನು ಕುರಿತ ಪೂರ್ವಾಗ್ರಹಗಳ ಕುರಿತು ವಿವರವಾದ ಮಾಹಿತಿ ಇದೆ.

❖ ಆಶೀಶ್‌ನಂದಿಯವರ ಲೇಖನವನ್ನು ಅನುವಾದಿಸಿದ ಜಸವಂತ ಜಾಧವ ಅವರ 'ಇತಿಹಾಸ ಮರೆತ ಇತರ ಸ್ಮೃತಿ ರೂಪಗಳು' ಎಂಬ ಲೇಖನದಲ್ಲಿ ಪಾರಂಪರಿಕ ಭಾರತ ಆಧುನಿಕ ಯೂರೋಪಿನ ಇತಿಹಾಸ ಪ್ರಜ್ಞೆಯನ್ನು ಹೊಂದಿಲ್ಲದಿರುವುದು ಮಾತ್ರವಲ್ಲ, ಅದರ ಬಗ್ಗೆ ನಂಬಿಕೆಯನ್ನು ಹೊಂದಿಲ್ಲದಿರುವುದರ ಕುರಿತ ವಿವರಗಳಿವೆ.

❖ ಡಾ. ವಿರೂಪಾಕ್ಷ ಪೂಜಾರಹಳ್ಳಿ ಸಂಪಾದಿಸಿರುವ "ದಲಿತರು ಮತ್ತು ಚರಿತ್ರೆ" (೨೦೦೫) ಎಂಬ ಕೃತಿಯಲ್ಲಿ ಡಾ. ಶಿವಾನಂದ ಕೆಳಗಿನಮನಿ ಅವರ 'ದಲಿತರ ಇತಿಹಾಸ ಮತ್ತು ಸಂಸ್ಕೃತಿ' ಎಂಬ ಲೇಖನದಲ್ಲಿ ದಲಿತ ಸಂಸ್ಕೃತಿಯ ಆಚರಣೆಯ ಕುರಿತ ಮಾಹಿತಿಗಳಿವೆ. ಮೇಲ್ವರ್ಗದವರ ಸಂಸ್ಕೃತಿಗಿಂತ ದಲಿತರ ಸಂಸ್ಕೃತಿ ಭಿನ್ನವಾಗಿ ಉಳಿಯುವುದರ ಜೊತೆಗೆ ವಾಸ್ತವ ಬದುಕಿನ ನೆಲೆಯಲ್ಲಿ ಸಾಧ್ಯವಾಗದ್ದನ್ನು ಸಂಸ್ಕೃತಿ ಆಚರಣೆಗಳಲ್ಲಿ ಸಾಧ್ಯವಾಗಿಸಿಕೊಳ್ಳುವ ಮಾಹಿತಿಗಳನ್ನು ಈ ಲೇಖನವು ಒಳಗೊಂಡಿದೆ.

❖ ರಹಮತ್‌ತರೀಕೆರೆ ಅವರ 'ಪ್ರತಿಸಂಸ್ಕೃತಿ' (೧೯೯೩) ಕೃತಿಯಲ್ಲಿ ಪಾವಿತ್ರ್ಯನಾಶವೂ ಪ್ರತಿ ಸಂಸ್ಕೃತಿಯೂ ಪರಂಪರೆಯನ್ನು ಅರ್ಥಮಾಡಿಕೊಳ್ಳುವ ವಿಧಾನ (ಪು ೨೦-೨೭), ಗ್ರಾಮ ದೇವತೆಗಳು ಫ್ಯೂಡಲ್ ಸಂಸ್ಕೃತಿಯೊಳಗೆ (ಪು ೭೮-೮೯), ಪ್ರತಿ ಸಂಸ್ಕೃತಿಯನ್ನು ರೂಪಿಸುತ್ತಿರುವ ಕತೆಗಳು (ಪು ೧೪೦-೧೫೫) ಇವುಗಳನ್ನು ಕುರಿತ ಹಾಗೆ ವಿಸ್ತಾರವಾದ ವಿವರಗಳಿವೆ.

ಕಾದಂಬರಿಗಳಲ್ಲಿ ಸಂಸ್ಕೃತಿಯ ಕುರಿತಂತೆ ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ:

❖ ಡಾ. ಶಿವರಾಮ ಪಡಿಕ್ಕಲ್ ಅವರ "ಕನ್ನಡ ಕಾದಂಬರಿಯ ಮೊದಲ ಘಟ್ಟ" ೧೯೮೭ ಎಂಬ ಪಿ.ಹೆಚ್.ಡಿ ಮಹಾಪ್ರಬಂಧವು ಕಾದಂಬರಿ ಪ್ರಕಾರದ ಉಗಮದ ಕುರಿತಂತೆ ಬಹಳ ಮುಖ್ಯ ಚರ್ಚೆಯನ್ನು ಮುಂದಿಟ್ಟಿದೆ. ಕನ್ನಡದಲ್ಲಿ ಕಾದಂಬರಿ ಪ್ರಕಾರವು ಕೇವಲ ಇಂಗ್ಲೀಷ್‌ನ 'ನಾವೆಲ್' ಪ್ರಕಾರದ ಅನುಕರಣವಾಗಿ ಹುಟ್ಟಿದೆ. ಕರ್ನಾಟಕದ ಸಾಮಾಜಿಕ ಮತ್ತು ಚಾರಿತ್ರಿಕ ಅಗತ್ಯಗಳ ಉತ್ಪನ್ನವಾಗಿ ಕಾದಂಬರಿ ಪ್ರಕಾರ ಕಾಣಿಸಿಕೊಂಡಿದೆ ಎಂಬ ಪ್ರಮುಖ ನೆಲೆಯನ್ನು ಅಧರಿಸಿ ಮೊದಲ ಘಟ್ಟದ ಕಾದಂಬರಿಗಳನ್ನು ಪಡಿಕ್ಕಲ್ ಅವರು ವಿಶ್ಲೇಷಿಸಿದ್ದಾರೆ. ಕಾದಂಬರಿ ಉಗಮದ ದೇಶೀಯ ಚೌಕಟ್ಟನ್ನು ವಿವರಿಸುವುದು ಅವರ ಪ್ರೌಢ ಪ್ರಬಂಧದ ಪ್ರಧಾನ ನೆಲೆಯಾಗಿದೆ. ಕಾದಂಬರಿ ಅಧ್ಯಯನಕ್ಕೆ ಈ ಕೃತಿ ಮೊದಲ ಕೊಡುಗೆಯಾಗಿದ್ದು ಕಾದಂಬರಿಯ ಕುರಿತ ಹಾಗೆ ವಿಸ್ತಾರವಾದ ವಿವರಗಳನ್ನು ಒಳಗೊಂಡಿದೆ.

❖ ಡಾ. ಶ್ರೀನಿವಾಸರ "ಕನ್ನಡ ನವೋದಯ ಕಾದಂಬರಿಗಳಲ್ಲಿ ಸಂಘರ್ಷದ ಸ್ವರೂಪ" (೨೦೦೪) ಎಂಬ ಸಂಶೋಧನಾ ಗ್ರಂಥದಲ್ಲಿ ದೇಶೀ ಚಿಂತನೆಗಳಿವೆ. ಶಿವರಾಮಕಾರಂತರ ಕಾದಂಬರಿಗಳಲ್ಲಿ ಹಾಗೂ ಕುವೆಂಪು ಕಾದಂಬರಿಗಳಲ್ಲಿ ಸಂಘರ್ಷದ ಸ್ವರೂಪವನ್ನು ಗುರುತಿಸಿದ ವಿಸ್ತಾರವಾದ ವಿವರಗಳಿವೆ. ಶೂದ್ರ ಬದುಕಿನ ಹಿನ್ನಲೆಯಲ್ಲಿ ಪರಂಪರೆ, ಆಧುನಿಕತೆ ಹಾಗೂ ಹೊಸ ಬದುಕಿನ ಮಾದರಿಗಳ ಹುಡುಕಾಟದ ಕುರಿತು ವಿವರಗಳು ದೊರೆಯುತ್ತದೆ. ಕಲೆ, ಸಾಹಿತ್ಯ ಹಾಗೂ ಬದುಕಿನ ಕುರಿತ ಕಾದಂಬರಿಕಾರನ ತಾತ್ವಿಕ ಗ್ರಹಿಕೆಯ ನೆಲೆಯನ್ನು ಅಧ್ಯಯನ ಮಾಡಿದ ವಿವರಗಳಿವೆ. ದಾಂಪತ್ಯ ಹಾಗೂ ಲೈಂಗಿಕ ಸಂಬಂಧಗಳ ಪ್ರಶ್ನೆ ಮತ್ತು ತಳಸ್ತರದ ಸಮುದಾಯಗಳ ಚಲನೆಯ ಕುರಿತ ಕಾರಂತರ ತಾತ್ವಿಕ ನಿಲುವುಗಳೇನು ಎಂಬುದರ ಕುರಿತು ವಿವರಗಳು ದೊರೆಯುತ್ತವೆ.

❖ ಡಾ. ಆರ್.ವ್ಹಿ. ಭಂಡಾರಿಯವರ "ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ" (೨೦೦೩) ಎಂಬ ಸಂಶೋಧನಾ ಕೃತಿಯಲ್ಲಿ ನಿರಂಜನ, ಕಟ್ಟೀಮನಿ, ಚದುರಂಗ ಮತ್ತು ವ್ಯಾಸರಾಯ ಬಲ್ಲಾಳರ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷವನ್ನು ಗುರುತಿಸಿದ ವಿವರಗಳಿವೆ. ಅಧ್ಯಾಯ ಎರಡರಲ್ಲಿ ವರ್ಣ ಹಾಗೂ ವರ್ಗದ ಪರಿಕಲ್ಪನೆಗಳಿದ್ದರೆ, ಅಧ್ಯಾಯ ಮೂರರಲ್ಲಿ ಪ್ರಗತಿಶೀಲ ಪ್ರಮುಖ ಪ್ರೇರಣೆ ಹಾಗೂ ಪ್ರವೃತ್ತಿಗಳ ಕುರಿತ ವಿಸ್ತಾರವಾದ ವಿವರಗಳಿವೆ.

❖ ಡಾ. ಮಂಜುಳಾ ಉಳ್ಳಾಲರ "ನವೋದಯ ಕಾದಂಬರಿಗಳಲ್ಲಿ ದೇಶೀಯತೆಯ ಪರಿಕಲ್ಪನೆ" (೨೦೦೩) ಎಂಬ ಸಂಶೋಧನಾ ಕೃತಿಯು ದೇಶೀಯತೆಯ ಸ್ವರೂಪದ ಕುರಿತ ಅಧ್ಯಯನವಾಗಿದೆ. ಈ ಭಾಗದಲ್ಲಿ

ಕಾದಂಬರಿ ಪ್ರಕಾರ ಮತ್ತು ನವೋದಯ ಚಳುವಳಿ ಹಾಗೂ ನವೋದಯ ಸಾಂಸ್ಕೃತಿಕ ಚಳುವಳಿ ಮೇಲಿನ ಪ್ರಭಾವಗಳ ಕುರಿತು ಸ್ಥೂಲ ವಿವರಗಳಿವೆ. ದೇಶೀಯತೆಯ ಹಿನ್ನೆಲೆಯಲ್ಲಿ ನವೋದಯ ಕಾದಂಬರಿಗಳು ಎಂಬ ಭಾಗದಲ್ಲಿ ನವೋದಯ ಕಾದಂಬರಿಗಳಿಗೆ ಕನ್ನಡ ವಿಮರ್ಶೆ ನೀಡುವ ಅರ್ಥಗಳು, ನವೋದಯ ಕಾದಂಬರಿಗಳ ಮೇಲೆ ದೇಸಿ ಸಮುದಾಯಗಳ ಪ್ರಭಾವ ಬದುಕು, ನಂಬಿಕೆ ಪ್ರತಿಭೆಗಳ ಕುರಿತು ಅಧ್ಯಯನ ನಡೆಸಿದ ವಿವರಗಳಿವೆ.

- ಡಾ. ರಾಜಶೇಖರ ವಿರೂಪಾಕ್ಷರ "ಕಾದಂಬರಿಗಳಲ್ಲಿ ತಲೆಮಾರುಗಳ ಸಂಘರ್ಷ" (೨೦೦೪) ಸಂಶೋಧನಾ ಗ್ರಂಥವು ಕಾದಂಬರಿಯ ಮೂಲಕ ತಲೆಮಾರುಗಳಿಂದ ತಲೆಮಾರುಗಳಲ್ಲಿ ಆದ ಬದಲಾವಣೆಯ ಕುರಿತ ಅಧ್ಯಯನವಾಗಿದೆ. ಕನ್ನಡ ಕಾದಂಬರಿಯ ಚಾರಿತ್ರಿಕ ಬೆಳವಣಿಗೆ ಎಂಬ ಅಧ್ಯಯನದಲ್ಲಿ ನವೋದಯ ಪೂರ್ವದಿಂದ ಬಂಡಾಯ ದಲಿತ ಕಾಲಘಟ್ಟದವರೆಗಿನ ವಿವರಗಳನ್ನು ಸ್ಥೂಲವಾಗಿ ವಿಶ್ಲೇಷಿಸಲಾಗಿದೆ. ಕಾದಂಬರಿಗಳಲ್ಲಿ ಬಹುತ್ವದ ನೆಲೆಗಳು, ಎಂಬ ಅಧ್ಯಾಯದಲ್ಲಿ ಏಕತ್ವದ ಪರಿಕಲ್ಪನೆ ವಸಾಹತುಶಾಹಿಯ ವಿವೇಕ ಮತ್ತು ವಿಷಾದ, ಸಾಂಸ್ಕೃತಿಕ ರಚನೆಗಳ ಕುರಿತ ವಿಸ್ತಾರವಾದ ವಿವರಗಳಿವೆ. ಕಾದಂಬರಿಯ ಮೂಲಕ ತಲೆಮಾರುಗಳಿಂದ ತಲೆಮಾರುಗಳಲ್ಲಿ ಆದ ಬದಲಾವಣೆ, ಸುಧಾರಣೆ, ಈ ಸಂದರ್ಭದಲ್ಲಿ ಕಾಣಿಸಿಕೊಂಡ ಸಂಘರ್ಷ, ಸಮನ್ವಯತೆಯ ಸ್ಥೂಲ ವಿವರಗಳಿವೆ.
- ಡಾ. ಸುಜಾತ.ಕೆ ಅವರ "ಇಪ್ಪತ್ತನೆಯ ಶತಮಾನದ ಕೊನೆಯ ೨೫ ವರ್ಷಗಳ ಕಥನ ಸಾಹಿತ್ಯದಲ್ಲಿ ಯಾಜಮಾನ್ಯ ಮತ್ತು ಸಾಂಸ್ಕೃತಿಕ ಅನನ್ಯತೆಯ ನೆಲೆಗಳು" (೨೦೦೭) (ಅಪ್ರಕಟಿತ) ಎಂಬ ಸಂಶೋಧನ ಕೃತಿಯಲ್ಲಿ ದಲಿತ ಕುಟುಂಬವೊಂದರ ಸಾಂಸ್ಕೃತಿಕ ಜಗತ್ತನ್ನು ತೆರೆದಿಡುವ 'ಒಡಲಾಳ' ಕೃತಿಯು ದಲಿತರ ವಾಸ್ತವ ಸ್ಥಿತಿಗತಿಯನ್ನು ತಿಳಿಸುವುದರೊಂದಿಗೆ ಅದರ ಸಾಧ್ಯತೆಗಳತ್ತಲೂ ಬೆಳಕು ಚೆಲ್ಲುತ್ತದೆ. ಎಂಬ ವಿವರಗಳಿವೆ. ಜೊತೆಗೆ ದೇವನೂರು, ಮೊಗಳ್ಳಿ ಗಣೇಶ್, ವೈದೇಹಿ, ಬಾನುಮುಷ್ತಾಕ್, ಮೊದಲಾದವರ ಕತೆಗಳಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ ವಿವರಗಳಿವೆ.
- ಡಾ. ಗುರುಪಾದ ಗದ್ದಿಗಿಮಠ ಅವರ "ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ" (೧೯೮೯) ಎಂಬ ಸಂಶೋಧನಾ ಕೃತಿಯಲ್ಲಿ ಅರಿವಿನ ಮತ್ತು ನಾಡಿನ ಸಂಸ್ಕೃತಿ ಚಿತ್ರಣಗಳು ಕುವೆಂಪು ಕಾದಂಬರಿಗಳಲ್ಲಿ ಹೇಗೆ ಮೂಡಿ ಬಂದಿವೆ ಎಂಬುದರ ಕುರಿತು ವಿಸ್ತಾರವಾದ ವಿವರಗಳಿವೆ.
- ಡಾ. ಭೂಮಿಗೌಡರ "ನವ್ಯೋತ್ತರ ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು" (೧೯೯೯) ಎಂಬ ಸಂಶೋಧನಾ ಕೃತಿಯ ನವೋದಯದಿಂದ ಇತ್ತೀಚಿನವರೆಗಿನ ದಲಿತರ ಬದುಕನ್ನು ಚಿತ್ರಿಸಿರುವ ಕಾದಂಬರಿಗಳನ್ನು ಅಧ್ಯಯನದಲ್ಲಿ ಆಕರ ಸಾಮಗ್ರಿಗಳಾಗಿ ಬಳಸಿದ ವಿವರಗಳನ್ನು ಒಳಗೊಂಡಿದೆ. ಬಂಡಾಯ ಬರಹಗಾರರಲ್ಲಿ ಪ್ರಮುಖರಾದ ಬರಗೂರು ರಾಮಚಂದ್ರಪ್ಪ, ಕುಂ. ವೀರಭದ್ರಪ್ಪ, ಚನ್ನಣ್ಣ ವಾಲೀಕಾರ, ಆರ್.ವಿ. ಭಂಡಾರಿ, ಬಿ.ಟಿ. ಲಲಿತನಾಯಕ್, ಎಂ. ವೀರಪ್ಪ ಮೊಯ್ಲಿ, ಬಿ.ಎಲ್. ವೇಣು, ಕೆ.ಟಿ. ಗಟ್ಟಿ, ಎಂ.ಪಿ. ಮಾಲತಿ, ಸುಬ್ರಾಯ ಚೊಕ್ಕಾಡಿ, ದು.ನಿಂ. ಬೆಳಗಲಿ, ಹೊರೆಯಾಲ ದೊರೆಸ್ವಾಮಿ ಈ ಕಾದಂಬರಿಕಾರರ ಒಟ್ಟು ೧೫ ಕಾದಂಬರಿಗಳು ದಲಿತ ಜಗತ್ತಿನ ಅನಾವರಣ ಮಾಡಿದ ವಿವರಗಳಿವೆ.

ಜೊತೆಗೆ ದಲಿತ ಬರಹಗಾರರಾದ ದೇವನೂರ ಮಹಾದೇವ, ಮುಳ್ಳೂರು ನಾಗರಾಜ, ಮ.ನ. ಜವರಯ್ಯ, ಅರವಿಂದ ಮಾಲಗತ್ತಿ ಮತ್ತು ಶಿವರುದ್ರ ಕಲ್ಲೋಳಿಕರರ ಒಟ್ಟು ಆರು ಕಾದಂಬರಿಗಳನ್ನು ಈ ಅಧ್ಯಯನದಲ್ಲಿ ಬಳಸಿಕೊಂಡ ಕುರಿತು ವಿಸ್ತಾರವಾದ ವಿವರಗಳಿವೆ.

❖ ಡಾ. ಆರ್. ನಾಗಪ್ಪ ಗೌಡರ "ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟದ ಸ್ವರೂಪಗಳು" (೨೦೦೨) ಸಂಶೋಧನಾ ಕೃತಿಯಲ್ಲಿ ಕಾದಂಬರಿಗಳಲ್ಲಿ ಸಂಸ್ಕೃತಿಯ ಕುರಿತ ಹಾಗೆ ಅಧ್ಯಯನ ಮಾಡಿದ ಮಹತ್ವದ ಕೃತಿಯಾಗಿದೆ. ಸಂಸ್ಕೃತಿ ಮತ್ತು ಸಾಹಿತ್ಯದ ನಡುವಣ ಅಂತರ್ ಸಂಬಂಧಗಳ ಕುರಿತು ಅಧ್ಯಯನ ನಡೆಸಿದ್ದಾರೆ. ಆಧುನಿಕ ಕನ್ನಡ ಕಾದಂಬರಿಗಳಲ್ಲಿ. ದೇಶೀವಾದದ ಬಗೆಗೆನ ನಿಲುವುಗಳ ಕುರಿತು ಅಭ್ಯಾಸ ನಡೆಸಿದ್ದಾರೆ. ಕನ್ನಡ ಕಾದಂಬರಿಗಳಲ್ಲಿ ರೂಪು ಪಡೆದ ಕುಟುಂಬ, ಜಾತಿ, ಧರ್ಮದ ಪರಿಕಲ್ಪನೆಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆಧುನಿಕ ಕನ್ನಡ ಕಾದಂಬರಿಗಳಲ್ಲಿ ರೂಪಿತವಾದ ಪ್ರಭುತ್ವ ಮತ್ತು ರಾಷ್ಟ್ರೀಯತೆಯ ಬಗೆಗಿನ ಪ್ರತಿಕ್ರಿಯೆಯ ಕುರಿತು ವಿಸ್ತಾರವಾದ ಮಾಹಿತಿಯನ್ನು ಒಳಗೊಂಡ ಪ್ರಮುಖ ಗ್ರಂಥವಾಗಿದೆ.

❖ ಡಾ. ಗಾಯತ್ರಿದೇವಿಯವರ "ಚೋಮನ ದುಡಿ ಮತ್ತು ಮಾದನಳ್ಳಿ ಕಾದಂಬರಿಗಳ ಸಮಾಜ ಸಾಂಸ್ಕೃತಿಕ ಅಧ್ಯಯನ" (೨೦೦೮) ಸಂಶೋಧನಾ ಕೃತಿಯಲ್ಲಿ ತಳ ಸಮುದಾಯದ ಜನರ ಜೀವನ, ರೀತಿ, ನೀತಿಗಳ ಕುರಿತು ವಿವರಗಳು ದೊರೆಯುತ್ತವೆ.

❖ ಕೇಶವ ಮೂರ್ತಿ ಕೆ. ಆರ್. ಅವರ "ದಲಿತ ಬಂಡಾಯ ಕಾದಂಬರಿಗಳಲ್ಲಿ ಶ್ರಮ ಸಂಸ್ಕೃತಿಯ ಎಚ್ಚರ ಹಾಗೂ ಪರ್ಯಾಯಗಳ ಹುಡುಕಾಟ" (೨೦೦೪) ಸಂಶೋಧನಾ ಕೃತಿಯಲ್ಲಿ ಪರ್ಯಾಯ ಸಂಸ್ಕೃತಿಯ ಹುಡುಕಾಟವು ಕಾದಂಬರಿಗಳಲ್ಲಿ ಹೇಗೆ ಮೂಡಿ ಬಂದಿದೆ ಎಂಬುದರ ಸ್ಥೂಲ ವಿವರಗಳಿವೆ.

❖ ಡಾ. ರಘುರಾಂ ಅವರ "ನವ್ಯೋತ್ತರ ಕಾದಂಬರಿಗಳು–ಒಂದು ಅಧ್ಯಯನ" (೨೦೦೫) ಸಂಶೋಧನಾ ಕೃತಿಯಲ್ಲಿ ದಲಿತ ಹಾಗೂ ಬಂಡಾಯ ಕಾಲಘಟ್ಟದ ಮನೋಧೋರಣೆಗಳೇನು? ಎಂಬುದನ್ನು ಕಾದಂಬರಿಗಳಲ್ಲಿ ಗುರುತಿಸಲು ಮಾಡಿದ ಸ್ಥೂಲ ವಿವರಗಳಿವೆ.

❖ ಡಾ. ಯಲ್ಲಟ್ಟಿ ಸುರೇಶ್‌ರ "ದೇವನೂರ ಮಹಾದೇವರ ಕಾದಂಬರಿಗಳು ಒಂದು ಅಧ್ಯಯನ" (೨೦೦೭) ಸಂಶೋಧನಾ ಕೃತಿಯಲ್ಲಿ ಅಸ್ಪೃಶ್ಯತೆ, ಜಾತೀಯತೆ, ಅಂತರ್ಜಾತೀಯ ವಿವಾಹದಂತಹ ಸಮಸ್ಯೆಗಳು, ದಲಿತರ ಲೈಂಗಿಕ ಶೋಷಣೆಯ ಸ್ವರೂಪದ ಸ್ಥೂಲವಾದ ವಿಶ್ಲೇಷಣೆಯಿದೆ. ಗ್ರಾಮೀಣ ನ್ಯಾಯ ವ್ಯವಸ್ಥೆ ಮತ್ತು ಆಧುನಿಕ ನ್ಯಾಯ ವ್ಯವಸ್ಥೆಗಳು ದಲಿತ ಸಮುದಾಯ ದೃಷ್ಟಿಯಿಂದ ಹೇಗಿದ್ದವು? ಎಂಬುದರ ವಿವರಗಳಿವೆ.

❖ ಡಾ. ಪಟ್ಟಣ ಶೆಟ್ಟಿ ಜಿ.ಜಿ ಅವರ "ಕನ್ನಡ ದಲಿತ ಕಾದಂಬರಿಗಳು" (೨೦೦೪) ಸಂಶೋಧನಾ ಕೃತಿಯಲ್ಲಿ ದಲಿತರ ಶಿಕ್ಷಣದ ಸಮಸ್ಯೆ, ವೃತ್ತಿ ಮತ್ತು ಆರ್ಥಿಕತೆಗಳಿಗೆ ಸಂಬಂಧಿಸಿದಂತೆ ಆ ಕಾಲದ ಲೇಖಕರ ಧೋರಣೆಗಳೇನಾಗಿದ್ದವು ಎಂಬುದರ ವಿವರಣೆಗಳು ದೊರೆಯುತ್ತವೆ.

- ಡಾ. ದಳವಾಯಿ ಕೆ. ಬಿ ಅವರ "ಕಥೆ ಕಾದಂಬರಿಗಳಲ್ಲಿ ಮುಸ್ಲಿಂ ಮಹಿಳಾ ಸಂವೇದನೆ" (೨೦೦೬) ಎಂಬ ಸಂಶೋಧನ ಕೃತಿಯಲ್ಲಿ ಸಾರಾ ಅಬೂಬಕರ್, ಫಕೀರ್ ಮಹಮ್ಮ ಕಟ್ಪಾಡಿ, ಬೊಳುವಾರು ಮಹಮ್ಮದ್ ಕುಂಞ ಮುಂತಾದ ಮುಸ್ಲಿಂ ಲೇಖಕರ ಇಸ್ಲಾಂ ಸಂವೇದನೆಗಳ ಕಾದಂಬರಿಗಳನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ. ವಿವಾಹ ವಿಚ್ಛೇದನ ಮತ್ತು ವಿಚ್ಛೇದಿತ ದಂಪತಿಗಳು ಒಂದುಗೂಡುವುದು ಬಹಳ ದೊಡ್ಡ ಮಾನವೀಯ ಸಮಸ್ಯೆಯಾಗುವುದು ಇವುಗಳ ಕುರಿತು ವಿವರಗಳಿವೆ.
- ಯು.ಆರ್. ಅನಂತ ಮೂರ್ತಿಯವರ "ಪಜ್ಞೆ ಮತ್ತು ಪರಿಸರ" (೨೦೦೪) ಕೃತಿಯಲ್ಲಿ ಪ್ರಕಟವಾದ ಕನ್ನಡ ಕಾದಂಬರಿಯ ಭವಿಷ್ಯ ಎಂಬ ಭಾಗದಲ್ಲಿ ಕಾನೂರು ಹೆಗ್ಗಡತಿ, ಕುಡಿಯರ ಕೂಸು ಕಾದಂಬರಿಗಳಲ್ಲಿ ಬರುವ ಸಂಸ್ಕೃತಿ ಚಿತ್ರಣದ ವಿವರಣೆಗಳಿವೆ.
- ಡಾ. ಬಿ. ದಾಮೋದರ ರಾವ್ ಅವರ "ಆಯಾಮ" (೧೯೯೨) ಕೃತಿಯಲ್ಲಿ ಕನ್ನಡ ಕಾದಂಬರಿಯ ಉಗಮದ ಸಾಂಸ್ಕೃತಿಕ ಹಿನ್ನಲೆ ಭಾಗದಲ್ಲಿ ಸಾರಸ್ವತ ಸಮಾಜದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ಥಿತಿ ವ್ಯಕ್ತವಾದ ಉಲ್ಲೇಖಗಳಿವೆ. ಇಂದಿರಾಬಾಯಿ, ವಾಗ್ದೇವಿ, ಮಾಡಿದುಣ್ಣೋ ಮಾಹಾರಾಯ ಕಾದಂಬರಿಗಳಲ್ಲಿ ಮೂಡಿ ಬಂದ ಸಾಂಸ್ಕೃತಿಕ ಚಿತ್ರಣದ ವಿವರಗಳಿವೆ.
- ಡಾ. ತೀ.ನಂ. ಶಂಕರನಾರಾಯಣರ ಪ್ರಧಾನ ಸಂಪಾದನಾ ಕೃತಿ "ಆಧುನಿಕತೆ ಮತ್ತು ಕನ್ನಡ ಕಾದಂಬರಿ" (೨೦೧೦) ಕೃತಿಯಲ್ಲಿ ಆಧುನಿಕತೆ ಮತ್ತು ನವೋದಯ ಪೂರ್ವ ಕಾದಂಬರಿ, ಆಧುನಿಕತೆ ಮತ್ತು ನವೋದಯ ಕಾದಂಬರಿ, ಆಧುನಿಕತೆ ಮತ್ತು ಪ್ರಗತಿಶೀಲ ಕಾದಂಬರಿ, ನವ್ಯ ಕಾದಂಬರಿ ಮತ್ತು ಬಂಡಾಯ ಕಾದಂಬರಿಗಳಲ್ಲಿನ ಸಂಸ್ಕೃತಿ ಚಿತ್ರಣಗಳ ವಿವರಗಳಿವೆ.
- ಎಚ್.ಎಸ್. ವೆಂಕಟೇಶ ಮೂರ್ತಿಯವರ ಪ್ರಧಾನ ಸಂಪಾದಕತ್ವದಲ್ಲಿ ರಚನೆಯಾದ "ಡಾ. ಎಸ್.ಎಲ್. ಭೈರಪ್ಪನವರ ಕಾದಂಬರಿಗಳಲ್ಲಿ ಧರ್ಮ ಮತ್ತು ಸಂಸ್ಕೃತಿ" (೨೦೧೧) ಕೃತಿಯು ಹಲವು ಪ್ರಮುಖ ಲೇಖನಗನನ್ನು ಒಳಗೊಂಡಿದೆ. ಅನಂತ ಕಲ್ಲೋಳ ಅವರ ಲೇಖನ 'ಆವರಣದಲ್ಲಿ ಧರ್ಮ ಮತ್ತು ಸಂಸ್ಕೃತಿ' ಭಾಗದಲ್ಲಿ ಆವರಣ ಕಾದಂಬರಿಯಲ್ಲಿ ಚಿತ್ರಿತವಾದ ಸಂಸ್ಕೃತಿಯ ವಿವರವಾದ ಮಾಹಿತಿಗಳನ್ನು ನೀಡಿದ್ದಾರೆ.
- ಡಾ.ಪಾ.ನ. ಮಯ್ಯ ಅವರ "ದಾಟುವಿನಲ್ಲಿ ಪ್ರತಿರೋಧ ಸಂಸ್ಕೃತಿಯ ವಿಭಿನ್ನ ನೆಲೆಗಳು" ಎಂಬ ಲೇಖನದಲ್ಲಿ ಪ್ರತಿರೋಧ ಸಂಸ್ಕೃತಿಗೆ ಹಿನ್ನಡೆಯಾಗುವ ವಿವಿಧ ಘಟನೆಗಳು ದಾಟುವಿನಲ್ಲಿ ಮೇಲಿಂದ ಮೇಲೆ ಸಂಭವಿಸುವ ವಿವರಣೆಗಳಿವೆ.
- ಜಿ.ಎಸ್. ಅಮೂರ ಅವರ "ಕನ್ನಡ ಕಥನ ಸಾಹಿತ್ಯ: ಕಾದಂಬರಿ" (೨೦೦೬) ಕೃತಿಯಲ್ಲಿ ಕುವೆಂಪು ಕಾದಂಬರಿಗಳಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ, ದೇವನೂರರ ಕೃತಿಗಳಲ್ಲಿ ಪ್ರತಿಭಟನೆಯ ಸ್ವರೂಪ, ಮಹಿಳಾ ಕಾದಂಬರಿಯ ಹೊಸ ಮಾದರಿಗಳು ಎಂಬ ವಿಷಯದ ಕುರಿತು ದೀರ್ಘವಾದ ವಿವರಗಳಿವೆ.

- ಡಾ. ಪುರುಷೋತ್ತಮ ಬಿಳಿಮಲೆಯವರ "ಬಂಡಾಯ ದಲಿತ ಸಾಹಿತ್ಯ" (೧೯೯೦) ಕೃತಿಯಲ್ಲಿ ಬರಗೂರರ ಕಾದಂಬರಿಗಳಲ್ಲಿ ಸಂಸ್ಕೃತಿ ಚಿತ್ರಣದ ಸ್ಥೂಲವಾದ ವಿವರಗಳಿವೆ.
- ಬರಗೂರರ "ಒಂದು ಊರಿನ ಕಥೆ"ಯಲ್ಲಿ ಗೌಡರು, ಜೋಯಿಸರು, ಹಣವಂತನಾದ ಬಸವಯ್ಯ– ಇವರು ಊರಿನ ಶೋಷಣೆ ಮಾಡುತ್ತಾರೆ. ಸ್ಥೂಲವಾಗಿ ಇದು ಜಾತಿ, ಪುರೋಹಿತಶಾಹಿ ಮತ್ತು ಆರ್ಥಿಕತೆಗಳ ಒಗ್ಗಟ್ಟನ್ನು ಸಂಕೇತಿಸುತ್ತದೆ. ಹಟ್ಟಿಯ ಹನುಮ ಪುಟ್ಟಿ, ರಾಮ ಮತ್ತು ಗೌರಿಯರು ಕಥೆಗೆ ಜಾತಿಯ ಆಯಾಮವನ್ನು ಸೇರ್ಪಡೆಗೊಳಿಸಿದ ವಿವರಗಳು ಸಿಗುತ್ತಾ ಹೋಗುತ್ತವೆ.
- ಹೊರೆಯಾಲ ದೊರೆ ಸ್ವಾಮಿಯವರ "ಕಳೆ" (೧೯೭೮) ಎಂಬ ಚಿಕ್ಕ ಕಾದಂಬರಿಯು ನಿಸ್ಸಾಯಕ ನೋವಿನಿಂದ ಒಳಗೊಳಗೇ ಕೊರಗಿ ಕ್ಷಣದಿಂದ ಕ್ಷಣಕ್ಕೆ ಸಾಯುತ್ತಾ ಹೋಗುವ ಜೀತಗಾರರ ಬದುಕಿನ ದಾರುಣ ಚಿತ್ರವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ನಮ್ಮ ಮುಂದಿಡುತ್ತಾರೆ ಎಂಬ ವಿವರಗಳು ದೊರೆಯುತ್ತವೆ.
- ಜಿ.ಎಸ್. ಭಟ್ಟರ ಪ್ರಧಾನ ಸಂಪಾದಕತ್ವದಲ್ಲಿ ರಚನೆಯಾದ "ದಲಿತ ಸಾಹಿತ್ಯ" ಕೃತಿಯಲ್ಲಿ ದಲಿತ ಕಾದಂಬರಿಗಳ ಕುರಿತಂತೆ ವಿವರವಾದ, ವಿಸ್ತೃತವಾದ ಮಾಹಿತಿಗಳಿವೆ. ದಲಿತ ಸಾಹಿತ್ಯದ ಕುರಿತು ಅಧ್ಯಯನ ನಡೆಸಿದ್ದಾರೆ. ದಲಿತ ಚಳುವಳಿ ಭಾಷೆ ಸಾಹಿತ್ಯ ಸಂಸ್ಕೃತಿಗೆ ವಿಶೇಷ ಮಹತ್ವ ನೀಡಿದ ಪ್ರಮುಖ ಕೃತಿಯಾಗಿದೆ.
- ಡಾ. ಎನ್. ಇಸ್ಮಾಯಿಲ್ ರವರ "ಕನ್ನಡ ಸಾಹಿತ್ಯದಲ್ಲಿ ಪ್ರತಿ ಬಿಂಬಿತವಾದ ಇಸ್ಲಾಂ ಸಂಸ್ಕೃತಿ" (೨೦೦೯) ಎಂಬ ಕೃತಿಯಲ್ಲಿ ಇಸ್ಲಾಂ ಸಂಸ್ಕೃತಿಯ ಕುರಿತ ಹಾಗೆ ವಿವರವಾದ ವಿಸ್ತೃತವಾದ ಮಾಹಿತಿಗಳಿವೆ. ಇಸ್ಲಾಂ ಸಂಸ್ಕೃತಿಯನ್ನು ಪ್ರಧಾನವಾಗಿ ಕತೆ, ಕಾದಂಬರಿ ಮೊದಲಾದ ಪ್ರಕಾರಗಳಲ್ಲಿ ಚರ್ಚಿಸುವ ವಿವರಗಳಿವೆ. ಇಸ್ಲಾಮೇತರ ಲೇಖಕರ ಕಾದಂಬರಿಗಳಲ್ಲಿ ಇಸ್ಲಾಂ ಸಂಸ್ಕೃತಿಯನ್ನು ಚಿತ್ರಿಸುವ ವಿವರಗಳು ದೊರೆಯುತ್ತವೆ.
- ಅರವಿಂದ ಮಾಲಗತ್ತಿಯವರ "ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನ" (೧೯೮೮) ಕೃತಿಯು ಬಂಡಾಯ ಮತ್ತು ದಲಿತ ಚಳುವಳಿ ಮತ್ತು ಸಾಹಿತ್ಯದ ಕುರಿತು ಅಧ್ಯಯನ ಮಾಡುವವರಿಗೆ ಮಾರ್ಗದರ್ಶಿ ಕೈಪಿಡಿಗಳ ಹಾಗೆ ಕೆಲಸ ಮಾಡುತ್ತದೆ.
- ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿಗಳು (ವಿವಿಧ ಲೇಖಕರು) (೧೯೯೩) ಎಂಬ ಕೃತಿಯಲ್ಲಿ ನವೋದಯದಿಂದ ಬಂಡಾಯ, ದಲಿತ ಕಾಲಘಟ್ಟದವರೆಗಿನ ಕೆಲವು ಪ್ರಾತಿನಿಧಿಕ ಕೃತಿಗಳ ಹಿನ್ನೆಯಲ್ಲಿ ವಿವರಗಳು ದೊರೆಯುತ್ತವೆ.
- ಅರವಿಂದ ಮಾಲಗತ್ತಿಯವರ ಸಂಪಾದನಾ ಕೃತಿ "ನಾಲ್ಕು ದಲಿತೀಯ ಕಾದಂಬರಿಗಳು" (೧೯೯೧) ಕೃತಿಯಲ್ಲಿ ಒಡಲಾಳ, ಮಾಗಿ, ಕಾರ್ಯ ಮತ್ತು ಕುಸುಮಬಾಲೆ ಕಾದಂಬರಿಗಳ ವಿಮರ್ಶೆಗಳು ದೊರೆಯುತ್ತವೆ.

❖ ಸಬಿಹಾ ಭೂಮಿಗೌಡರ ಸಂಪಾದನಾ ಕೃತಿ “ಕಾರ್ಯ ವಿಮರ್ಶಾ ಲೋಕ” (೧೯೯೧) ಕೃತಿಯಲ್ಲಿ ಕಾರ್ಯ ಕಾದಂಬರಿಯ ಕುರಿತಂತೆ ವಿವಿಧ ಲೇಖಕರ ವಿಮರ್ಶೆಗಳು ಒಂದೆಡೆ ದೊರೆಯುತ್ತವೆ.

ಅಧ್ಯಾಯ ೨

ಸಂಸ್ಕೃತಿ ಪರಿಕಲ್ಪನೆ:

‘ಸಂಸ್ಕೃತಿ’ ಪರಿಕಲ್ಪನೆಯ ಕುರಿತು ಈಗಾಗಲೇ ಬೇರೆ ಬೇರೆ ರೀತಿಯ ಚರ್ಚೆಗಳು, ವ್ಯಾಖ್ಯಾನಗಳು ಬಹಳ ಕುತೂಹಲಕಾರಿಯಾಗಿ ನಡೆದಿವೆ, ನಡೆಯುತ್ತಿವೆ. ಹಾಗೆಯೇ ಸಹಜವಾಗಿ ಕನ್ನಡದಲ್ಲೂ ನಡೆದಿದೆ. ಬೇರೆ ಬೇರೆ ಅಧ್ಯಯನ ಶಿಸ್ತುಗಳಲ್ಲೂ ‘ಸಂಸ್ಕೃತಿ’ಯ ಬಗ್ಗೆ ಸುದೀರ್ಘವಾದ ವಾದಗಳು, ವಿಚಾರ ವಿಮರ್ಶೆಗಳು ನಡೆದಿವೆ, ನಡೆಯುತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ‘ಸಂಸ್ಕೃತಿ’ ಎಂಬ ಪರಿಕಲ್ಪನೆಯನ್ನು ನಿರ್ಮಿಸಿರುವ ಮತ್ತು ನಿರ್ವಹಿಸಿರುವ ಶ್ರಮ ಸಂಸ್ಕೃತಿ ಪದಕ್ಕೆ ದಕ್ಕಿರುವ ಅರ್ಥದ ವ್ಯಾಪ್ತಿಗಳು, ಅದರ ಗುಣಲಕ್ಷಣಗಳು ಹಾಗೂ ಅದರ ಸಾಮರ್ಥ್ಯದ ಕುರಿತಂತೆ ನಡೆಯುತ್ತಿರುವ ತೀವ್ರವಾದ ವಿವಾದಗಳು ಅದನ್ನು ಬಹಳ ಸಮಸ್ಯಾತ್ಮಕವಾದ ಪರಿಕಲ್ಪನೆಯನ್ನಾಗಿ ಪರಿವರ್ತಿಸಿವೆ. ಇದು ಸಮಸ್ಯಾತ್ಮಕವಾದುದಕ್ಕೆ ಭಿನ್ನ ಭಿನ್ನವಾದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕಾರಣಗಳಿವೆ. ಇಂಥ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿಯ ಸ್ವರೂಪವನ್ನು ಗ್ರಹಿಸುವಲ್ಲಿ ಕೆಲವು ತೊಡಕುಗಳಿವೆ. ಜಾಗತಿಕ ಪ್ರಭಾವಗಳು ಮತ್ತು ರಾಷ್ಟ್ರೀಯ ಪ್ರಭಾವಗಳಿಂದ ಬಿಡಿಸಿಕೊಂಡು ಕನ್ನಡ ಸಂಸ್ಕೃತಿಯ ವಿಶಿಷ್ಟ ಗುಣಲಕ್ಷಣಗಳನ್ನು ಗುರುತಿಸುವುದು ಸಮಕಾಲೀನ ಸಂದರ್ಭಕ್ಕೆ ತೀರಾ ಅಗತ್ಯವಾಗಿದೆ.

ಪ್ರಾರಂಭಿಕ ದಿನಗಳಲ್ಲಿ ‘ಸಂಸ್ಕೃತಿ’ ಪದ ನಾನಾ ರೀತಿಯಲ್ಲಿ ಚರ್ಚೆಗೊಳಲಾಗುತ್ತಿದ್ದು ಹೊಸ ಹೊಸ ಆಯಾಮಗಳನ್ನು ಪಡೆದುಕೊಂಡಿರುವುದನ್ನು ಗುರುತಿಸಲಾಗಿದೆ. ಆರಂಭಿಕ ಹಂತದಲ್ಲಿ ಕೇವಲ ‘ಸಂಸ್ಕೃತಿ’ ಪದದ ಅರ್ಥ ವಿಶ್ಲೇಷಣೆಗಳ ಚರ್ಚೆಯಷ್ಟೇ ನಡೆದಿದ್ದು ಸಾಹಿತ್ಯಕ ರೂಪಾಂತರಗಳಾದಂತೆ ಸಂಸ್ಕೃತಿಯ ಚರ್ಚೆ ಹೊಸ ದಿಕ್ಕಿನತ್ತ ಚಲಿಸಿರುವುದನ್ನು ಗುರುತಿಸಿರುತ್ತೇನೆ. ದಲಿತ ಬಂಡಾಯ ಸಾಹಿತ್ಯದ ಹುಟ್ಟಿನ ನಂತರ ‘ಸಂಸ್ಕೃತಿ’ ಪದ ಹೊಸ ಹೊಸ ವ್ಯಾಖ್ಯಾನಗಳನ್ನು ಪಡೆಯಲಾರಂಭಿಸಿತು. ಬಹುಸಂಖ್ಯಾತ ಸಮುದಾಯಗಳನ್ನು ‘ಸಂಸ್ಕೃತಿ’ ವ್ಯಾಪ್ತಿಯಲ್ಲಿ ಚರ್ಚಿಸದೆ ಹೋದದ್ದು ಇಂದಿನ ಸಂಸ್ಕೃತಿಯ ವ್ಯಾಖ್ಯಾನ ಬದಲಾಗಲು ಕಾರಣವಾಗಿದೆ.

ಶ್ರಮಸಂಸ್ಕೃತಿಯನ್ನು ನೆಚ್ಚಿಕೊಂಡ ಎಲ್ಲಾ ಜನ ಸಮುದಾಯಗಳನ್ನು ಅನಾಗರಿಕ ಪಟ್ಟಿಯಲ್ಲಿ ಸೇರಿಸಿ ಅಧ್ಯಯನಕ್ಕೆ ಒಳಪಡಿಸಲಾದ ಸಾಂಸ್ಕೃತಿಕ ಚರಿತ್ರೆಯನ್ನು ಪ್ರಶ್ನಿಸುತ್ತಿರುವುದು ಭಾರತೀಯ ಸಂಸ್ಕೃತಿಯ ಬಹುರೂಪಕ್ಕೆ ಕಾರಣರಾದ ಜನಾಂಗದ ಸಂಸ್ಕೃತಿ ದಾಖಲಾಗುವ ಅಗತ್ಯತೆಯನ್ನು ಇಂದು ಸಾಂಸ್ಕೃತಿಕ ಅಧ್ಯಯನ ಒತ್ತಿ ಹೇಳುತ್ತದೆ. ಈ ನಿಟ್ಟಿನಲ್ಲಿ ವಿವಿಧ ವಿದ್ವಾಂಸರು ಆಳವಾದ ಅಧ್ಯಯನ ನಡೆಸಿ 'ಸಂಸ್ಕೃತಿ' ಪದಕ್ಕೆ ಬಹು ಅರ್ಥಗಳನ್ನು ಕಲ್ಪಿಸಿದ್ದಾರೆ. ಬೇರೆ ಬೇರೆ ರೀತಿಯಲ್ಲಿ 'ಸಂಸ್ಕೃತಿ' ಪದ ಬಳಕೆ ಮಾಡುತ್ತಿದ್ದಾರೆ.

ಈ ಅಧ್ಯಾಯದಲ್ಲಿ 'ಸಂಸ್ಕೃತಿ'ಯ ಕುರಿತು ಭಾರತೀಯ ಕಲ್ಪನೆ ಏನಿತ್ತು ಎಂಬುದನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ 'ಸಂಸ್ಕೃತಿ' ಪದದ ಕುರಿತು ದೇಸೀ, ವಿದೇಶಿ ವಿದ್ವಾಂಸರ ಜೀವನ ವಿಧಾನವನ್ನು ಆಧರಿಸಿ ಮತ್ತು ವ್ಯಕ್ತಿ ಮೇಲೆ ಚರ್ಚಿಸಲಾಗಿದೆ. 'ಸಂಸ್ಕೃತಿ' ಪದ ಬಳಕೆಯ ಕುರಿತು ಚರ್ಚಿಸುವ ಮುನ್ನ 'ಸಂಸ್ಕೃತಿ' ಪದದ ಅರ್ಥವನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ. 'ಸಂಸ್ಕೃತಿ' ಪದವು ಇಂಗ್ಲಿಷ್ ನ 'ಕಲ್ಚರ್' ಎಂಬುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತಿದೆ.

ಸಂಸ್ಕೃತಿ ಪದದ ಅರ್ಥ : 'ಸಂಸ್ಕೃತಿ' ಎಂಬ ಪದ ಬಳಕೆಗೆ ಬಂದದ್ದು ಇತ್ತೀಚೆಗೆ. 'ಸಂಸ್ಕೃತಿ' ಶಬ್ದವನ್ನು ಇಂಗ್ಲೀಷ್‌ನ 'culture' ಎಂಬುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತಿದೆ. ಈ ಮಾತು ನಮಗೆ ಹೊಸತು. ಆದರೆ ಇದರ ಹಿಂದಿರುವ ಅರ್ಥ ಹೊಸದಲ್ಲ. 'culture' ಎಂಬ ಮೂಲ ಪದ 'cult' ಅಥವಾ 'cults' ಎಂಬುದು. ಗೌರವಿಸು, ಆರಾಧಿಸು, ಸೇವೆಮಾಡು ಮೊದಲಾದ ಅರ್ಥಗಳನ್ನು ಕೊಡುತ್ತದೆ. ದೈವಭಕ್ತಿ ಎಂಬ ಅರ್ಥವನ್ನು ಒಂದು ಕಡೆ ಇದು ಪಡೆದರೆ, ಇನ್ನೊಂದು ಕಡೆ ಭೂದೇವಿಯ ಆರಾಧನೆ ಎಂದರೆ 'ಕೃಷಿ' ಎಂಬ ಅರ್ಥವನ್ನು ಪಡೆಯಿತು ಎನ್ನುವಲ್ಲಿ 'ಸಂಸ್ಕೃತಿ' ಪದದ ಅರ್ಥ ಪ್ರಾಚೀನ ಕಲ್ಪನೆಯಾಗಿದ್ದರೂ ಪದ ಬಳಕೆ ಇತ್ತೀಚಿನದೆಂದು ತಿಳಿದು ಬರುತ್ತದೆ. 'ಸಂಸ್ಕೃತಿ' ಪದದ ಕುರಿತು ಅನೇಕ ವಿದ್ವಾಂಸರು ತಮ್ಮದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ಕುರಿತು ಚರ್ಚಿಸಿದ ವಿವರಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

'ಸಂಸ್ಕೃತಿ' ಪರಿಕಲ್ಪನೆ ಕುರಿತು ಈಗಾಗಲೇ ಸಾಕಷ್ಟು ಚರ್ಚೆಗಳಾಗಿವೆ. 'ಸಂಸ್ಕೃತಿ' ಬಹುರೂಪಿಯಾದದ್ದು. ಇಂಥ ಬಹುರೂಪಿ ಸಂಸ್ಕೃತಿ ಅರ್ಥದ ಜೊತೆಗೆ ಪದ ಬಳಕೆಯ ಚರ್ಚೆ ಮುಖ್ಯವಾಗಿ ಸಂಸ್ಕೃತಿಯು ವ್ಯಕ್ತಿ ನೆಲೆಯಲ್ಲಿ, ಜನಾಂಗದ ನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ, ಭಾಷಿಕ ನೆಲೆಯಲ್ಲಿ ಹೀಗೆ ಬಹುಮುಖವಾಗಿ ರೂಪುಗೊಂಡಿದೆ. ಒಬ್ಬ ವ್ಯಕ್ತಿಯ ನಡೆ ನುಡಿಗೂ, ಮತ್ತೊಬ್ಬ ವ್ಯಕ್ತಿಯ ನಡೆ ನುಡಿಗೂ ವ್ಯತ್ಯಾಸವಿದ್ದಂತೆ ಒಂದು ಜನಾಂಗದ ನಂಬಿಕೆ, ಆಚರಣೆ, ನಡೆ–ನುಡಿಗೂ, ಮತ್ತೊಂದು ಜನಾಂಗದ ಆಚಾರ, ವಿಚಾರ, ನಡೆ– ನುಡಿಗಳಿಗೂ ವ್ಯತ್ಯಾಸಗಳಿವೆ. ಹಾಗೆ ಒಬ್ಬ ವ್ಯಕ್ತಿಯ ಒಂದೊಂದು ಜನಾಂಗದ ಸಂಸ್ಕೃತಿಗೂ ಮತ್ತೊಬ್ಬ ವ್ಯಕ್ತಿಯ ಮತ್ತೊಂದು ಜನಾಂಗದ ಸಂಸ್ಕೃತಿಗೂ ವ್ಯತ್ಯಾಸಗಳಿವೆ. ಭಾರತದ ಸಂದರ್ಭದಲ್ಲಿ ಹೇಳುವುದಾದರೆ ಬಹುಭಾಷೆಯ ಬಹು ಜನಾಂಗದ ಬಹು ಜಾತಿಯ ದೇಶವಾಗಿರುವ ಇಲ್ಲಿ ಬಹು ಸಂಸ್ಕೃತಿಯನ್ನು ಕಾಣುತ್ತೇವೆ. ಅದೇ ರೀತಿ ಜಾತಿ ಉಪಜಾತಿಗಳಿಗೆ ಅನುಗುಣವಾಗಿ ಅನೇಕ ಸಾಂಸ್ಕೃತಿಕ ಭಿನ್ನತೆಗಳನ್ನು ಕಾಣುತ್ತೇವೆ. ಈ ರೀತಿ ಸಾಂಸ್ಕೃತಿಕ ಭಿನ್ನತೆಗಳೊಂದಿಗೆ ಈ ನಾಡಿನಲ್ಲಿ ಬಹುಸಂಸ್ಕೃತಿ ಅಸ್ತಿತ್ವದಲ್ಲಿದ್ದರೂ, ಸಂಸ್ಕೃತಿಯನ್ನು ಏಕಮುಖದಲ್ಲಿ

ಅರ್ಥೈಸುವುದರ ಮೂಲಕ ಅನೇಕ ಸಂಸ್ಕೃತಿಗಳನ್ನು ನಿರ್ಲಕ್ಷಿಸುತ್ತಾ ಬಂದಿರುವುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಭಾರತದಲ್ಲಿ ಕೆಲವು ಸಮುದಾಯಗಳಲ್ಲಿ ಸಾಮ್ಯತೆ ಕಂಡರೂ ವೈವಿದ್ಯತೆಗಳನ್ನು ಕಾಣುತ್ತೇವೆ. ವೈವಿಧ್ಯಮಯ ಸಂಸ್ಕೃತಿಯನ್ನೊಳಗೊಂಡಿರುವ ಭಾರತದ ಸಂಸ್ಕೃತಿಯನ್ನು ಹಿಂದೂ ಸಂಸ್ಕೃತಿ, ಸಮನ್ವಯ ಸಂಸ್ಕೃತಿ ಎಂಬಿತ್ಯಾದಿಯಾಗಿ ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಆದರೆ ಭಾರತದಲ್ಲಿನ ಒಟ್ಟು ಜನಾಂಗವನ್ನು ಇಡಿಯಾಗಿ ಪ್ರತಿನಿಧಿಸುವ 'ಸಂಸ್ಕೃತಿ' ರೂಪಿತವಾಗಿಲ್ಲ. ಇದಕ್ಕೆ ಪ್ರಧಾನ ಸಂಸ್ಕೃತಿಯ ದಮನಕಾರಿ ನಿಲುಗಡೆ ಕಾರಣವಾಗಿವೆ. ಅದೇ ರೀತಿ ಇತ್ತೀಚಿನವರೆಗೆ ನಡೆದ ಸಾಂಸ್ಕೃತಿಕ ಅಧ್ಯಯನಗಳು ಪ್ರಧಾನ ಸಂಸ್ಕೃತಿಯ ಏಕಮುಖ ಧೋರಣೆಗೆ ಬದ್ಧವಾಗಿರುವುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

೨.೨ ಸಂಸ್ಕೃತಿಯ ಸ್ವರೂಪ ಉದ್ದೇಶ ಮತ್ತು ವ್ಯಾಪ್ತಿ:

'culture' ಶಬ್ದವು ಇಂಗ್ಲಿಷ್‌ನಲ್ಲಿ ಅದರ ಈಗಿನ ಅರ್ಥದಲ್ಲಿ ಹೆಚ್ಚಾಗಿ ಪ್ರಯೋಗವಾಗುತ್ತಿರುವುದು ಸುಮಾರು ನೂರ ಹತ್ತು ವರ್ಷಗಳಿಂದೀಚೆಗೆ. ಈ ಪದಕ್ಕೆ ಇದುವರೆಗೆ ಸ್ಪಷ್ಟವಾದ, ಖಚಿತವಾದ, ನಿರ್ದಿಷ್ಟವಾದ ಅರ್ಥವನ್ನು ನೀಡಲು ಸಾಧ್ಯವಾಗಿಲ್ಲ. ಇದರ ಜೊತೆಗೆ ಡಿ.ವಿ.ಜಿ.ಯವರು ಹೀಗೆ ಹೇಳುತ್ತಾರೆ 'ಸಂಸ್ಕೃತಿ' ಶಬ್ದವು ಅರ್ಥವಿಲ್ಲವೆಂದು ಯಾರೂ ಹೇಳರು. ಅದು ಅರ್ಥವುಳ್ಳದ್ದು ಮಾತ್ರವಲ್ಲ, ಅದರ ಅರ್ಥ ವಿಶಾಲವಾದುದು, ಬಹುಮುಖವಾದುದು ಮತ್ತು ನಮ್ಮ ಜೀವನಕ್ಕೆ ಮುಖ್ಯವಾದುದು. ಯಾವ ಅಧಿಕಾರ ಪತ್ರವಾಗಲಿ, ಪ್ರಮಾಣ ಭೂತವಾದ ನಿಘಂಟಾಗಲಿ ಅದಕ್ಕೆ ಅರ್ಥವಿವರಣೆ ಕೊಡದಿದ್ದರೂ ವಿದ್ವಜ್ಜನರ ಪ್ರಯೋಗದಿಂದ ಆ ಮಾತಿನ ಅರ್ಥವನ್ನು ನಮ್ಮ ಮನುಸ್ಸುಗಳಿಗೆ ವಶಪಡಿಸಿಕೊಳ್ಳಬಹುದಾಗಿದೆ. ನಮಗೆ ಅತ್ಯಂತ ಸಾರವತ್ತಾಗಿ ನಮ್ಮ ಅನುದಿನದ ಉಪಯೋಗದಲ್ಲಿರುವ ಎಷ್ಟೋ ಪದಗಳಿಗೆ ಅರ್ಥ ಸೂತ್ರವನ್ನು ಹೇಳುವುದು ಸುಲಭವಲ್ಲ. ಮನುಷ್ಯ ಎಂದರೇನು? ಧರ್ಮ ಎಂದರೇನು? ಇಂಥ ಪ್ರಶ್ನೆಗಳು ಕೇಳಲಿಕ್ಕೆ ಎಷ್ಟು ಸುಲಭವೋ ಉತ್ತರ ಹೇಳಲಿಕ್ಕೆ ಅಷ್ಟು ಸುಲಭವಲ್ಲ. ಮನುಷ್ಯ ಪ್ರಾಣಿಯನ್ನು ಗುರುತಿಸಬಲ್ಲನು, ಬೆರಳಿನಿಂದ ತೋರಿಸಬಲ್ಲನು, ಆದರೆ ಮಾತಿನಿಂದ ಲಕ್ಷಣ ವಿವರಣೆ ಕೊಡುವುದು ಕಷ್ಟ. ಆದರೂ ಉತ್ತರಗಳುಂಟು. ಅವುಗಳನ್ನು ಕಂಡುಕೊಳ್ಳುವುದು ಪರಿಶ್ರಮದಿಂದ ಸಾಧ್ಯ". (ಡಿ.ವಿ.ಜಿ. ೧೯೮೫, ಪುಟ ೯–೧೦) ಎಂದರೆ 'ಸಂಸ್ಕೃತಿ' ಎಂಬ ಶಬ್ದದ ಅರ್ಥ ನೇರವಾಗಿ ಹೊಳೆಯುವುದಿಲ್ಲ. ಅದು ಇಕ್ಕಟ್ಟಿನದಾಗಿದೆ ಎಂಬುದು ಅವರ ಅಭಿಪ್ರಾಯವಾಗಿದೆ.

ವಿದ್ಯಾ ಪ್ರಭಾವವನ್ನಾಗಲೀ, ಸಾಹಿತ್ಯ ಮಹಿಮೆಯನ್ನಾಗಲೀ ಸಭ್ಯ ಜನರ ಗುಣಗಳನ್ನಾಗಲೀ ಕುರಿತು ಹೇಳುವ ಸಂದರ್ಭದಲ್ಲಿ 'ಸಂಸ್ಕೃತಿ' ಎಂಬ ಪದವನ್ನು ವಿಶೇಷವಾಗಿ ಬಳಸಲಾಗುತ್ತದೆ. ಈ ಮಾತು ತುಂಬಾ ಪೂರ್ವದಲ್ಲಿ ಬಳಕೆಯಾಗುವಂತಿಲ್ಲ. ಪುರಾತನ ಗ್ರಂಥಗಳಲ್ಲಿಯೂ ಈ ರೀತಿ ಪದ ಪ್ರಯೋಗ ಕಂಡುಬರುವುದಿಲ್ಲ. ಆದರೆ ಇದಕ್ಕೆ ಸಂವಾದಿಯಾಗಿ 'ಸಂಸ್ಕೃತಿ'ಎಂಬ ಪದವನ್ನು ಪೂರ್ವದಲ್ಲಿ ಬಳಸಲಾಗಿದೆ. ಉದಾಹರಣೆಗೆ ಷೋಡಶ ಸಂಸ್ಕಾರಗಳು, ಬುದ್ಧಿ ಸಂಸ್ಕಾರ ಇತ್ಯಾದಿ. ಸಂಸ್ಕಾರಗೊಂಡ ಭಾಷೆ ಸಂಸ್ಕೃತ. ಹಾಗೆಯೇ ಒಳ್ಳೆಯ ವಿದ್ಯಾ ಸಂಸ್ಕಾರ ಹೊಂದಿದ ಮನುಷ್ಯನನ್ನು ಸುಸಂಸ್ಕೃತನು ಎಂದು ಕರೆಯುವುದು ವಾಡಿಕೆಯಾಗಿತ್ತು.

ಇಡೀ ಜಗತ್ತಿನಾದ್ಯಂತ ಸಂಸ್ಕೃತಿ ಒಂದೇ ರೀತಿಯಲ್ಲಿ ಗೋಚರಿಸುವುದಿಲ್ಲ. ಭಿನ್ನ ಭಿನ್ನ ಪ್ರದೇಶಗಳು ಬೇರೆ ಬೇರೆ ಭಾಷೆಗಳು ಹಾಗೂ ಜನಾಂಗಗಳಿರುವಾಗ ಅದಕ್ಕನುಗುಣವಾಗಿಯೇ ಸಂಸ್ಕೃತಿಗಳು ರೂಪುಗೊಂಡ ಕಾಲ, ದೇಶ ಮತ್ತು ಪರಿಸ್ಥಿತಿಗಳಿಗೆ ಅನುಗುಣವಾಗಿ ನಿರಂತರವಾಗಿ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಈ ಸಮಾಜಕ್ಕೆ ಹೇಗೆ ಒಂದು ಚಲನಶೀಲತೆ ಇದೆಯೋ ಹಾಗೆ ಸಂಸ್ಕೃತಿಗೂ ಒಂದು ಚಲನಶೀಲತೆಯಿದೆ. ಆದರೆ ಸಮಾಜ ಬದಲಾದಷ್ಟು ವೇಗವಾಗಿ ಸಂಸ್ಕೃತಿ ಬದಲಾವಣೆಗೆ ಒಳಗಾಗುವುದಿಲ್ಲ. ಹೊಸದರ ಜೊತೆಯಲ್ಲಿ ಘರ್ಷಿಸುತ್ತಲೇ, ಹಳೆಯದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿರುತ್ತದೆ.

ಜಗತ್ತಿನಾದ್ಯಂತ ಕಂಡುಬರುವ ಸಂಸ್ಕೃತಿಗಳಲ್ಲಿ ವೈವಿಧ್ಯತೆಯಿದೆ. ಒಂದೇ ರೀತಿಯ ಸಂಸ್ಕೃತಿಗಳಿಲ್ಲ. ಇರುವುದಕ್ಕೆ ಸಾಧ್ಯವೂ ಇಲ್ಲ. ಅನೇಕ ಸಂಸ್ಕೃತಿಗಳಲ್ಲಿ ಸಾಮ್ಯತೆಗಳು ಕಂಡು ಬಂದರೂ ಅವುಗಳಲ್ಲಿಯೂ ವೈವಿಧ್ಯತೆ ಇರುತ್ತದೆ. ಗೂಬೆ ಕೂಗಿದರೆ, ಕಂಡರೆ ಭಾರತೀಯರಿಗೆ ಅಪಶಕುನ. ಆದರೆ ಪಾಶ್ಚಾತ್ಯರಿಗೆ ಗೂಬೆ ಬುದ್ಧಿವಂತಿಕೆಯ ಸಂಕೇತ. ಹಚ್ಚೆ ಹಾಕಿಸಿಕೊಳ್ಳುವುದು ಅನೇಕ ಸಂಸ್ಕೃತಿಗಳಲ್ಲಿ ಶುಭದ ಸಂಕೇತವಾದರೆ, ಕೆಲವು ಸಂಸ್ಕೃತಿಗಳಲ್ಲಿ ಅದು ನಿಷಿದ್ಧ. ಸಂಸ್ಕೃತಿಗಳಲ್ಲಿ ಒಂದು ಶ್ರೇಷ್ಠ ಇನ್ನೊಂದು ಕನಿಷ್ಠವೆಂಬ ತಾರತಮ್ಯ ಮಾಡಬಾರದು. ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿದ ದೇಶ ಅಥವಾ ಜನಾಂಗಗಳವರು ನಮ್ಮ ಸಂಸ್ಕೃತಿಯೇ ಶ್ರೇಷ್ಠ ಎಂಬ ಭಾವನೆಯನ್ನು ತಳೆದಿರುತ್ತಾರೆ. ಅಂದರೆ ಸಂಸ್ಕೃತಿಯ ನಿರಂತರ ಮುಂದುವರಿಕೆಗೆ ಹಾಗೂ ಬದಲಾವಣೆಗೆ ಸಾಮಾಜಿಕ, ಆರ್ಥಿಕ ಅಂಶಗಳೂ ಕಾರಣವಾಗುವುದರಿಂದ ಸಂಸ್ಕೃತಿ ಬರೀ ಅಂತರಂಗಕ್ಕೆ ಮಾತ್ರ ಮೀಸಲಾದದ್ದು ಎಂಬ ತಿಳುವಳಿಕೆ ಅಷ್ಟೇನೂ ಸಮಂಜಸವಲ್ಲ. ಈ ಹಿನ್ನೆಲೆಯಲ್ಲಿ ನೋಡಿದಾಗ ಭಾರತದಂತಹ ಬಹುಭಾಷೆಯ, ಬಹು ಜನಾಂಗಗಳ, ಬಹು ಧರ್ಮಗಳ, ಬಹು ರಾಜ್ಯಗಳ ದೇಶದಲ್ಲಿ ಅನೇಕ ಸಂಸ್ಕೃತಿಗಳು ಗೋಚರಿಸುತ್ತವೆ.

ಹಾಗಾಗಿ ಅಧ್ಯಾಯ ಎರಡರಲ್ಲಿ ಸಂಸ್ಕೃತಿಯ ಕುರಿತು ಇದುವರೆಗೆ ಚರ್ಚಿತವಾಗಿರುವ ವ್ಯಾಖ್ಯಾನಗಳನ್ನು, ಸಂಸ್ಕೃತಿಯ ಸ್ವರೂಪ ಉದ್ದೇಶಗಳನ್ನು ವಿವರಿಸಲಾಗಿದೆ.

೨.೩ ಬದಲಾದ ಸನ್ನಿವೇಶದಲ್ಲಿ ಸಂಸ್ಕೃತಿ ಸಂರಚನಾ ಸ್ವರೂಪ:

೧೯೭೦ರ ದಶಕ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಬಹಳ ಮುಖ್ಯ ಕಾಲಘಟ್ಟವಾಗಿದೆ. ಶೋಷಿತ ಜನಾಂಗ ಪ್ರಜ್ಞಾವಂತರಾಗಿ ಶತ ಶತಮಾನಗಳಿಂದ ಶೋಷಣೆಗೆ ಒಳಪಡಿಸಿಕೊಂಡು ಬಂದವರ ವಿರುದ್ಧ ಧ್ವನಿ ಎತ್ತಿದಾಗ, ಸಂಸ್ಕೃತಿಯ ಮೇಲೂ ಅದರ ಪರಿಣಾಮ ಬೀರಿತ್ತು. ಇದುವರೆಗೆ ನಿರ್ಲಕ್ಷ್ಯಕ್ಕೊಳಗಾಗಿದ್ದ ದಲಿತ, ಅಲೆಮಾರಿ, ಗಿರಿಜನ, ಬುಡಕಟ್ಟು ಮೊದಲಾದ ಜನಾಂಗದ ಸಂಸ್ಕೃತಿಗಳು ಹೊಸ ಚೌಕಟ್ಟನ್ನು ಪಡೆದುಕೊಂಡವು. 'ಭಾರತದ ಸಂಸ್ಕೃತಿ' ಎಂಬ ಸನಾತನ ಮೌಲ್ಯ ಕ್ಕೆ ವಿರುದ್ಧವಾಗಿ ಶ್ರಮ ಸಂಸ್ಕೃತಿ, ದಲಿತ ಸಂಸ್ಕೃತಿ, ಸ್ತ್ರೀ ಪ್ರಧಾನ ಸಂಸ್ಕೃತಿ, ಶ್ರೇಣೀಕೃತ ಸಂಸ್ಕೃತಿ, ಪ್ರತಿಸಂಸ್ಕೃತಿ, ನೇಗಿಲ ಸಂಸ್ಕೃತಿ, ವಿಸ್ಮೃತಿ ಸಂಸ್ಕೃತಿ, ಉಪಸಂಸ್ಕೃತಿ, ಪಲ್ಲಟ ಸಂಸ್ಕೃತಿ, ಪರ್ಯಾಯ ಸಂಸ್ಕೃತಿ, ಪ್ರಜಾ ಸಂಸ್ಕೃತಿ, ಆದಿಮ ಸಂಸ್ಕೃತಿ, ಜನಪದ ಸಂಸ್ಕೃತಿ, ಬಹುಸಂಸ್ಕೃತಿ, ಅನಕ್ಷರ ಸಂಸ್ಕೃತಿ, ದೇಸಿ ಸಂಸ್ಕೃತಿ ಹೀಗೆ ಹಲವು ಸಂಸ್ಕೃತಿಗಳ ಅಧ್ಯಯನ ನಿರ್ಲಕ್ಷ್ಯಕ್ಕೊಳಗಾದ ನೆಲೆಯಿಂದ ಇದ್ದಂತೆ ಕಂಡವು. ಈ

ಸಂಸ್ಕೃತಿಗಳು ಇದಕ್ಕೂ ಮೊದಲು ಇರಲಿಲ್ಲವೆಂದಲ್ಲ. ಪ್ರಧಾನವೆಂದು ಭಾವಿಸುವ ಹಿಂದೂ ಸಂಸ್ಕೃತಿಗೆ ಪರ್ಯಾಯವಾಗಿ, ಪ್ರತಿಯಾಗಿ ಸಂಸ್ಕೃತಿಯನ್ನು ಕಟ್ಟುವ ನಿಟ್ಟಿನಲ್ಲಿ ಸಾಂಸ್ಕೃತಿಕ ಪರಿಕಲ್ಪನೆ ರೂಪುಗೊಂಡಿದೆ.

ಪ್ರಧಾನವೆಂದು ಕರೆಯುವ ಹಿಂದೂ ಸಂಸ್ಕೃತಿಯನ್ನು ಪ್ರಶ್ನಿಸುವ ಹಿನ್ನೆಲೆಯಲ್ಲಿ ಡಾ. ಅಂಬೇಡ್ಕರ್ ,ತಮಿಳುನಾಡಿನ ಪೆರಿಯಾರ್ ಅವರ ವಿಚಾರಗಳು ಗಮನಾರ್ಹ. ಕರ್ನಾಟಕದ ಸಂದರ್ಭದಲ್ಲಿ ಡಿ.ಆರ್. ನಾಗರಾಜ್ ಅವರ 'ವಿಸ್ಮೃತಿ–ಸಂಸ್ಕೃತಿ', ಬರಗೂರು ರಾಮಚಂದ್ರಪ್ಪ ಅವರ 'ಉಪಸಂಸ್ಕೃತಿ', ಹರಿಹರಪ್ರಿಯರ 'ಪರ್ಯಾಯ ಸಂಸ್ಕೃತಿ' ಪ್ರಮುಖವಾದವುಗಳು. ಏಕಮುಖವಾಗಿ ನಡೆಯುತ್ತಿದ್ದ ಸಾಂಸ್ಕೃತಿಕ ಅಧ್ಯಯನ ಡಿ.ಆರ್. ನಾಗರಾಜ್, ಬರಗೂರು ರಾಮಚಂದ್ರಪ್ಪ ಮೊದಲಾದವರ ಅಧ್ಯಯನಗಳಿಂದ ಬಹುಮುಖವಾಗಿ ನಡೆಯಲಾರಂಭಿಸಿತು. ಪ್ರಧಾನ ಸಂಸ್ಕೃತಿಯ ಭರಾಟೆಯಲ್ಲಿ ಆವರೆಗೆ ಸುಪ್ತವಾಗಿ ಎಲ್ಲೋ ಮರೆಯಾಗಿ ಹೋಗಿದ್ದ ದಮನಿತ ಜನಾಂಗದ ಸಂಸ್ಕೃತಿಯನ್ನು ಪತ್ತೆಹಚ್ಚಿ ದಾಖಲಿಸುವ ಮತ್ತು ಪ್ರತಿಯಾಗಿ ಸಂಸ್ಕೃತಿಯನ್ನು ಕಟ್ಟುವ ಹಾಗೂ ಪ್ರಧಾನ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಗಿಸುವ ಕ್ರಿಯೆ ಮೇಲಿನ ವಿದ್ವಾಂಸರಿಂದ ನಡೆದಿದೆ ಎಂಬುದನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ. ಈ ನಿಟ್ಟಿನಲ್ಲಿ ತರೀಕೆರೆಯವರ 'ಪ್ರತಿಸಂಸ್ಕೃತಿ' ಪ್ರಸ್ತುತವೆನಿಸುತ್ತದೆ. ಪ್ರಧಾನ ಸಂಸ್ಕೃತಿಗೆ ಪ್ರತಿಯಾಗಿ ಸಂಸ್ಕೃತಿಯನ್ನು ಕಟ್ಟುವ ಸಂದರ್ಭದಲ್ಲೂ ಕೆಲವೊಂದು ತೊಡಕುಗಳಿವೆ ಎನ್ನುತ್ತಾರೆ ರಹಮತ್ ತರೀಕೆರೆಯವರು. ಈ ತೊಡಕುಗಳನ್ನು ಎದುರಿಸಿ ಪ್ರತಿಸಂಸ್ಕೃತಿಯನ್ನು ಕಟ್ಟಬೇಕಿದೆ. ಸನಾತನ ಸಂಸ್ಕೃತಿಯನ್ನು ಪ್ರಶ್ನಿಸುವ ನಿಟ್ಟಿನಲ್ಲಿ ಹರಿಹರಪ್ರಿಯರ ಪರ್ಯಾಯ ಸಂಸ್ಕೃತಿ ಪ್ರಮುಖವಾದುದು. ಪ್ರಧಾನ ಸಂಸ್ಕೃತಿಯನ್ನು ಧಿಕ್ಕರಿಸಿ, ಅದಕ್ಕೆ ಪರ್ಯಾಯವಾಗಿ ಶೋಷಿತ, ನಿರ್ಲಕ್ಷಿತ ಸಮುದಾಯಗಳ ಸಂಸ್ಕೃತಿಯನ್ನು ರೂಪಿಸುವುದು ಪರ್ಯಾಯ ಸಂಸ್ಕೃತಿಯ ಉದ್ದೇಶವಾಗಿದೆ. ಆದಿಮಾನವ ಹಲವಾರು ಸನ್ನಿವೇಶಗಳನ್ನು ಎದುರಿಸಿ, ಹಲವಾರು ಹಂತಗಳನ್ನು ದಾಟಿ ಈ ಅವಸ್ಥೆಗೆ ಬಂದಿದ್ದು, ಈ ಪಲ್ಲಟಕ್ಕೆ ಕಾರಣವಾದ ಒತ್ತಡಗಳನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸುವಂತೆ 'ಪಲ್ಲಟ ಸಂಸ್ಕೃತಿ' ಹೇಳುತ್ತದೆ. ಒಂದು ಅವಸ್ಥೆಯಿಂದ ಮತ್ತೊಂದು ಅವಸ್ಥೆಗೆ ಪಲ್ಲಟಗೊಳ್ಳುವ ಸಂಕ್ರಮಣ ಸ್ಥಿತಿ, ಪಲ್ಲಟ ಸಂಸ್ಕೃತಿ ಕೇಂದ್ರವಾಗಿದೆ. ಇಲ್ಲಿ ಪ್ರಧಾನ ಸಂಸ್ಕೃತಿ, ಅಧೀನ ಸಂಸ್ಕೃತಿಗಳಿಗಿಂತ ಮಾನವನ ಇತಿಹಾಸ ಮುಖ್ಯವಾಗಿದೆ.

ಡಿ.ಆರ್ ನಾಗರಾಜ್ ಅವರ ವಿಸ್ಮೃತಿ–ಸಂಸ್ಕತಿ, ಬರಗೂರು ರಾಮಚಂದ್ರಪ್ಪ ಅವರ 'ಉಪಸಂಸ್ಕೃತಿ', ರಹಮತ್ ತರೀಕೆರೆ ಅವರ 'ಪ್ರತಿ ಸಂಸ್ಕೃತಿ', ಹರಿಹರಪ್ರಿಯರ 'ಪರ್ಯಾಯ ಸಂಸ್ಕೃತಿ' ಇವೆಲ್ಲವುಗಳು ಪ್ರಧಾನ ಸಂಸ್ಕೃತಿಯನ್ನು ಧಿಕ್ಕರಿಸುವ, ಅದಕ್ಕೆ ಪರ್ಯಾಯವಾಗಿ ಶೋಷಿತ, ನಿರ್ಲಕ್ಷಿತ ಸಮುದಾಯಗಳ ಸಂಸ್ಕೃತಿಯನ್ನು ರೂಪಿಸುವ ಉದ್ದೇಶವನ್ನು ಹೊಂದಿರುವುದನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ. ಸಂಸ್ಕೃತಿಯ ಕುರಿತ ಪರಿಕಲ್ಪನೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿರುವುದನ್ನು ಬದಲಾದ ಸನ್ನಿವೇಶದಲ್ಲಿ ಸಂಸ್ಕೃತಿಯನ್ನು ಪುನರ್ ನಿರ್ಮಿಸಿಕೊಂಡ ಬಗೆಯನ್ನು ಈ ಅಧ್ಯಾಯದಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ಅಧ್ಯಾಯ ೩

ದಲಿತ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನಾ ಸ್ವರೂಪ:

೧೯೭೦ರ ಕಾಲಘಟ್ಟ ಸಾಂಸ್ಕೃತಿಕ ನೆಲೆಯಲ್ಲಿ ಬಹಳ ಪಲ್ಲಟಗಳನ್ನು ಎದುರಿಸಿದ ಕಾಲಘಟ್ಟ. ಈ ಸಂದರ್ಭದಲ್ಲಿ ಅಕ್ಷರ ಜ್ಞಾನಕ್ಕೆ ತೆರೆದುಕೊಳ್ಳದವರೆಲ್ಲರೂ ಕೂಡಾ ಅಕ್ಷರ ಜ್ಞಾನಕ್ಕೆ ತೆರೆದುಕೊಂಡ ಕಾಲಘಟ್ಟ. ಒಂದು ಒಪ್ಪಿತ ವ್ಯವಸ್ಥೆಯ ಒಳಗೆ ತನ್ನ ಬದುಕನ್ನು ಕಟ್ಟಿಕೊಂಡವರೆಲ್ಲರೂ ಅಕ್ಷರಜ್ಞಾನದಿಂದಾಗಿ ಜಾಗೃತಿಗೊಂಡ ಕಾಲಘಟ್ಟ ಎನ್ನಬಹುದು. ಅದುವರೆಗೂ ತಮಗಾಗುತ್ತಿದ್ದ ಎಲ್ಲಾ ಅನ್ಯಾಯಗಳನ್ನು, ಶೋಷಣೆಗಳನ್ನು ಮೊದಲಿನಂತೆ ಒಪ್ಪದೆ ಅವನ್ನು ಪ್ರಶ್ನಿಸುವ, ಇತರ ಸಮಾಜಕ್ಕೆ ತಿಳಿಸುವಂತಹ ಪ್ರಯತ್ನವನ್ನು ಮಾಡಿದ ಕಾಲಘಟ್ಟ. ತಮ್ಮ ಸಮುದಾಯದ ಒಳಗೆ ಆಗುತ್ತಿರುವ ಎಲ್ಲಾ ಅನ್ಯಾಯಗಳನ್ನು, ಎಲ್ಲಾ ಶೋಷಣೆಗಳನ್ನು, ಎಲ್ಲಾ ಅಮಾನವೀಯ ಕೃತ್ಯಗಳನ್ನು ಇಡೀ ಜಗತ್ತಿಗೆ ಬರವಣಿಗೆಯ ಮೂಲಕ ತೋರಿಸಲು ಆರಂಭಿಸಿದ ಕಾಲಘಟ್ಟವೆಂದೇ ಗುರುತಿಸಬಹುದು. ಅದುವರೆಗೆ ಒಪ್ಪಿತ ಸಮಾಜದ ಜೊತೆಗೆ ಹೊಂದಿಕೊಂಡು ಬದುಕನ್ನು ನಡೆಸುತ್ತಿದ್ದವರೆಲ್ಲರೂ ಕೂಡಾ ತಮ್ಮೊಳಗೆ ಆಗುತ್ತಿರುವ ಎಲ್ಲಾ ನೋವುಗಳನ್ನು ಸಮಾಜಕ್ಕೆ ತೆರೆದು ತೋರಿಸುವ ಪ್ರಯತ್ನವನ್ನು ಮಾಡಿದ ಕಾಲಘಟ್ಟ ಎಂದೇ ಗುರುತಿಸಬಹುದು. ಶಿಕ್ಷಣದಿಂದ ವಂಚಿತರಾದ ಒಂದು ಸಮುದಾಯ ಎಚ್ಚೆತ್ತ ಮತ್ತು ತಮ್ಮ ಅಸ್ಥಿರ ಅಸ್ತಿತ್ವದ ಬಗ್ಗೆ ಎಚ್ಚರಗೊಂಡ ಕಾಲವೆನ್ನಬಹುದು. ಅದುವೇ 'ದಲಿತ' ಯುಗದ ದಲಿತೋದಯದ ಕಾಲ. ಇಂತಹ ಪಲ್ಲಟದ ಸಂದರ್ಭದಲ್ಲಿಯೇ ಕಾಣಿಸಿಕೊಂಡದ್ದು 'ದಲಿತ' ಎಂಬ ಪದ. ಈ ಪದಕ್ಕೆ ಮೂಲಪ್ರೇರಣೆ ಮಹಾರಾಷ್ಟ್ರವೇ ಆಗಿದೆ ಎನ್ನಬಹುದು. ಪ್ರತಿಯೊಂದು ಪಂಥಗಳು ಹುಟ್ಟುವ ಹಿಂದೆ ಒಂದು ಸತ್ವಯುತ ಪ್ರೇರಣೆಗಳು ಇದ್ದೇ ಇರುತ್ತವೆ ಎಂಬುದು ಗಮನಾರ್ಹ. ಕಾಲ ಕಾಲಕ್ಕೆ ಹುಟ್ಟಿಕೊಂಡ ಪರಿಕಲ್ಪನೆಗಳಲ್ಲಿ ಅಸ್ಪೃಶ್ಯರನ್ನು, ನಿಕೃಷ್ಟ ಬದುಕನ್ನು ಬದುಕಿದವರನ್ನು, ಶೋಷಿತರನ್ನು, ಅವಮಾನಿತರನ್ನು ದಲಿತರೆಂದು ಗುರುತಿಸಲು ಈ ವ್ಯಾಖ್ಯಾನವನ್ನು ರೂಪಿಸಲಾಯಿತು.

ಕನ್ನಡ ಸಾಹಿತ್ಯದ ಇತಿಹಾಸವನ್ನು ಮತ್ತು ಪರಂಪರೆಯನ್ನು ಮೆಲುಕು ಹಾಕಿದಾಗ ದಲಿತರ ಬದುಕು, ಸಂಸ್ಕೃತಿಯೂ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಮೇಲ್ವರ್ಗದ ಪ್ರಭುತ್ವದ ದಬ್ಬಾಳಿಕೆಗಳಿಗೆ ಸಿಲುಕಿ ಅಸಹಾಯಕತೆಯಿಂದ ಅಮಾನವೀಯವಾಗಿ ಶೋಷಣೆಗೆ ಒಳಗಾಗುತ್ತಲೇ ಬಂದಿರುವುದು ಕಾಣಸಿಗುತ್ತದೆ. ಇದು ದಲಿತರ ಬದುಕಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ತಿರಸ್ಕಾರಕ್ಕೆ ಪ್ರೇರಣೆಯನ್ನು ನೀಡಿದೆ ಎನ್ನಬಹುದು. ಇತಿಹಾಸ ಪೂರ್ವದಿಂದಲೂ ಸಮಾಜದ ಬಲಿಷ್ಠ ವರ್ಗದಿಂದ ಹೊರದೂಡಲ್ಪಟ್ಟ ದಲಿತ ಸಮುದಾಯ ಅವರ ಎಲ್ಲಾ ಅಮಾನುಷ ದಬ್ಬಾಳಿಕೆಗಳಿಗೆ ಒಳಗಾಗುತ್ತಲೇ ಬಂದಿದೆ. ಆದರೂ ಈ ಶೋಷಣೆಯ ಮಧ್ಯೆಯೂ ತಮ್ಮದೇ ಆದ ಬದುಕು ಮುಖಿಯಾದ ಜೀವಸೆಲೆಯನ್ನು ದಲಿತ ಜನಾಂಗ ಹೊಂದಿರುವುದು ಅವರ ಅದಮ್ಯ ಶಕ್ತಿಯನ್ನು ಸಂಕೇತಿಸುತ್ತದೆ ಎನ್ನಬಹುದು.

ಶತ ಶತಮಾನಗಳಿಂದಲೂ ಮೇಲ್ವರ್ಗದವರ ಶೋಷಣೆ ದಬ್ಬಾಳಿಕೆಗಳಿಗೆ ಒಳಗಾಗುತ್ತಲೇ ಬಂದ ದಲಿತ ಸಮುದಾಯ ತಮಗೆ ತಮ್ಮದೇ ಆದ ಅಸ್ತಿತ್ವ ಇದೆ ಎಂಬುದನ್ನು ಮರೆತಂತಿತ್ತು. ತಮ್ಮೆಲ್ಲಾ ಬದುಕುಮುಖಿ ಆಲೋಚನೆಗಳನ್ನು ನೆನಪಿಸಿಕೊಳ್ಳದ ರೀತಿಯಲ್ಲಿ ದಮನಗೊಳಿಸುವ ವ್ಯವಸ್ಥಿತ ಹುನ್ನಾರಗಳು ನಿರಂತರವಾಗಿ ನಡೆದಿದೆ ಎನ್ನಬಹುದು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ರೂಪಿಸಿದ ನಂತರ ದಲಿತ ಬದುಕಿನಲ್ಲಿ ಹೆಚ್ಚಿನ ಬದಲಾವಣೆಗಳು ಸಾಮಾಜಿಕವಾಗಿ ಆಗಿಲ್ಲವೆಂಬ ವಾಸ್ತವವನ್ನು ಈ ಕಾಲಘಟ್ಟದ ಸಾಹಿತ್ಯ ಕೃತಿಗಳು ವಿಷಾದದಿಂದ ಚಿತ್ರಿಸುತ್ತವೆ.

ಜಾತಿ ಶ್ರೇಣೀಕರಣ ವ್ಯವಸ್ಥೆಯು ದಲಿತರ ಬದುಕಿನ ಚೈತನ್ಯವನ್ನೇ ಹೊಸಕಿ ಹಾಕುತ್ತಾ ಬಂದದ್ದರ ದುರಂತ ಇಂದೂ ಭಾರತವನ್ನು ಕಾಡುತ್ತಿದೆ. ಭಾರತೀಯ ಸಮಾಜದ ಪಟ್ಟಭದ್ರ ಹಿತಾಸಕ್ತಿಗಳು ಜನಸಾಮಾನ್ಯರ ಬದುಕಿನ ಕುರಿತು ಆಲೋಚಿಸದ ಕಾರಣ ಅನೇಕ ಸಮಸ್ಯೆಗಳು ನಿರಂತರವಾಗಿ ಎದುರಾಗುವಂತಾಯಿತು. ೧೯೭೦ರ ದಶಕ ಕನ್ನಡ ಸಾಹಿತ್ಯ ದೃಷ್ಟಿಯಿಂದ ಬಹುಮುಖ್ಯವಾದ ಕಾಲಘಟ್ಟವಾಗಿದೆ. ಅದುವರೆಗೆ ಸಾಮಾನ್ಯವಾಗಿದ್ದ ಕೃತಿಗಳ ವಸ್ತು, ಭಾಷಾ ಬಳಕೆ ಮತ್ತು ಕೃತಿಕಾರರ ಧೋರಣೆಗಳು ಎಪ್ಪತ್ತರ ದಶಕದಿಂದ ಭಿನ್ನವಾಗುತ್ತಾ ಸಾಗಿದವು. ಒಂದು ಕಡೆ ಈ ದಶಕದಲ್ಲಿ ದಲಿತರಲ್ಲಿ ಜಾಗೃತಿ ಮೂಡಿ ಅವರೆಲ್ಲ ಸಂಘಟನೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇನ್ನೊಂದು ಕಡೆ ಮಾರ್ಕ್ಸ್, ಲೋಹಿಯಾ ಮತ್ತು ಅಂಬೇಡ್ಕರ್ ವಿಚಾರಧಾರೆಗಳ ಪ್ರಭಾವಕ್ಕೆ ಒಳಗಾದ ಹೊಸ ಬರಹಗಾರರ ತಂಡ ಕನ್ನಡ ಸಾಹಿತ್ಯಕ್ಕೆ ಪರಿಚಿತವಾಗಿದ್ದ ಹಲವು ಬದುಕುಗಳ ಲೋಕವನ್ನು ಮೊದಲ ಬಾರಿಗೆ ತೆರೆದಿಟ್ಟಿತು.

ಭಾರತೀಯ ಸಮಾಜವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಮನುಷ್ಯನ ಅನಾಗರಿಕ ವರ್ತನೆಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ. ಅದನ್ನು ಚಾರಿತ್ರಿಕವಾಗಿ ಅರ್ಥೈಸುವ ಪರಿಪಾಠವನ್ನು ಬೆಳೆಸಬೇಕಿದೆ. ವರ್ಣಾಶ್ರಮ ಪದ್ಧತಿಯು ಭಾರತೀಯ ಸಮಾಜದ ಪ್ರಬಲ ಶಕ್ತಿಗಳಿಗೆ ಅತ್ಯಂತ ಅನುಕೂಲವಾದ ಸ್ಥಿತಿಯಾದರೆ, ದುಡಿಯುವ ವರ್ಗಕ್ಕೆ ಪ್ರತಿಕೂಲವಾಗಿರುವುದು ಸಹಜವಾಗಿದೆ. ಹೀಗಾಗಿ ಇದು ಮೇಲ್ವರ್ಗಕ್ಕೆ ಮೌಲ್ಯವೆನಿಸಿದರೆ, ಕೆಳವರ್ಗದವರಿಗೆ ಅಮಾನವೀಯ ವ್ಯವಸ್ಥೆಯೆನಿಸಿದೆ. ಮಾನವನ ಅಭಿವೃದ್ಧಿಗೆ ಶ್ರಮಿಸುವ ಧರ್ಮ ಪರಿಸರದಲ್ಲಿ ಇವುಗಳಿಗೆ ಪ್ರಧಾನ ಸ್ಥಾನವನ್ನು ಕಲ್ಪಿಸಲು ಸಾಧ್ಯವಿಲ್ಲ. ವಿಪರ್ಯಾಸವೆಂದರೆ ಇಲ್ಲಿ ಶೋಷಕರಿಗೆ ಮಹಾಪೀಠ ರಾಜ್ಯ ಪಟ್ಟವಾಗಿದೆ. ಅದನ್ನು ಧರ್ಮ, ರಾಜಸತ್ತೆ ಪರಸ್ಪರ ಒಪ್ಪಂದಗಳ ಮೂಲಕ ಮುಂದುವರೆಸಿಕೊಂಡು ಬಂದರೂ, ಸದ್ಯದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಶ್ನೆಗೆ, ಪ್ರತಿಭಟನೆಗೆ ಒಳಗಾಗಿದೆ. ಅಂತಹ ಪ್ರತಿಭಟನಾತ್ಮಕವಾದ ದಲಿತರ ಸಾಂಸ್ಕೃತಿಕ ಸಂರಚನೆಯನ್ನು ಕಾದಂಬರಿಯಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿರುತ್ತೇನೆ.

ಕಾಲದ ಪರಿಮಿತಿಯಿಂದಾಗಿ ಎಲ್ಲಾ ಹಂತದ ಕಾದಂಬರಿಗಳಲ್ಲಿ ಸಂಸ್ಕೃತಿಯ ಚಿತ್ರಣಗಳನ್ನು ಗುರುತಿಸುವ ಪ್ರಯತ್ನಕ್ಕೆ ಹೋಗುವುದು ಅಸಾಧ್ಯದ ಕಾರ್ಯ. ಹಾಗಾಗಿ ದಲಿತ ಕಾದಂಬರಿಗಳಲ್ಲಿ ಸಂಸ್ಕೃತಿಯನ್ನು ಮತ್ತೆ ಮರು ನಿರ್ವಚಿಸಿಕೊಳ್ಳುವ ಬಗೆಯನ್ನು ಜಾತಿ, ಧರ್ಮ, ಲಿಂಗ, ಶಿಕ್ಷಣ, ದುಡಿಮೆ ಭಾಷೆ ಮತ್ತು ಆಹಾರ ಪದ್ಧತಿಯ ಮೂಲಕ ಗುರುತಿಸುವ ಪ್ರಯತ್ನವನ್ನು ಈ ಶೀರ್ಷಿಕೆಯಡಿಯಲ್ಲಿ ನಡೆಸಿರುತ್ತೇನೆ. ದಲಿತ ಕಾದಂಬರಿಕಾರರಾದ

ದೇವನೂರರ 'ಒಡಲಾಳ'ಮತ್ತು 'ಕುಸುಮಬಾಲೆ', ಮುಳ್ಳೂರು ನಾಗರಾಜರ 'ಮರಣ ಮಂಡಲ ಮಧ್ಯದೊಳಗೆ', ಮ.ನ.ಜವರಯ್ಯನವರ 'ಮಾಗಿ', ಅರವಿಂದ ಮಾಲಗತ್ತಿಯವರ 'ಕಾರ್ಯ', ಶಿವರುದ್ರ ಕಲ್ಲೋಳಿಕರರ' ಹೊಲಗೇರಿಯ ರಾಜಕುಮಾರ', ಮೊಗಳ್ಳಿ ಗಣೇಶರ 'ತೊಟ್ಟಿಲು', 'ಕಿರೀಟ' ಕಾದಂಬರಿಗಳು ದಲಿತ ಜಗತ್ತಿನ ಅನಾವರಣ ಮಾಡುತ್ತವೆ. ಈ ಕಾದಂಬರಿಗಳಲ್ಲಿ ಸಂಸ್ಕೃತಿಯನ್ನು ಮರು ನಿರೂಪಿಸಿಕೊಂಡ ಬಗೆಯನ್ನು ಮೇಲಿನ ಅಂಶಗಳ ಆಧಾರದಲ್ಲಿ ಅಧ್ಯಯನ ನಡೆಸಿರುತ್ತೇನೆ.

೩.೧: ಭಾಷೆ :

ಆಧುನಿಕ ಕನ್ನಡ ಸಾಹಿತ್ಯವು 'ಭಾಷೆ'ಯನ್ನು ಬೇರೆ ಬೇರೆ ರೂಪಗಳಲ್ಲಿ ಬಳಸಿಕೊಂಡಿದೆ. ವಿಭಿನ್ನ ಜನಸಮುದಾಯಗಳು ತಮ್ಮ ಅನುಭವಗಳನ್ನು ಮತ್ತು ವಿಶಿಷ್ಟತೆಗಳನ್ನು ಸಾಹಿತ್ಯದಲ್ಲಿ ಅನಾವರಣಗೊಳಿಸಿರುವುದು ತಮ್ಮ ಹಕ್ಕುಗಳ ಸ್ಥಾಪನೆಯಾಗಿದೆ. ಕನ್ನಡದ ವಿವಿಧ ಸಾಹಿತ್ಯ ಪಂಥಗಳು ಒಂದೇ ಹಂತದ ವಿವಿಧ ಲೇಖಕರು ತಮ್ಮದೇ ಆದ ಪ್ರಾದೇಶಿಕ ಭಾಷೆಗಳನ್ನು ಕೃತಿಯಲ್ಲಿ ಬಳಸುವ ಹಿಂದೆ ಚಾರಿತ್ರಿಕ ಒತ್ತಡಗಳು ಕೆಲಸ ಮಾಡಿವೆ. ತಮ್ಮ ಪ್ರದೇಶ, ಮಾತೃಭಾಷೆ, ವೃತ್ತಿ, ಧರ್ಮ ಇತ್ಯಾದಿ ನೆಲೆಗಳಲ್ಲಿರುವ ಸಂಸ್ಕೃತಿ ವಿಶಿಷ್ಟವಾದ ಅನುಭವಗಳನ್ನು ಬಳಸಿಕೊಂಡು ಕೃತಿ ರಚಿಸುವಾಗ ಭಾಷಿಕ ಸವಾಲುಗಳು ಎದುರಾಗುತ್ತದೆ. ಇಂತಹ ಸವಾಲುಗಳನ್ನು ಎದುರಿಸಿಕೊಂಡೇ ಲೇಖಕರು ಸಾಹಿತ್ಯ ಕೃತಿಗಳಲ್ಲಿ ತಮ್ಮ ತಾತ್ವಿಕತೆಗೆ ಅನುಗುಣವಾಗಿ ಭಾಷೆಯನ್ನು ಬಳಸುವ ಮೂಲಕ ಭಾಷಿಕ ಅನನ್ಯತೆಯನ್ನು ತರುತ್ತಾರೆ. ಪ್ರತಿಯೊಬ್ಬ ಕೃತಿಕಾರನ ಹಿಂದೆಯೂ ಈ ಭಾಷಿಕ ಅನನ್ಯತೆಯನ್ನು ಸ್ಥಾಪಿಸಲು ಒತ್ತಡಗಳು ಇದ್ದೇ ಇರುತ್ತವೆ. ಆ ಮೂಲಕ ತಮ್ಮ ಕೃತಿಯಲ್ಲಿರುವ ಸಂಸ್ಕೃತಿಯ ವಿಶಿಷ್ಟ ಭಾಷಾ ರೂಪಕ್ಕೆ ಓದುಗರನ್ನು ಬದಲಾಯಿಸಲು ಇವರು ಪ್ರಯತ್ನಿಸುತ್ತಾರೆ. ಇವೆಲ್ಲ ಅಸ್ಮಿತೆಯನ್ನು ಸ್ಥಾಪಿಸುವ ಸಾಂಸ್ಕೃತಿಕ ರಾಜಕಾರಣ ವಿವಿಧ ಪ್ರಯತ್ನಗಳೇ ಆಗಿವೆ.

'ಭಾಷೆ' ಎನ್ನುವುದು ಭಾಷೆ ಸಂಜ್ಞೆಗಳ ಮೂಲಕ ಅರ್ಥ ಮಾಡಿಸುವ ವಿಧಾನ ಎಂಬುದನ್ನು ಒಪ್ಪಿಕೊಂಡರೆ, ಎಲ್ಲಾ ಸಾಂಸ್ಕೃತಿಕ ವ್ಯವಸ್ಥೆಗಳು ಭಾಷೆಗಳೇ ಎನ್ನಬಹುದಾಗಿದೆ. ದಲಿತ ಸಂಸ್ಕೃತಿಯ ಎಲ್ಲಾ ಪದರಗಳನ್ನು ಅಕ್ಷರಸ್ಥ ಜಗತ್ತಿಗೆ ಪರಿಚಯಿಸಿದವರಲ್ಲಿ ದೇವನೂರು ಬಹಳ ಮುಖ್ಯರು. ಅಷ್ಟರವರೆಗಿನ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡ ಪ್ರೌಢ ಭಾಷೆಗಿಂತ ಭಿನ್ನವಾಗಿ ದೇವನೂರರು ಪ್ರಯೋಗಿಸಿದ ಭಾಷೆಯು ಕಂಡು ಬರುತ್ತದೆ. ಯಾಕೆಂದರೆ ತಮ್ಮ ಸಂವೇದನೆಗಳನ್ನು ತಮ್ಮ ಪ್ರಾದೇಶಿಕ ಭಾಷೆ ಅಥವಾ ದೇಸೀ ಭಾಷೆಯ ಮೂಲಕವೇ ಅಭಿವ್ಯಕ್ತಿಸಿದಾಗ ಮಾತ್ರ ಅದಕ್ಕೊಂದು ಜೀವಂತಿಕೆ ಬರಲು ಸಾಧ್ಯ ಎಂಬುದರ ಅರಿವು ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡ ದಲಿತ ಬರಹಗಾರರಿಗೆ ಮನವರಿಕೆಯಾದಂತಿದೆ.

ಸಾಮಾನ್ಯವಾಗಿ ಪ್ರಬಲ ವರ್ಗದಿಂದ ವಂಚಿತರಾದ ಇನ್ನೊಂದು ವರ್ಗದ ಜನರು ಅವರದೇ ಆದ ಭಾಷೆ, ಆಡು ನುಡಿಯ ಪ್ರಯೋಗ, ನುಡಿಗಟ್ಟುಗಳನ್ನು ಹೊಂದಿರುತ್ತಾರೆ. ಅದನ್ನು ತಮ್ಮ ಅನುಭವದ ಮೂಲಕ ಯಥಾವತ್ತಾಗಿ ಹಿಡಿದಿಡುವ ಪ್ರಯತ್ನವನ್ನು 'ಭಾಷೆ'ಯ ಮೂಲಕ ಮಾಡಿದ್ದಾರೆ. ಇದು ಅವರ ಸಾಂಸ್ಕೃತಿಕ ಅನನ್ಯತೆ

ತಿಳಿಸಿದಂತಾಗುತ್ತದೆ. ಪ್ರಬಲವರ್ಗ ಈಗಾಗಲೇ ರೂಪಿಸಿಕೊಂಡ ಪ್ರಧಾನ ಸಾಹಿತ್ಯ ಪರಂಪರೆಗೆ ಪ್ರಧಾನ ಸಂಸ್ಕೃತಿಗೆ ಇದು ಪ್ರತಿ ಸವಾಲಾಗುತ್ತದೆ ಮತ್ತು ಈ ರೀತಿಯ ಹೊಸ ಪ್ರಯೋಗಗಳು ಸಾಂಸ್ಕೃತಿಕ ಅನನ್ಯತೆಯನ್ನು ಬಿಂಬಿಸುತ್ತದೆ. ಇಂತಹ ಹೊಸ ಪ್ರಯೋಗಗಳನ್ನು ನಾವು ದಲಿತ ಕೃತಿಗಳಲ್ಲಿ ಕಾಣಬಹುದು ಕೃತಿಕಾರರು ತಮ್ಮ ಸಮುದಾಯದ ಎಲ್ಲಾ ಅನುಭವಗಳನ್ನು ಸ್ವತ ತಾವೇ ಅನುಭವಿಸಿ ತಮ್ಮ ಭಾಷೆಯಲ್ಲಿ ಸಾಹಿತ್ಯ ಕರೆತರುವ ಮೂಲಕ ದಲಿತ ಸಂಸ್ಕೃತಿಯ ಜೀವಂತಿಕೆ ನೀಡಿ ಸಮಾಜದ ಮುಂದಿಡಲು ಪ್ರಯತ್ನಿಸಿದ್ದಾರೆ. ಇವೆಲ್ಲಾ ಅಸ್ಮಿತೆಯನ್ನು ಸ್ಥಾಪಿಸುವ ಸಾಂಸ್ಕೃತಿಕ ರಾಜಕಾರಣದ ವಿವಿಧ ಪ್ರಯತ್ನಗಳೇ ಆಗಿವೆ. ಈ ಮಹಾಪ್ರಬಂಧಕ್ಕೆ ಆಯ್ದುಕೊಂಡ ಪ್ರಮುಖ ದಲಿತ ಕಾದಂಬರಿಗಳಲ್ಲಿ ಭಾಷೆಯನ್ನು ಹೇಗೆ ಶಿಷ್ಟ ನೆಲೆಗೆ ಭಿನ್ನವಾಗಿ ಮರು ರಚಿಸಲಾಗಿದೆ ಎಂಬುದನ್ನು ಈ ಭಾಗದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೩.೨. ಜಾತಿ ವ್ಯವಸ್ಥೆ :

ಭಾರತೀಯ ಸಮಾಜವನ್ನು ಕೂಲಂಕುಶವಾಗಿ ಗಮನಿಸಿದಾಗ ನಮಗೆ ಕಾಣಸಿಗುವುದು ಜಾತೀಯತೆಯ ಸಮಸ್ಯೆ. ಇಡೀ ಸಮಾಜದ ವ್ಯವಸ್ಥೆಯನ್ನು ಹತೋಟಿಯಲ್ಲಿಡುವುದರಲ್ಲಿ ಬಹಳ ಮುಖ್ಯ ಪಾತ್ರ ವಹಿಸಿದೆ. ವ್ಯಕ್ತಿ ವ್ಯಕ್ತಿಗಳ ನಡುವಿನ ಮಾನವೀಯ ಸಂಬಂಧಗಳಿಗೆ ಒಂದಿಷ್ಟು ಬೆಲೆಯಿಲ್ಲದಂತೆ ಮಾಡುವಲ್ಲಿ ಜಾತಿ ವ್ಯವಸ್ಥೆ ಪ್ರಮುಖ ಕಾರಣವಾಗಿದೆ. ಜಾತಿ ವ್ಯವಸ್ಥೆಯ ಮೂಲಕ ಹುಟ್ಟಿಕೊಂಡ ಸಾಮಾಜಿಕ ಅಸಮಾನತೆಗಳು ಸಮಾಜದಲ್ಲಿ ಎರಡು ವರ್ಗಗಳನ್ನು ಸೃಷ್ಟಿ ಮಾಡಿದೆ. ಒಂದು ಪ್ರಬಲ ವರ್ಗ ಇನ್ನೊಂದು ದುರ್ಬಲ ವರ್ಗ. ಅಸ್ಪೃಶ್ಯತೆ ಜಾತೀಯತೆಯ ಕುರಿತು ಹೇಳುವಾಗಲೆಲ್ಲ ನಾವು ಮುಖ್ಯವಾಗಿ ಎರಡು ಮುಖಗಳನ್ನು ಗುರುತಿಸಬಹುದು. ಸವರ್ಣೀಯರು ಪೂರೈಸುವುದು ಒಂದು ಮುಖವಾದರೆ, ಇನ್ನೊಂದು ಮುಖ ಅಸ್ಪೃಶ್ಯರು ಗ್ರಹಿಸುವ ಬಗೆ. ಇವು ಒಂದೇ ನಾಣ್ಯದ ಎರಡು ಮುಖಗಳಾಗುತ್ತವೆ. ಹುಟ್ಟಿನಿಂದಲೇ ಜಾತಿಯ ಕಾರಣಕ್ಕಾಗಿ ಕ್ಷಣಕ್ಷಣಕ್ಕೂ ಅವಮಾನಕ್ಕೆ, ನಿಂದನೆಗೆ ನಿರ್ಲಕ್ಷ್ಯಕ್ಕೆ, ಒಳಗಾದ ಸಾಮಾಜಿಕ ಸಮುದಾಯ ಎಂದು ಅಕ್ಷರ ಪ್ರಪಂಚಕ್ಕೆ ತೆರೆದುಕೊಂಡಿತೋ ಅಂದಿನಿಂದ ತಮಗೆ ಆಗುತ್ತಿರುವ ಎಲ್ಲಾ ಅನ್ಯಾಯಗಳನ್ನು,ಅಮಾನುಷ ಕೃತ್ಯಗಳನ್ನು ಬರವಣಿಗೆಯ ಮೂಲಕ ಅನಾವರಣ ಗೊಳಿಸಲಾರಂಭಿಸಿದರು ಎಂಬುದೂ ಮುಖ್ಯವಾಗುತ್ತದೆ. ಮೇಲ್ಜಾತಿ ಮತ್ತು ದಲಿತರ ನಡುವಿನ ಮಾನವೀಯ ಮೌಲ್ಯಗಳ ವ್ಯತ್ಯಾಸವನ್ನು ಕಾದಂಬರಿಗಳು ತೆರೆದು ತೋರಿಸುತ್ತವೆ. ದಲಿತರ ನಂಬಿಕೊಂಡು ಬಂದ ಸಾಮಾಜಿಕ ಮೌಲ್ಯಗಳನ್ನು ಕಾದಂಬರಿಗಳು ಬಿಂಬಿಸಿವೆ ಪ್ರಾಚೀನ ಸಾಮಾಜಿಕ ವ್ಯವಸ್ಥೆಯನ್ನು ನೆನಪಿಸುವ ಜತೆಗೆ ಸಮಕಾಲೀನ ಸಮಾಜದ ವಸ್ತುಸ್ಥಿತಿಯನ್ನು ಲೇಖಕರು ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ದಲಿತ ಸಮಾಜದಲ್ಲಿ ಬೇರುಬಿಟ್ಟ ಸಂಪ್ರದಾಯ ಆಚರಣೆ ಮೌಢ್ಯತೆಗಳನ್ನು ಬಿಂಬಿಸುವ ಕಾದಂಬರಿಗಳು ಹೊಸ ಪ್ರಜ್ಞೆಯನ್ನು ಹುಟ್ಟು ಹಾಕುವ ಯತ್ನವನ್ನು ಮಾಡಿವೆ. ಗ್ರಾಮೀಣ ದಲಿತ ಸಮುದಾಯ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಮುಂದುವರಿದಿದ್ದರೆ ಪ್ರಜ್ಞಾವಂತ ಸಮುದಾಯ ಸಂಪ್ರದಾಯಕ್ಕೆ ಮರುಹುಟ್ಟು ಕೊಡುವ ಯತ್ನ ಮಾಡಿದೆ ಊರ ಹೊರಗೆ ಅಸ್ಪೃಶ್ಯರಾಗಿ ಮೇಲ್ಜಾತಿಯವರ ದಾಸರಾಗಿ ಬದುಕುತ್ತಿರುವ ಗ್ರಾಮೀಣ ದಲಿತರಲ್ಲಿ ತಮ್ಮ ಈ ಅವಸ್ಥೆಗೆ ಮೇಲ್ಜಾತಿಯವರು ತಂತ್ರಗಾರಿಕೆ ಕಾರಣವಾಗದೆ ತಾವೇ ಹೊಣೆಗಾರರು ಎಂಬ ಕರ್ಮ ಸಿದ್ಧಾಂತದ ನಿಲುವು ಇದೆ. ದೇವನೂರು ಮಹಾದೇವ ಅವರು ಈ ವಿಚಾರಗಳನ್ನು

ತಮ್ಮ ಕಾದಂಬರಿಯಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ. ವೈದಿಕ ವ್ಯವಸ್ಥೆಯನ್ನು ಮೇಲಿನಿಂದ ಕೆಳಕ್ಕೆ ರೂಪಿಸಿಕೊಂಡು ಬಂದರೆ ಅದಕ್ಕೆ ವಿರುದ್ಧವಾಗಿ ದೇವನೂರರು ಸಾಮಾಜಿಕ ವ್ಯವಸ್ಥೆಯನ್ನು ಕೆಳಗಿನಿಂದ ಆರಂಭಿಸುವ ಕೆಲಸವನ್ನು ಮಾಡಿರುವುದನ್ನು ಈ ಉಪ ಅಧ್ಯಾಯದಲ್ಲಿ ಗುರುತಿಸಲಾಗಿದೆ. ದೇವನೂರರ ಒಡಲಾಳ, ಕುಸುಮಬಾಲೆ, ಮುಳ್ಳೂರುನಾಗರಾಜರ ಮರಣ ಮಂಡಲ ಮಧ್ಯದೊಳಗೆ, ಮೊಗಳ್ಳಿ ಗಣೇಶರ ತೊಟ್ಟಿಲು ಕಿರೀಟ ಅರವಿಂದ ಮಾಲಗತ್ತಿಯವರ ಕಾರ್ಯ ಮ.ನ.ಜ. ಅವರ ಮಾಗಿ, ಸೂರಪ್ಪ ಬಿ.ಟಿ ಲಲಿತಾನಾಯಕರ ಗತಿ, ನೆಲೆಬೆಲೆ ಕಾದಂಬರಿಯನ್ನು ಈ ಉಪ ಅಧ್ಯಾಯದಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ.

೩.೩. ಆಹಾರ ಪದ್ದತಿ:

'ದಲಿತ ಸಂಸ್ಕೃತಿ' ವಿಶಿಷ್ಟವಾಗಿ ನಿಲ್ಲಲು ಅವರಲ್ಲಿನ ಆಹಾರ ಪದ್ಧತಿಯೂ ಕಾರಣವಾಗಿದೆ. ದಲಿತರು ಆದಿ ಮಾನವನ ಆಹಾರ ಪದ್ಧತಿಯನ್ನು ಉಳಿಸಿಕೊಂಡು ಬಂದವರು. ಮಾಂಸಾಹಾರ ದಲಿತರ ಪ್ರಮುಖ ಆಹಾರವಾಗಿದ್ದು, ಇದನ್ನು ಉಳಿಸಿಕೊಂಡು ಬರುವ ಮೂಲಕ ಅವರ ಮೂಲ ಸಂಸ್ಕೃತಿಗೆ ಹತ್ತಿರವಾಗಿದ್ದಾರೆ. ಭೌಗೋಳಿಕ ಪರಿಸರಕ್ಕನುಗುಣವಾಗಿ ಮನುಷ್ಯ ಆಹಾರವನ್ನು ರೂಡಿಗೆ ತಂದಿದ್ದಾನೆ. ಇದರಂತೆಯೇ ಶ್ರಮ ಸಂಸ್ಕೃತಿಯನ್ನೇ ನಂಬಿಕೊಂಡ ದಲಿತರಿಗೆ ಮಾಂಸ ಅನಿವಾರ್ಯವಾದ ಆಹಾರವಾಗಿದೆ. ದಲಿತರಲ್ಲಿ ಮುಂದುವರಿದುಕೊಂಡು ಬಂದ ಆಹಾರ ಪದ್ದತಿಯನ್ನು ದಲಿತ ಕಾದಂಬರಿಗಳು ಗರ್ಭೀಕರಿಸಿಕೊಂಡಿವೆ.

ಬಾಡಿನ ಸಾರು ಇಲ್ಲದಿದ್ದರೆ ದಲಿತ ಬದುಕಲಾರ. ಅವನೆಂತಹ ಬಡವನೇ ಆದರೂ ಇಂತಿಷ್ಟು ದಿನಕೊಮ್ಮೆ ಎಂದು ನಿಗದಿಪಡಿಸಿಕೊಂಡು ಬಾಡಿನ ಸಾರನ್ನು ಸೇವಿಸುತ್ತಾನೆ. ಇದಕ್ಕಾಗಿ ಕೆಲವು ಆಚರಣೆಗಳನ್ನು ರೂಢಿಗೆ ತಂದಿದ್ದಾನೆ. ಈ ಹಿನ್ನೆಲೆಯಲ್ಲಿಯೇ ಬಲಿ ಪರಂಪರೆ ಹುಟ್ಟಿ ಕೊಂಡಿರಬಹುದು. ದಲಿತರಲ್ಲಿರುವ ವಿಶಿಷ್ಟ ಆಹಾರ ಪದ್ದತಿಯನ್ನು ದಲಿತ ಲೇಖಕರು ಕಾದಂಬರಿಗಳ ಕೆಲವು ಸನ್ನಿವೇಶಗಳಲ್ಲಿ ಹಿಡಿದಿಟ್ಟು, ದಲಿತ ಸಂಸ್ಕೃತಿಯನ್ನು ಕಟ್ಟಿಕೊಂಡಿದ್ದಾರೆ. ದಲಿತರು ಹೆಚ್ಚಾಗಿ ಕಡಿಮೆ ಬೆಲೆಯಲ್ಲಿ ಸಿಗುವ ಪ್ರಾಣಿಗಳ ಮಾಂಸವನ್ನು ತಿನ್ನುವರು. ದಲಿತ ಕಾದಂಬರಿಗಳನ್ನು ಗಮನಿಸಿದಾಗ ದಲಿತರು ಸುಲಭವಾಗಿ ಕೈಗೆಟಕುವ ಪ್ರಾಣಿಗಳನ್ನು ತಿಂದು ತಮ್ಮ ಆಸೆ ಈಡೇರಿಸಿ ಕೊಂಡಿರುವುದು ಕಂಡು ಬರುತ್ತದೆ. ಮಾಂಸಾಹಾರ ದಲಿತರ ಮೂಲ ಆಹಾರವಾಗಿದ್ದು, ರೂಢಿಸಿಕೊಂಡು ಬಂದ ಆಚರಣೆಗಳಲ್ಲೂ ಅದು ನುಸುಳಿದೆ. ಬೇರೆ ಬೇರೆ ಪದ್ದತಿಗಳ ಮೂಲಕ ದಲಿತ ಅದನ್ನು ಉಳಿಸಿಕೊಳ್ಳುವ ಯತ್ನ ಮಾಡಿದ್ದಾನೆ.

ಪ್ರಾಣಿಗಳನ್ನು ದೇವರ ಹೆಸರಿನಲ್ಲಿ ಬಲಿಕೊಡುವುದು, ಹರಕೆ ಹೊರುವುದು, ಸಂಭ್ರಮದ ಸಂದರ್ಭದಲ್ಲಿ ಮಾಂಸದೂಟ ಹಾಕಿಸುವುದು ಇತ್ಯಾದಿಗಳು ಅದರ ಪ್ರತಿರೂಪಗಳೇ ಆಗಿವೆ. ದಲಿತ ಕಾದಂಬರಿಗಳು ಇದರ ಒಂದೊಂದು ಮುಖದ ಪರಿಚಯವನ್ನು ನೀಡಿವೆ. ಆಹಾರ ಪದ್ದತಿ ಒಂದು ಜನ ಸಮುದಾಯದ ನಂಬಿಕೆ. ಸಂಪ್ರದಾಯ ಹಾಗೂ ಆಚರಣೆಗಳ ಜೊತೆಗೆ ಸಂಬಂಧ ಹೊಂದಿರುತ್ತದೆ. ಜಾತಿಯಿಂದ ಜಾತಿಗೆ ಆಹಾರ ಪದ್ದತಿ ಬದಲಾಗುತ್ತದೆ. ಪ್ರದೇಶದಿಂದ ಪ್ರದೇಶಕ್ಕೂ ವ್ಯತ್ಯಾಸಕ್ಕೆ ಒಳಗಾಗುತ್ತದೆ. ಒಬ್ಬರಿಗೆ ವ್ಯರ್ಜ್ಯ ಎನಿಸಿದ ಆಹಾರ ಇನ್ನೊಬ್ಬರಿಗೆ ಮುಖ್ಯವಾಗಬಹುದು. ಅದೇ ರೀತಿ ಕೆಲವರಿಗೆ ಕೆಲವು ಆಹಾರ ಶ್ರೇಷ್ಠವೆನಿಸಿದರೆ, ಇನ್ನು ಕೆಲವರಿಗೆ

ಬೇರೆ ಬಗೆಯ ಆಹಾರ ಮುಖ್ಯವೆನಿಸಬಹುದು. ಪ್ರದೇಶದ ಜನರೆಲ್ಲರ ದೈನಂದಿನ ಆಹಾರ ಪದ್ದತಿಯಲ್ಲಿ ವ್ಯತ್ಯಾಸ ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ವಿಶೇಷ ಸಂದರ್ಭಗಳಲ್ಲಿ, ಜೀವನಾವರ್ತನ ಇಲ್ಲವೆ ವಾರ್ಷಿಕಾವರ್ತನ ಹಬ್ಬಗಳಲ್ಲಿ ಈ ವ್ಯತ್ಯಾಸಗಳು ಸ್ಪಷ್ಟವಾಗಿ ನಮಗೆ ಗೋಚರಕ್ಕೆ ಬರುತ್ತವೆ. ಈ ಹಿನ್ನೆಲೆಯಿಂದ ದಲಿತ ಕಾದಂಬರಿಗಳು ದಲಿತರ ಆಹಾರ ಪದ್ಧತಿಯ ಕುರಿತಂತೆ ಏನನ್ನು ಹೇಳುತ್ತವೆ ಎಂಬುದನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ದಲಿತರ ಪ್ರಮುಖ ಆಹಾರ ಪದ್ದತಿಗಳು ಪ್ರಾದೇಶಿಕ ನೆಲೆಯಿಂದ ರೂಪಿತವಾಗಿರುತ್ತದೆ. ಉತ್ತರ ಕರ್ನಾಟಕದಲ್ಲಿ ಜೋಳ ಪ್ರಮುಖ ಬೆಳೆಯಾದರೆ, ಮೈಸೂರು ಕಡೆ ಜೋಳ ಹಾಗೂ ರಾಗಿಗಳು ಪ್ರಮುಖ ಆಹಾರ ಧಾನ್ಯಗಳಾಗಿವೆ. ಇದನ್ನು ಕಾದಂಬರಿಗಳಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ದಲಿತರ 'ಆಹಾರ'ದ ಕುರಿತು ಮಾತಾಡುವಾಗ ಮರೆಯಲಾಗದ ಮತ್ತೊಂದು ಅಂಶವೆಂದರೆ 'ಮದ್ಯಪಾನ'. ದಲಿತರಲ್ಲಿ ಸಾಮಾನ್ಯವಾಗಿ ಸ್ತ್ರೀ ಪುರುಷರಾದಿಯಾಗಿ ಎಲ್ಲಾ ವಯೋಮಾನದವರೂ ಮದ್ಯ ಸೇವಿಸುವ ಕ್ರಮ ಜಾರಿಯಲ್ಲಿದೆ. ಕೆಲವರು ಮದ್ಯ ವ್ಯಸನಿಗಳು ಅಲ್ಲಲ್ಲಿ ಕಾಣಸಿಗುತ್ತಾರೆ. ಹಾಗಂತ ಎಲ್ಲರೂ ಕುಡುಕರಲ್ಲ. ದಲಿತ ಸಮುದಾಯದಲ್ಲಿ ಸ್ತ್ರೀಪುರುಷರೆಲ್ಲರೂ ಒಟ್ಟಾಗಿ ಮದ್ಯ ಸೇವಿಸುವುದು ವಿಶೇಷವಾದ ಸಂಗತಿಗಳಾಗಿ ಇಲ್ಲಿ ಗುರುತಿಸಲಾಗಿದೆ. ದೇವನೂರರ 'ಒಡಲಾಳ','ಕುಸುಮಬಾಲೆ', ಮುಳ್ಳೂರು ನಾಗರಾಜರ 'ಮರಣ ಮಂಡಲ ಮಧ್ಯದೊಳಗೆ', ಮೊಗಳ್ಳಿ ಗಣೇಶರ 'ತೊಟ್ಟಿಲು', 'ಕಿರೀಟ', ಅರವಿಂದ ಮಾಲಗತ್ತಿಯವರ 'ಕಾರ್ಯ', ಮ.ನ.ಜ ಅವರ 'ಮಾಗಿ', 'ಸೂರಪ್ಪ', ಬಿ.ಟಿ ಲಲಿತಾನಾಯಕರ 'ಗತಿ', ಶಿವರುದ್ರ ಕಲ್ಲೋಳಿಕರರ 'ಹೊಲಗೇರಿಯರಾಜಕುಮಾರ' ಕಾದಂಬರಿಯನ್ನು ಈ ಉಪ ಅಧ್ಯಾಯದಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ.

೩.೪. ಶಿಕ್ಷಣ (ಅಕ್ಷರ ಸಂಸ್ಕೃತಿ):

ಸ್ವಾತಂತ್ರ್ಯಾನಂತರ ದಲಿತರ ಶಿಕ್ಷಣಕ್ಕಾಗಿ ಸರಕಾರದ ವತಿಯಿಂದ ಅನೇಕ ಸೌಲಭ್ಯಗಳು ಒದಗಿ ಬಂದರೂ ದಲಿತರಿಗೆಲ್ಲಾ ಶಿಕ್ಷಣದ ಬಾಗಿಲು ತೆರೆದುಕೊಂಡಿಲ್ಲ. ದಲಿತರ ಆರ್ಥಿಕ ಬಿಕ್ಕಟ್ಟುಗಳು ಅವರು ಮಕ್ಕಳನ್ನು ಶಾಲೆಗೆ ಕಳುಹಿಸದಂತೆ ಮಾಡಿರುವುದನ್ನು ಒಪ್ಪಿಕೊಳ್ಳಬೇಕು. ಈಗ ಆಧುನಿಕ ವಿದ್ಯಾಭ್ಯಾಸ ಕೊಡಿಸಬೇಕೆಂದಿದ್ದರೂ, ಕೊಡಿಸಲಾಗದವರು ವಿದ್ಯಾಭ್ಯಾಸದ ಮಹತ್ವದ ಅರಿವಿಲ್ಲದೆ ಅದು ತಮಗಲ್ಲವೆಂದು ನಿರ್ಲಿಪ್ತರಾಗಿರುವವರು ಏಕಕಾಲಕ್ಕೆ ಕಂಡುಬರುತ್ತಾರೆ. ಆಧುನಿಕ ವಿದ್ಯಾಭ್ಯಾಸವನ್ನು ಜ್ಞಾನದ ಅಥವಾ ಅರಿವಿನ ಆರಂಭ ಎಂದು ದಲಿತ ಕಾದಂಬರಿಗಳು ಭಾವಿಸಿವೆ. ಹಾಗೂ ಅಂಥ ಶಿಕ್ಷಿತ ಪಾತ್ರಗಳೇ ನಾಳಿನ ದಲಿತರ ಬಿಡುಗಡೆಯ ಆಶಾಕಿರಣಗಳನ್ನು ಕಾದಂಬರಿಗಳು ಸೂಚಿಸುತ್ತವೆ. ಉದಾಹರಣೆಗೆ ಒಡಲಾಳದ ಶಿವೂ, ಕಾರ್ಯದ ಸೂರ್ಯಕಾಂತ, ಮಾಗಿಯ ವಸಂತ ಇವರೆಲ್ಲರೂ ಅಕ್ಷರ ಸಂಸ್ಕೃತಿಗೆ ಅಣಿಯಾಗಿರುವ ಮೊದಲ ತಲೆಮಾರು. ಇವರ ಭವಿಷ್ಯತ್ತಿನಲ್ಲಿ ದಲಿತರು ಹೊಸತನ್ನು ನಿರೀಕ್ಷಿಸುತ್ತಾರೆ. ದಲಿತರ ಹೋರಾಟ ಇವರ ಮೂಲಕ ಹೊಸ ತಿರುವನ್ನು ಪಡೆದೀತು ಎಂಬ ನಿರೀಕ್ಷೆ ಕಾದಂಬರಿಗಳಲ್ಲಿ ವ್ಯಕ್ತವಾಗುತ್ತದೆ. ಆದ್ದರಿಂದಲೇ ಎಷ್ಟೇ ಅಸಮಧಾನಗಳು, ಅಡಚಣೆಗಳು ಇದ್ದಾಗಲೂ ಶಿಕ್ಷಣ ನೀಡುವ ವಿಚಾರದಲ್ಲಿ ಒಬ್ಬರು ಇನ್ನೊಬ್ಬರ ನೆರವಿಗೆ ಬರುತ್ತಾರೆ ಎಂಬುದನ್ನು ದಲಿತ ಕಾದಂಬರಿಗಳು ಚಿತ್ರಿಸಿವೆ.

ಆಧುನಿಕ ವಿದ್ಯಾಭ್ಯಾಸಕ್ಕೆ ತೆರೆದುಕೊಂಡ ತಕ್ಷಣ ಅವರೆಲ್ಲಾ ಸರ್ವ ವಿದ್ಯಾಸಂಪನ್ನರಾಗುತ್ತಾರೆ ಎಂಬ ಭ್ರಮೆಯನ್ನು ದೇವನೂರರ ಎರಡೂ ಕಾದಂಬರಿಗಳು ನಿರಾಕರಿಸುತ್ತವೆ. ವಿದ್ಯಾಭ್ಯಾಸ ಪಡೆದ ಕೆಲವರು ಅದೇ ವರ್ಗದ ಅವಿದ್ಯಾವಂತರಿಗಿಂತ ಹೆಚ್ಚು ಪರಾವಲಂಬಿಗಳಾಗಿ ಬಿಡುತ್ತಾರೆ ಎಂಬುದನ್ನು ಕಾದಂಬರಿಯಲ್ಲಿ ಗುರುತಿಸಲಾಗಿದೆ. ಶಿಕ್ಷಣದ ಪ್ರಭಾವ ದಲಿತನ ಸಾಂಸ್ಕೃತೀಕರಣದ ಮೇಲೆ ಗಾಢ ಪರಿಣಾಮ ಬೀರಿದೆ. ದಲಿತನಲ್ಲಿನ ಆಂತರಿಕ ಮತ್ತು ಬಾಹ್ಯ ಒತ್ತಡಗಳು ಇದಕ್ಕೆ ಕಾರಣವಾಗಿವೆ. ದಲಿತ ಕಾದಂಬರಿಗಳಲ್ಲಿ ಸಾಂಸ್ಕೃತೀಕರಣದ ಒತ್ತಡ ಮತ್ತು ಪ್ರಭಾವಗಳ ಎಲ್ಲಾ ಅಂಶಗಳನ್ನು ಕಾಣದಿದ್ದರೂ ಪ್ರಮುಖ ಒತ್ತಡ ಪ್ರಭಾವಗಳನ್ನು ಮನಗಾಣಬಹುದಾಗಿದೆ. ದಲಿತ ಸಂಸ್ಕೃತಿಯ ಸಂದರ್ಭದಲ್ಲಿ ಸಾಂಸ್ಕೃತೀಕರಣ ಮೂಲ ಸಂಸ್ಕೃತಿಯ ನಾಶವೆಂದೇ ಹೇಳಬಹುದು. ಪ್ರಧಾನ ಸಂಸ್ಕೃತಿಯಿಂದ ಅಲಕ್ಷ್ಯಕ್ಕೊಳಗಾದ ಸಂಸ್ಕೃತಿಗಳನ್ನು ಕಟ್ಟಿಕೊಡುವ ಕೆಲಸ ವಿದ್ವಾಂಸರಿಂದ ನಡೆಯುತ್ತಿದೆ. ಆದರೆ ಪ್ರಜ್ಞಾವಂತ ದಲಿತ ಸಮುದಾಯ ನಗರೀಕರಣಕ್ಕೊಳಗಾಗುವುದರಿಂದ ಮೂಲ ಸಂಸ್ಕೃತಿಯ ನೆಲೆಗಳನ್ನು ಅರಿಯಲು ಸಂಶೋಧನೆ ನಡೆಸಬೇಕಾಗಿದೆ. ಗ್ರಾಮೀಣ ಪ್ರದೇಶದ ರೈತರು ನಗರದ ಬೆನ್ನು ಹತ್ತಿರುವುದರಿಂದ ಅಥವಾ ನಗರದವರ ಪ್ರಭಾವ ಇವರ ಮೇಲಾಗಿರುವುದರಿಂದ ದಲಿತ ಸಂಸ್ಕೃತಿಯ ಬೇರುಗಳು ಅಲುಗಾಡಲಾರಂಭಿಸಿವೆ. ಈ ಹಿನ್ನಲೆಯಲ್ಲಿ ಅಲಕ್ಷಿತ ಸಂಸ್ಕೃತಿಯ ಅಧ್ಯಯನಗಳು ಹೆಚ್ಚು ಮಹತ್ವವನ್ನು ಪಡೆಯುತ್ತಿವೆ ಎನ್ನಬಹುದು. ಈ ಹಿನ್ನಲೆಯಿಂದ ಆಯ್ದ ದಲಿತ ಕಾದಂಬರಿಗಳನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೩.೫. ಜಾತಿ ಲಿಂಗದ ಪ್ರಶ್ನೆ:

ಮಾತೃಪ್ರಧಾನ ನೆಲೆಯ ದಲಿತ ಕುಟುಂಬದೊಳಗೆ ಗಂಡು ಹೆಣ್ಣಿನ ಮಧ್ಯೆ ನಡೆಯುವ ಯಾಜಮಾನ್ಯದ ಸ್ವರೂಪವೂ ಪಿತೃಪ್ರಧಾನ ಕುಟುಂಬದೊಳಗೆ ನಡೆಯುವ ಪುರುಷನ ಯಾಜಮಾನ್ಯಕ್ಕಿಂತ ಭಿನ್ನ ನೆಲೆಯಲ್ಲಿ ಸಾಗುತ್ತದೆ. ಸಮಾಜದಲ್ಲಿ ನಡೆಯುವ ಶೋಷಣೆಯ ನೆಲೆಯಲ್ಲಿ ಗಂಡು ಹೆಣ್ಣು ಇಬ್ಬರೂ ಸಮಾನ ನೆಲೆಯಲ್ಲಿ ಶೋಷಿತರು. ಆರ್ಥಿಕವಾದ ಬಡತನ ಇಲ್ಲಿ ಶೋಷಣೆಗೆ ಪ್ರಮುಖ ಕಾರಣವಾಗುತ್ತದೆ. ಆದರೆ ಇದಕ್ಕಿಂತ ಭಿನ್ನವಾಗಿ ಲೈಂಗಿಕ ಕಾರಣಕ್ಕಾಗಿ ಹೆಣ್ಣು ಕುಟುಂಬದ ಒಳಗೆ ಸಾಮಾಜಿಕ ವಲಯದಲ್ಲಿಯೂ ಶೋಷಣೆಗೆ ಒಳಗಾಗುತ್ತಾಳೆ. ಮೇಲ್ಜಾತಿಯವರ, ಮೇಲ್ವರ್ಗದವರ ಆರ್ಥಿಕ, ಸಾಮಾಜಿಕ ಶ್ರೇಷ್ಠ ಯಾಜಮಾನ್ಯವೂ ದಲಿತ ಹೆಣ್ಣು ಮಗಳನ್ನು ದೈಹಿಕವಾಗಿ, ಮಾನಸಿಕವಾಗಿ ಶೋಷಿಸುತ್ತದೆ.

ಮೇಲ್ಜಾತಿಯವರ ಜಾತೀಯತೆಯ ಶ್ರೇಷ್ಠತೆಯ ಪ್ರಜ್ಞೆಯು ದಲಿತ ಹೆಣ್ಣುಮಕ್ಕಳನ್ನು ಲೈಂಗಿಕ ಶೋಷಣೆಗೆ ಒಳಗು ಮಾಡಿಸುತ್ತದೆ. ಅಂತೆಯೇ ದಲಿತ ಗಂಡುಗಳು ಕೂಡಾ ಮೇಲ್ಜಾತಿ ಹೆಣ್ಣುಗಳನ್ನು ಲೈಂಗಿಕವಾಗಿ ಬಳಸಿಕೊಳ್ಳುವ ಇನ್ನೊಂದು ಮುಖವೂ ಇಲ್ಲಿದೆ. ಶತ ಶತಮಾನಗಳಿಂದ ತಮ್ಮ ಜನಾಂಗದ ಸ್ತ್ರೀಯರ ಮೇಲೆ ಲೈಂಗಿಕ ಶೋಷಣೆಗಳು ಆಗುತ್ತಿರುವುದನ್ನು ಅರಿತುಕೊಂಡು ದಲಿತ ಗಂಡುಗಳು ಮೇಲ್ಜಾತೀಯ ಸ್ತ್ರೀಯರ ಸಂಬಂಧ ಬೆಳೆಸಿಕೊಳ್ಳುತ್ತಿದ್ದುದು ಒಂದು ಮುಖವಾದರೆ, ಪ್ರೀತಿಸಿದ ಗಂಡು–ಹೆಣ್ಣುಗಳ ಮಧ್ಯೆ ಯಾವುದೇ ಜಾತಿಯ ತಾರತಮ್ಯತೆಗಳು ಅಡ್ಡಿಯಾಗುವುದಿಲ್ಲ ಎಂಬುದು ಇನ್ನೊಂದು ಮುಖವಾಗಿದೆ.

ಒಟ್ಟಿನಲ್ಲಿ ಜಾತಿ ಕುರಿತಾದ ಪರಿಕಲ್ಪನೆಯು ದಲಿತರನ್ನು ಬಹು ವಿಧವಾಗಿ ಕಾಡುತ್ತದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಜಾತಿಯ ಕಾರಣಕ್ಕೆ ಅವಮಾನಕ್ಕೆ ಒಳಗಾದಂತೆ ಮೇಲ್ಜಾತಿಯವರ ಶೋಷಣೆಯು ದಲಿತ ಹೆಣ್ಣುಮಗಳನ್ನು ಲಿಂಗಾಧಾರಿತವಾಗಿಯೂ ಶೋಷಿಸುತ್ತದೆ. ಮೇಲ್ಜಾತಿಯ ಸಾಮಾಜಿಕ ರಚನೆ ಬಹುಮುಖ್ಯವಾದ ಜಾತಿಯ ಘಟಕವು ದಲಿತರಿಗೆ ಸಂಬಂಧಿಸಿದಂತೆ ತಾರತಮ್ಯವನ್ನು ಹುಟ್ಟುಹಾಕಿದೆ. ಈ ಅಂಶವನ್ನು ಗಮನಿಸಬಹುದು. ಇದನ್ನು ಮೂಲಭೂತವಾಗಿ ಹೋಗಲಾಡಿಸಲು ಸಾಧ್ಯ ಎಂಬ ಅಂಶ ಮನವರಿಕೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಆಯ್ದುಕೊಂಡ ದಲಿತ ಕಾದಂಬರಿಗಳನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ೪.

ಬಂಡಾಯ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆ ಸ್ವರೂಪ

ಬಂಡಾಯ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯದ ವಿಶಿಷ್ಟವಾದ ಘಟ್ಟವೆನ್ನಬಹುದು. ನವೋದಯ, ಪ್ರಗತಿಶೀಲ, ನವ್ಯಗಳ ಅನಂತರದ ಸಾಹಿತ್ಯ ಚಳುವಳಿ ಯಾಗಿ ಬಂಡಾಯವನ್ನು ಗುರುತಿಸಬಹುದು. ಇದನ್ನು ನವ್ಯೋತ್ತರ ಸಾಹಿತ್ಯವೆಂದೂ ಕರೆಯಲಾಗಿದೆ. ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಕನ್ನಡ ಸಾರಸ್ವತ ಪ್ರಪಂಚದಲ್ಲಿ ಕೇಳಿ ಬರುತ್ತಿರುವ ಎಲ್ಲಾ ಪ್ರಗತಿಪರ ಹಾಗೂ ದಲಿತ ಬರಹಗಾರರಿಂದ ಸೃಷ್ಟಿಯಾಗುತ್ತಿರುವ ಸಾಹಿತ್ಯ ಎನ್ನಬಹುದು.

೧೯೭೦ರ ದಶಕದಲ್ಲಿ ಅನೇಕ ಸಾಮಾಜಿಕ, ರಾಜಕೀಯ ಘಟನೆಗಳು ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆಗಳನ್ನು ತಂದವು. ಬದುಕಿನಲ್ಲಿ ಉಂಟಾದ ಕೋಲಾಹಲದಿಂದಾಗಿ ಸಾಹಿತ್ಯದಲ್ಲೂ ಬದಲಾವಣೆಗಳು ಅನಿವಾರ್ಯವೆನಿಸಿ ಬಂಡಾಯದ ಧ್ವನಿ ಮೊಳಗಿತು. ಶತ ಶತ ಮಾನಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ಶೋಷಣೆಗೆ, ಅಪಮಾನಕ್ಕೆ, ಕ್ರೌರ್ಯಕ್ಕೆ ಬಲಿಯಾದ ಪ್ರಜ್ಞಾವಂತ ಲೇಖಕ ಬರೆದ ಪ್ರತಿಭಟನಾ ಸಾಹಿತ್ಯವೇ ನಿಜವಾದ ದಲಿತ ಸಾಹಿತ್ಯವೆನಿಸಿತು. ದಲಿತ ಸಾಹಿತ್ಯವನ್ನು ಒಳಗೊಂಡುದೇ ಬಂಡಾಯ ಸಾಹಿತ್ಯ. ಸಾಹಿತ್ಯ ಸೃಷ್ಟಿ ಸಾಂಸ್ಕೃತಿಕ ಬದಲಾವಣೆಗಳಿಗಾಗಿ ಎಂದು ಹೇಳಿಕೊಂಡ ಸಾಹಿತ್ಯ ಸಂಸ್ಕೃತಿಯಲ್ಲಿ ಪ್ರತಿಷ್ಠಾಪಿತ ಮೌಲ್ಯಗಳು ಜಡವಾದಾಗ, ಪ್ರತಿಗಾಮಿಯಾದ ಅವುಗಳ ವಿರುದ್ಧ ಹೋರಾಡುವುದು ಬಂಡಾಯ. ಅದು ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಾಗ ಅದು ಬಂಡಾಯ ಸಾಹಿತ್ಯವೆನಿಸುತ್ತದೆ.

ಬಂಡಾಯ ಸಾಹಿತಿ ಸಾಮಾಜಿಕ ಸಂಬಂಧಗಳ ಹಿಂದಿರುವ ಮೋಸಗಳನ್ನು, ಅಮಾನವೀಯತೆಯನ್ನು ಗುರುತಿಸಿ ಸಮಾಜ ವ್ಯವಸ್ಥೆಯ ವಿರುದ್ಧ ಸ್ಫೋಟಿಸಲು ಆರಂಭಿಸಿದ. ಈ ಸ್ಫೋಟನೆಯ ಆಳದಲ್ಲಿ ಹೊಸ ಸಮಾಜ ರಚನೆಯ ಕಳಕಳಿ ಅಸ್ತಿತ್ವದಲ್ಲಿರುವ ಸಮಾಜವನ್ನು ಕುರಿತು ಉಗ್ರವಾದ ಅಸಹನೆ ಒಂದರೊಡನೊಂದು ಬೆಸೆದುಕೊಂಡಿರುತ್ತವೆ. ಅಸಮಾನತೆ, ಅನ್ಯಾಯ, ಶೋಷಣೆಗಳನ್ನು ಮೂಲಧನ ಮಾಡಿಕೊಂಡು ಯುಗ ಯುಗಗಳಿಂದ ಬಡವರನ್ನು ಮತ್ತು ಜಾತಿಯ ದೃಷ್ಟಿಯಿಂದ ಹೀನರಾದವರನ್ನು ತುಳಿಯುತ್ತಾ ಬಂದ ಯಜಮಾನ

ಸಂಸ್ಕೃತಿಯ ವಿರುದ್ಧ ಬಂಡೇಳುವ ಕೆಚ್ಚು ಮತ್ತು ಅಂತಹ ಪ್ರತಿಭಟನೆಯ ಹಿಂದಿರುವ ಪ್ರಾಮಾಣಿಕತೆಯೇ ಬಂಡಾಯ ಸಾಹಿತ್ಯದ ಮೂಲ ನೆಲೆ ಎಂದು ಗುರುತಿಸಲಾಗಿದೆ.

ಹೀಗಾಗಿ ಅನ್ಯಾಯ, ಶೋಷಣೆಗಳನ್ನು ಮೂಲವಸ್ತುವನ್ನಾಗಿ ಮಾಡಿಕೊಂಡು ತಲೆತಲಾಂತರದಿಂದ ಬಡವರನ್ನು, ದೀನರನ್ನು ತುಳಿಯುತ್ತ ಬಂದಂತಹ "ಯಜಮಾನ ಸಂಸ್ಕೃತಿಯ ವಿರುದ್ಧ ಬಂಡೇಳುವ ಒಂದು ಪ್ರಾಮಾಣಿಕ ಪ್ರಯತ್ನವು ಬಂಡಾಯ ಸಾಹಿತ್ಯದ ಮೂಲ ನೆಲೆಯಾಗಿದೆ. ಬಂಡಾಯ ಸಾಹಿತ್ಯ ಚಳುವಳಿಯು ಒಂದು ನಿರ್ದಿಷ್ಟವಾದ ಮೇಲ್ವರ್ಗದವರನ್ನು ಪ್ರತಿಭಟಿಸುವುದಾಗದೆ, ಶೋಷಿಸುವ ಎಲ್ಲಾ ವರ್ಗದವರನ್ನು ವಿರೋಧಿಸುವುದರ ಮೂಲಕ ತಮ್ಮ ಬೆಳವಣಿಗೆಯನ್ನು ಸಾಧಿಸುವ ಯತ್ನವಾಗಿದೆ.

ಈ ಹಿನ್ನಲೆಯಲ್ಲಿ ಬರಗೂರರ 'ಸೂತ್ರ',' ಒಂದು ಊರಿನ ಕಥೆ', 'ಸೂರ್ಯ', 'ಬೆಂಕಿ', ಕುಂ.ವೀ ಅವರ 'ಕೆಂಡದಮಳೆ', 'ಕೊಟ್ರ ಹೈಸ್ಕೂಲಿಗೆ ಸೇರಿದ್ದು', ಚೆನ್ನಣ್ಣ ವಾಲೀಕಾರರ 'ಹುಲಿಗೆಮ್ಮ', ವೀರಪ್ಪ ಮೊಯಿಲಿಯವರ 'ತೆಂಬರೆ', ಹೊರೆಯಾಲ ದೊರೆಸ್ವಾಮಿ ಅವರ 'ಹುಡುಕಾಡಿ ಬಂದ ಹೊನ್ನಿನ ಬದುಕು' ಮೊದಲಾದ ಕಾದಂಬರಿಗಳನ್ನು ಈ ಭಾಗದ ಅಧ್ಯಯನಕ್ಕೆ ಒಳಪಡಿಸಿ ಸಾಂಸ್ಕೃತಿಕ ಸಂರಚನೆಗಳನ್ನು ಶ್ರಮ, ಆರ್ಥಿಕತೆ, ದೇಸಿ ಜೀವನಕ್ರಮ, ಜಾತಿ ವರ್ಗಗಳ ಕುರಿತ ಪ್ರಶ್ನೆ ಮೊದಲಾದ ಅಂಶಗಳ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

೪.೧: ಶ್ರಮ:

ಬಂಡಾಯ ಕಾಲಘಟ್ಟದ ಕಾದಂಬರಿಗಳು ಶ್ರಮದ ಪರಿಕಲ್ಪನೆಯನ್ನು ಬಹಳ ಮುಖ್ಯವಾಗಿ ಗುರುತಿಸಿಕೊಳ್ಳುತ್ತವೆ. ಕುಂ. ವೀರಭದ್ರಪ್ಪನವರ 'ಕೊಟ್ರ ಹೈಸ್ಕೂಲಿಗೆ ಸೇರಿದ್ದು' ಕಾದಂಬರಿಯಲ್ಲಿ ಕೊಟ್ರನ ತಂದೆಯಾದ ದಿಬ್ಬ ಮತ್ತು ತಾಯಿ ನಾಗವ್ವನ ಶ್ರಮದ ಫಲವೇ ಕೊಟ್ರ ಹೈಸ್ಕೂಲು ಸೇರುವಂತಾಗುವುದು. ಅನಾದಿ ಕಾಲದಿಂದಲೇ ಆಳುವವರು ಮತ್ತು ಆಳಿಸಿಕೊಳ್ಳುವ ಸಮುದಾಯಗಳು ನಮ್ಮ ಸಮಾಜದಲ್ಲಿ ಕಾಣಿಸುತ್ತಾ ಹೋಗುತ್ತದೆ. ಹಾಗೆಯೇ ಈ ಕಾದಂಬರಿಯಲ್ಲಿ ಸಮಾಜದಿಂದ ಅಂಚಿಗೆ ಸರಿಸಿದ ಸಮುದಾಯವೊಂದು ತನ್ನ ಮಗನನ್ನು ವಿದ್ಯೆ ಕಲಿಯುವಂತೆ ಮಾಡಲು ಪಡುವ ಹರ ಸಾಹಸವನ್ನು ಕಾದಂಬರಿ ಉದ್ದಕ್ಕೂ ತಿಳಿಸುತ್ತಾ ಹೋಗುತ್ತದೆ. ಈ ಕಾದಂಬರಿಯ ಓದಿನ ಮೂಲಕ ಕಂಡುಕೊಳ್ಳುವ ಮುಖ್ಯಾಂಶವೆಂದರೆ ಸಮಾಜದ ಪರಿವರ್ತನೆ ಮತ್ತು ಸರ್ಕಾರ ಮತ್ತು ಕಾನೂನು ವ್ಯವಸ್ಥೆ ದಲಿತ ಪರವಾಗಿಯೂ ಕ್ರಿಯಾತ್ಮಕವಾಗಿ ಕೆಲಸ ಮಾಡೋದು ಕಾದಂಬರಿಯೊಳಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಸಮಾಜದ ಮೂಲಭೂತ ತಿರುವು ಕಾದಂಬರಿಯ ಕೊನೆಯಲ್ಲಿ ಕಾಣಿಸುತ್ತದೆ. ಪೊಲೀಸ್ ಅಧಿಕಾರಿಯೊಬ್ಬರ ಸಹಕಾರ ಕೊಟ್ರನನ್ನು ಹೈಸ್ಕೂಲ್ ಮೆಟ್ಟಲೇರುವಂತೆ ಮಾಡುವುದು ಕಾದಂಬರಿಯ ವಿಶೇಷ. ಇಲ್ಲಿ ದಿಬ್ಬನ ಪಾತ್ರ ಬಹಳ ವಿಶಿಷ್ಟವಾಗಿ ಕಾಣಿಸುತ್ತದೆ. ಹಿಂದಿನಿಂದಲೂ ಸಮಾಜ ಕೆಳವರ್ಗದವರನ್ನು ಹೇಗಿಟ್ಟಿದೆಯೋ ಹಾಗೇ ನಡೆದುಕೊಂಡು ಬರುವ ದಿಬ್ಬ ಕಾದಂಬರಿಯ ಕೊನೆಗಾಗುವಾಗ ಇಡೀ ಭ್ರಷ್ಟ ಸಮಾಜದ ವಿರುದ್ಧ ತಿರುಗಿ ಬೀಳುವುದನ್ನು ಕಾಣಬಹುದು.

ಬರಗೂರರ 'ಸೂರ್ಯ' ಕಾದಂಬರಿಯನ್ನು ಸ್ಥೂಲವಾಗಿ ಗಮನಿಸಿದಾಗ ಜಮೀನ್ದಾರಿ ವ್ಯವಸ್ಥೆಯೊಂದು ತನ್ನ ಮನಬಂದಂತೆ ವರ್ತಿಸಲು ಹೋಗಿ ಕೊನೆಗೆ ತಾನೇ ಹಾಕಿದ ಮೋಸದ ಬಲೆಯೊಳಗೆ ತಾನೇ ಸಿಕ್ಕಾಕಿಕೊಳ್ಳುವ ಪ್ರಸಂಗವನ್ನು ತಿಳಿಸುವಂತಿದೆ. ಜಮೀನ್ದಾರಿ ವ್ಯವಸ್ಥೆಯೊಳಗೆ ಮಾದಿಗರ ಕರಿಯನೊಬ್ಬ ಕೊಟ್ಟಿಗೆ ಕೆಲಸ ಮಾಡಿಕೊಂಡು ದಿನ ಕಳೆಯುತ್ತಿದ್ದವ. ಅಲ್ಲದೆ ಜಮೀನ್ದಾರ ಹೇಳಿದ ಕೆಲಸವನ್ನೆಲ್ಲಾ ಚಾಚೂ ತಪ್ಪದೆ ನಿರ್ವಹಿಸುತ್ತಿದ್ದವ. ಆದರೂ ತನ್ನ ಯಜಮಾನನ ವಿನಾಕಾರಣದ ಕೋಪಕ್ಕೆ ಬಲಿಯಾಗುತ್ತಿದ್ದವ ಮಾದಿಗರ ಕರಿಯನೇ ಆಗಿದ್ದ. ಅದು ತನ್ನ ಕೆಲಸದಲ್ಲಿ ನಿಷ್ಠೆಯನ್ನು ತೋರಿದವನಾಗಿದ್ದ. ಶತ ಶತಮಾನಗಳಿಂದಲೂ ತುಳಿತಕ್ಕೆ ಒಳಗಾದ ಜನರ ಪ್ರತಿನಿಧಿಯಾಗಿ ಕರಿಯ ಕಾಣಿಸಿಕೆಣಟಿಜಜಜಿುಟಿಜಜಳ್ಳುತ್ತಾನೆ. ಎಷ್ಟು ದೌರ್ಜನ್ಯಕ್ಕೆ ಒಳಗಾದರೂ ಮಾತಿಲ್ಲದೆ ಮೂಕನಂತೆ ಇರುವ ಸ್ಥಿತಿ ಕೆಳವರ್ಗದವರದ್ದು. ಅಂತಹ ಹಸಿ ಹಸಿ ನೋವನ್ನು ಕಾದಂಬರಿ ಚಿತ್ರಿಸುವುದರ ಜೊತೆ ಜೊತೆಗೆ ತಾನು ಪಟ್ಟ ಶ್ರಮಕ್ಕೆ ಬೆಲೆಯೇ ಇಲ್ಲ ಎಂದಾಗುವ ಇಡೀ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಮನಸ್ಥಿತಿಯನ್ನು ಕಾದಂಬರಿಯೊಳಗೆ ನಾವು ಗುರುತಿಸಬಹುದು.

ಎಂ. ವೀರಪ್ಪ ಮೊಯಿಲಿ ಅವರು ಸಾಹಿತಿಯಾಗಿ ಹಾಗೂ ರಾಜಕಾರಣಿಯಾಗಿ ಸಮಾಜದ ಅಂಚಿನಲ್ಲಿ ಇರುವವರ ಬಗ್ಗೆ, ಹಾಗೂ ಅವರ ಪರಿಸ್ಥಿತಿಯ ಬಗ್ಗೆ ಅಪಾರ ಕಾಳಜಿ ಇದೆ ಎನ್ನುವುದನ್ನು ಅವರ 'ತೆಂಬರೆ'ಕಾದಂಬರಿಯ ಮೂಲಕ ಹಿಡಿದಿಟ್ಟಿರುವ ಪ್ರಯತ್ನವನ್ನು ನಾವು ಗುರುತಿಸಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಎರಡು ವಿಶಿಷ್ಟ ಸಾಂಸ್ಕೃತಿಕ ಸಂಗತಿಗಳಲ್ಲಿ ಯಕ್ಷಗಾನ ಮತ್ತು ಭೂತಾರಾಧನೆ ಮುಖ್ಯವಾದುದು. ದಕ್ಷಿಣ ಕನ್ನಡ ಜನತೆಯ ಅವಿಭಾಜ್ಯ ಅಂಗವಾಗಿರುವ ಭೂತಾರಾಧನೆ ಅನೇಕ ಅಂತರ್ ವೈರುಧ್ಯಗಳಿಂದ ಕೂಡಿದ ಒಂದು ಪರಂಪರಾಗತ ಧಾರ್ಮಿಕ ಸಾಂಸ್ಕೃತಿಕ ಆಚರಣೆ. ತಮ್ಮ ಜನಾಂಗದ ಅಥವಾ ಸಮುದಾಯದ ಒಳಿತಿಗಾಗಿ ಯಾವುದಾದರೂ ಒಂದು ಬಗೆಯಲ್ಲಿ ಶ್ರಮಿಸಿ ಆ ಕಾರಣದಿಂದಾಗಿಯೇ ಜೀವತೆತ್ತ ಜಾನಾಂಗಿಕ ನಾಯಕರನ್ನು, ನಾಯಕಿಯರನ್ನು ಮರಣಾನಂತರವೂ ಪೂಜಿಸಿ ಇಷ್ಟಾರ್ಥ ಸಿದ್ಧಿಯನ್ನು ಪಡೆಯುವ ವಿಧ್ಯುಕ್ತಕ್ರಿಯೆ. ಇಲ್ಲಿ ಗಮನಿಸಲೇಬೇಕಾದ ಕುತೂಹಲದ ಸಂಗತಿಯೆಂದರೆ ಈ ರೀತಿ ಮೃತರ ಅಥವಾ ಭೂತಗಳ ಆರಾಧನೆ ನಡೆಸುವವರು ಸಮಾಜದ ಮೇಲ್ವರ್ಗದ ಜನರು ಎಂದರೆ ಆ ಭೂತಗಳನ್ನು ತಮ್ಮ ಅಧಿಕಾರದಿಂದ ಅಥವಾ ಹಣದಿಂದ ತಮ್ಮ ಕೆಲಸ ನಡೆಯುವಂತೆ ಕೈಚಳಕ ತೋರಿಸುವವರು. ಅಂದರೆ ಎಷ್ಟೋ ಸಂದರ್ಭಗಳಲ್ಲಿ ಈ ಭೂತ ಅಂದರೆ ಮಧ್ಯಮ ಜಗತ್ತಿನ ದೈವ ಎನ್ನುವಂತದ್ದು ಸತ್ಯದ ಪರವಾಗಿ ಹೋರಾಟ ಮಾಡಿ ಸತ್ಯವನ್ನು ಗೆಲ್ಲಿಸಲು ಪ್ರಯತ್ನಿಸಿದ್ದನ್ನು ಕಾದಂಬರಿಯೊಳಗೆ ಗುರುತಿಸಲಾಗಿದೆ. ಮುಖ್ಯವಾಗಿ ಈ ಕಾದಂಬರಿ ಸ್ವಂತ ಭೂಮಿ ಇಲ್ಲದ, ವ್ಯವಹಾರಿಕ ಶಿಕ್ಷಣವಿಲ್ಲದ, ಕೂಲಿನಾಲಿ ಮಾಡಿಯೇ ಬದುಕ ಬೇಕಾದ ಪಂಬದರನ್ನು, ಅವರ ಬದುಕಿನ ರೀತಿಯನ್ನು ತಿಳಿಸುವ ಕಾದಂಬರಿಯಾಗಿ ಅವರ ಶ್ರಮದ ಪರಾಕಾಷ್ಠೆಯನ್ನು ತಿಳಿಸುವಂತಿದೆ. ಈ ಹಿನ್ನೆಲೆಯಲ್ಲಿ ಆಯ್ದ ಬಂಡಾಯ ಕಾದಂಬರಿಗಳಲ್ಲಿ ಶ್ರಮದ ಪರಿಕಲ್ಪನೆ ಹೇಗೆ ಮೂಡಿಬಂದಿದೆ ಎಂಬುದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೪.೨. ಜಾತಿ ವರ್ಗಗಳ ಕುರಿತ ಪ್ರಶ್ನೆ

ಜಾತಿ ಮತ್ತು ಧರ್ಮಗಳು ಒಂದಕ್ಕೊಂದು ತಳುಕು ಹಾಕಿಕೊಂಡೇ ಯಾಜಮಾನ್ಯ ನಡೆಸುತ್ತದೆ ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯಲ್ಲಿ ಅತ್ಯಂತ ಕೆಳಗೆ ಇರುವವರೆಂದು ಗುರುತಿಸಲಾಗುವ ದಲಿತರು ತಾವು ಕೀಳು ಜಾತಿಯವರೆಂಬ ಕಾರಣಕ್ಕಾಗಿ ತಮ್ಮ ಮೇಲಿನ ಜಾತಿಯವರಿಂದ ವಿಭಿನ್ನ ಕಾರಣಗಳಿಗೆ ಶೋಷಣೆಗೊಳಗಾಗುತ್ತಾರೆ. ಮೇಲ್ವರ್ಗದವರ, ಮೇಲ್ಜಾತಿಯವರ ಹಿತಾಸಕ್ತಿಗೆ ಬೇಕಾದಂತೆ ವರ್ತಿಸುವುದರ ಮೂಲಕ ಕೆಳಜಾತಿಯವರು ತಮ್ಮತನವನ್ನು ಕಳೆದುಕೊಳ್ಳುತ್ತಾರೆ ಶಿಕ್ಷಣ, ಉದ್ಯೋಗ, ಜೀತಗಾರಿಕೆ ಈ ಎಲ್ಲಾ ಕಾರಣಗಳಿಗಾಗಿ ದಲಿತರು ಮೇಲ್ಜಾತಿಯವರಿಂದ ಶೋಷಣೆಗೊಳಗಾಗುವುದನ್ನು ಬಂಡಾಯ ಕಾಲಘಟ್ಟದ ಕಾದಂಬರಿಕಾರರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ.

ಕುಂ. ವೀರಭದ್ರಪ್ಪನವರ 'ಕೊಟ್ರ ಹೈಸ್ಕೂಲಿಗೆ ಸೇರಿದ್ದು' ಕಾದಂಬರಿಯಲ್ಲಿ ತನ್ನ ಮಡದಿ ನಾಗವ್ವ ಗರ್ಭಿಣಿಯಾಗಿರುವಾಗ ಕೆಳ ಜಾತಿಯ ಕಾರಣಕ್ಕಾಗಿಯೇ ಡಾಕ್ಟರ್ ಮುಟ್ಟಬಾರದೆಂಬ ಕಾರಣಕ್ಕೆ ಸೂಜಿ ಕೊಡದೆ, ಗುಳಿಗೆ ಕೊಡದ ಕಾರಣ ಆಕೆಗೆ ಗರ್ಭಪಾತವಾಯಿತು. ಹಾಗಾಗಿ ತನಗೆ ಮುಂದೊಂದಿನ ಗಂಡು ಮಗು ಹುಟ್ಟಿದರೆ ಓದ್ಸಿ ಡಾಕ್ಟರರನ್ನಾಗಿ ಮಾಡುತ್ತೇನೆಂದು ದಿಬ್ಬಾ ಶಪಥ ಮಾಡಿದ್ದ ಎಂಬ ವಿಚಾರ ಕಾದಂಬರಿಯೊಳಗೆ ಬರುತ್ತದೆ. ಜಾತಿಯ ಕಾರಣಕ್ಕಾಗಿ ಮಾನವೀಯತೆಯನ್ನು ಮರೆತು ಮೆರೆದಾಡುವ ಮೇಲ್ವರ್ಗದ ವಿರುದ್ಧ ದಿಬ್ಬನ ಪ್ರತಿರೋಧವನ್ನು ಕಾದಂಬರಿಯಲ್ಲಿ ಗುರುತಿಸಬಹುದು. ಅಲ್ಲದೆ ಕಳ್ಳತನದ ಆರೋಪ ಹೊರಿಸಿ ಇನ್ಸ್ಪೆಕ್ಟರ ಕೈಯ ಹೊಡೆತದಿಂದ ದಿಬ್ಬ ಅವಮಾನವನ್ನು ಸಹಿಸಲಾರದೆ, ತನ್ನ ಮಗನನ್ನು ಓದಿಸಿ ಇನ್ಸ್ ಪೆಕ್ಟರನ್ನಾಗಿ ಮಾಡ್ತೀನಿ ಅಂತ ಶಪಥ ಮಾಡುವುದು ವ್ಯವಸ್ಥೆಯ ವಿರುದ್ಧದ ಪ್ರತಿರೋಧವಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲದೆ ತನಗೆ ಮೋಸ ಮಾಡಿದ ಗೌಡನಿಗೆ ಪ್ರತೀಕಾರ ತೀರಿಸಲು ತನ್ನ ಮಗನನ್ನು ವಕೀಲನನ್ನಾಗಿ ಮಾಡುತ್ತೇನೆಂಬ ಛಲ ಕೂಡ ಯಜಮಾನ್ಯ ವ್ಯವಸ್ಥೆ ವಿರುದ್ಧದ ಪ್ರತಿರೋಧವೇ ಆಗಿದೆ. ಈ ಮೊದಲಾದ ಎಲ್ಲಾ ಅಂಶಗಳನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ. ಚನ್ನಣ್ಣ ವಾಲೀಕಾರರ 'ಹುಲಿಗೆಮ್ಮ' ಕಾದಂಬರಿಯಲ್ಲಿ ಮುಖ್ಯವಾಗಿ ಜಾತಿಯ ಕಾರಣಕ್ಕಾಗಿ ದಲಿತ ಹೆಣ್ಣೊಬ್ಬಳು ಯಾವ ರೀತಿ ಶೋಷಣೆಗೆ ಒಳಗಾಗುತ್ತಾಳೆ ಮತ್ತು ಸಮಾಜ ನೋಡುವ ದೃಷ್ಟಿಕೋನ ಏನು ಎಂಬುದನ್ನು ವಿವರಿಸುವ ಪ್ರಯತ್ನವನ್ನು ಈ ಭಾಗದಲ್ಲಿ ಮಾಡಲಾಗಿದೆ. ಬರಗೂರರ 'ಒಂದು ಊರಿನ ಕಥೆ'ಯಲ್ಲಿ ಜಾತಿ ವ್ಯವಸ್ಥೆಯಿಂದಾಗಿ ಅಸಾಯಕ ಹೆಣ್ಣೊಬ್ಬಳು ದುರಂತ ಅಂತ್ಯವನ್ನು ಕಾಣುವುದನ್ನು ಗುರುತಿಸುವ ಮೂಲಕ ಮಾದಿಗ ರಾಮನ ಪಾತ್ರವು ಇಡೀ ವ್ಯವಸ್ಥೆಯನ್ನು ಬುಡಮೇಲು ಮಾಡಲು ಪ್ರಯತ್ನಿಸುವುದನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ವೀರಪ್ಪ ಮೊಯಿಲಿಯವರ 'ತೆಂಬರೆ' ಕಾದಂಬರಿಯಲ್ಲಿ ತನ್ನ ಪರಂಪರಾಗತ ವೃತ್ತಿಯನ್ನು ತಿರಸ್ಕರಿಸಿ, ಸಮುದಾಯದಿಂದ ಹೊರಬರದೆ ತಮ್ಮ ಮೇಲಾಗುವ ಶೋಷಣೆಯಿಂದ ಮುಕ್ತಿ ಪಡೆಯಲು ಬಯಸಿ, ಅದರಂತೆ ಬದುಕನ್ನು ಕಟ್ಟಿಕೊಂಡ, ಸಮಾಜದಲ್ಲಿ ಹೆಮ್ಮೆಯಿಂದ ಗುರುಸಿಕೊಂಡ ಅನೇಕ ಪಾತ್ರಗಳನ್ನು ಈ ಕಾದಂಬರಿಯ ಮೂಲಕ ಗುರುತಿಸಲಾಗಿದೆ. ಅಲ್ಲದೆ ಜಾತಿಯ ಹೆಸರಲ್ಲಿ ಕೊನೆಯ ಸ್ಥಾನದಲ್ಲಿರುವ ಸಮುದಾಯವೂ ಉಳಿದವರೆಲ್ಲರಿಂದಲೂ ಶೋಷಣೆಗೆ ಒಳಗಾಗುತ್ತಿದ್ದುದನ್ನು ಈ ಭಾಗದಲ್ಲಿ ಗುರುತಿಸಲಾಗಿದೆ.

ಹಳ್ಳಿ ಪ್ರದೇಶಗಳಲ್ಲಿ ಜಾತಿವ್ಯವಸ್ಥೆ ಎನ್ನುವುದು ಎಷ್ಟೊಂದು ಬಿಗಿಯಾಗಿತ್ತೆಂದರೆ ಪ್ರೇಮ ವಿವಾಹಕ್ಕೆ ಯಾವುದೇ ಆಸ್ಪದ ಎನ್ನುವುದೇ ಇರಲಿಲ್ಲ. ಆ ಕಾರಣಕ್ಕಾಗಿ ಭೂತಕಟ್ಟುವವರಿಂದ ನುಡಿ ಹೇಳಿಸಿ ಪ್ರೇಮಿಗಳನ್ನು ದೂರ ಮಾಡುವ ಕೆಲಸ ನಡೆಯುತಿತ್ತಾದರೂ ಕಾದಂಬರಿಯಲ್ಲಿ ಬರುವ ಪಿಜಿನ ಪಂಬದ ಮುಗ್ಧ ಪ್ರೇಮಿಗಳನ್ನು ಬಲಿಕೊಡಲು ಮನಸ್ಸಿಲ್ಲದೆ ತನ್ನನ್ನು ತಾನೇ ಬಲಿ ಕೊಡಲು ನಿರ್ಧಾರ ಮಾಡಿರುವುದನ್ನು ಕಾದಂಬರಿ ತಿಳಿಸುತ್ತದೆ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡ ಹಾಗೆ ಈ ಅಧ್ಯಯನದಲ್ಲಿ ಈ ಭಾಗವನ್ನು ವಿಶ್ಲೇಷಿಸಲಾಗಿದೆ.

ಹೊರೆಯಾಲ ದೊರೆಸ್ವಾಮಿ ಅವರ 'ಹುಡುಕಾಡಿ ಬಂದ ಹೊನ್ನಿನ ಬದುಕು' ಎಂಬ ಕಾದಂಬರಿಯಲ್ಲಿ ಶತಶತಮಾನಗಳಿಂದಲೂ ಗಮನಿಸುತ್ತಾ ಬಂದಂತೆ ಎಲ್ಲರಿಗಿಂತಲೂ ಶೋಷಣೆಗೆ ಒಳಗಾದವರಲ್ಲಿ ಹೆಣ್ಣು ಮುಖ್ಯವಾಗಿ ಕಾಣಿಸಿಕೊಳ್ಳುತ್ತಾಳೆ. ಹಾಗಾಗಿ ಕಾದಂಬರಿ ಬಡತನದಲ್ಲೂ ಬದುಕನ್ನು ಕಟ್ಟಲು ಬಂದ ಹೆಣ್ಣು ಮಗಳೊಬ್ಬಳ ಬದುಕಿನ ದಾರುಣ ಚಿತ್ರಣವನ್ನು ನೀಡುವುದರ ಜೊತೆಗೆ, ಇಂಥ ಹೆಣ್ಣುಗಳು ನಮ್ಮ ಸಮಾಜದ ಮಧ್ಯೆ ಎಲೆಮರೆಯ ಕಾಯಿಯಂತೆ ಬಂದು ಸಂದು ಹೋಗಿದ್ದಾರೆ. ನಿಕೃಷ್ಟ ಬದುಕನ್ನು ಬದುಕುತ್ತಿರುವವರ ಬದುಕಿನ ಕತ್ತಲನ್ನು ಅಳಿಸಿ, ಅಂಧಕಾರವನ್ನು ತೊಲಗಿಸಿ, ಅವರಿಗೂ ಬೆಳಕನ್ನು ತೋರಿಸಲು ಸಾಧ್ಯ ಎನ್ನುವ ಶಿವನಂಜುವಿನಂತಹ ಪಾತ್ರಗಳು ನಮ್ಮ ಸಮಾಜದಲ್ಲಿ ಇನ್ನೂ ಅನೇಕರಿಂದ ಸಾಧ್ಯವಾಗಿಸಬಹುದು ಎಂಬ ಆಶಯವನ್ನು ಕಾದಂಬರಿ ತಿಳಿಸುವಂತಿದೆ. ಬಂಡಾಯದ ಆಲೋಚನೆಯನ್ನು ಹೊಂದಿದ ಕಾದಂಬರಿಯನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೪.೩. ದೇಸಿ ಜೀವನ ಕ್ರಮ

ಒಂದೊಂದು ಕಾಲಘಟ್ಟದಲ್ಲೂ ಕಥಾ ಸಾಹಿತ್ಯ ಬಿಟ್ಟುಕೊಟ್ಟ ಧೋರಣೆಗಳು ವಿಶಿಷ್ಟ ಬಗೆಯವು. ದಲಿತ ಬಂಡಾಯದ ಸಂದರ್ಭದಲ್ಲೂ ಕಾದಂಬರಿ ಪ್ರಕಾರ ಗ್ರಾಮಾಂತರ ನೆಲೆಗಳ ದಲಿತ ಕುಟುಂಬಗಳ ಸಮಸ್ಯೆಗಳನ್ನು, ಅವರ ಸಾಂಸ್ಕೃತಿಕ ಸಂಪನ್ನತೆಯನ್ನ ಸ್ಥಿತ್ಯಂತರಗೊಳ್ಳುತ್ತಿರುವ ಮೌಲ್ಯಗಳೊಂದಿಗಿನ ಹೋರಾಟವನ್ನು, ತಮ್ಮ ಸಮಸ್ಯೆಗಳ ಬಗೆಗಿನ ತಿಳುವಳಿಕೆಯನ್ನು ನಿರೂಪಿಸುವಲ್ಲಿ ಗಮನಾರ್ಹ ಪಾತ್ರವಹಿಸಿತು. ಮೀಸಲಾತಿ, ರಾಜಕೀಯ ಪ್ರಜ್ಞೆ, ಆರ್ಥಿಕ ಸಮಸ್ಯೆ, ಸಾಮಾಜಿಕ ಸಮಸ್ಯೆ ಇತ್ಯಾದಿಗಳ ಬಗೆಗೂ ಅವು ಚರ್ಚಿಸದೇ ಬಿಡಲಿಲ್ಲ. ವಿಪುಲ ಸಂಖ್ಯೆಯಲ್ಲಿ ಹೊರಬೀಳುತ್ತಿರುವ ಕಾದಂಬರಿಗಳ ರಚನಾ ಸ್ವರೂಪಕ್ಕಿಂತ ಭಿನ್ನವಾದ ರಚನೆಗಳು ಕಂಗೊಳಿಸಿದವು.

ಆಧುನಿಕತೆ ಎನ್ನುವಂತದ್ದು ಸಮಾಜವನ್ನು ಕುರಿತೇ ಹೇಳಬಹುದಾದ ಸಂಗತಿ. ಸಮಾಜ ಚಲನ ಶೀಲವಾದುದರಿಂದ ಹಳೆಯದನ್ನೇ ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ನಮ್ಮ ಜೀವನ ವಿಧಾನ ಬದಲಾವಣೆ ಆದಂತೆಲ್ಲ ನಮಗರಿವಿಲ್ಲದ ಹಾಗೆ ಆಧುನಿಕತೆ ಬದುಕಿನಲ್ಲಿ ಪ್ರವೇಶಿಸುವಂತಾಗುತ್ತದೆ. ಇದರಿಂದ ಪ್ರತಿಯೊಬ್ಬ ವ್ಯಕ್ತಿ ಬದಲಾವಣೆಗೆ ಒಳಗಾಗುವುದರ ಮೂಲಕ ಅಧುನಿಕತೆಯನ್ನು ಅನುಭವಿಸಿರುತ್ತಾನೆ. ಹಾಗಾಗಿ ಆ ಜನಮಾನಸದ ಪ್ರತಿನಿಧಿಯಾದ ಸಾಹಿತಿ ಅದನ್ನು ತನ್ನ ಬರವಣಿಗೆಯಲ್ಲಿ ಹಿಡಿದಿಡುವ ಪ್ರಯತ್ನ ಮಾಡುತ್ತಾನೆ. ಭಾಷೆಯ ಬದಲಾವಣೆ, ಹೊಸ ಹೊಸ ಸಂಶೋಧನಾ ಮಾರ್ಗಗಳು, ಸಮಾಜ ಸುಧಾರಣಾ ಸಂಗತಿಗಳು, ಚಿಂತನ ಧಾರೆಗಳು ಇವೆಲ್ಲ ನಮ್ಮ ಬದುಕನ್ನು ಸ್ಥಿತ್ಯಂತರಗೊಳಿಸುತ್ತಿರುತ್ತವೆ. ಈ ನಿಟ್ಟಿನಲ್ಲಿ ಮನುಷ್ಯ ಒಲ್ಲದ್ದನ್ನು ನಿರಾಕರಿಸುತ್ತಾ

ಒಪ್ಪಿಕೊಂಡಿದ್ದನ್ನು ಸ್ವೀಕರಿಸುತ್ತಾ ಜೀವಿಸುತ್ತಾನೆ. ಹಾಗಾಗಿ ನಾವು ದಿನವಿಡೀ ವ್ಯವಸ್ಥೆಯನ್ನು ಈ ಪರಿಪ್ರೇಕ್ಷದಲ್ಲಿರಿಸಿಯೇ ನೋಡಬೇಕಾಗುತ್ತದೆ. ಸಾಹಿತ್ಯ ಪ್ರವೃತ್ತಿಗಳು ಬದಲಾವಣೆಯಾದಾಗಲೂ ಇಂಥ ವ್ಯತ್ಯಾಸಗಳನ್ನು ಗುರುತಿಸುತ್ತಲೇ ಬಂದಿದ್ದೇವೆ. ನವೋದಯ, ನವ್ಯ ಮೂಲತಃ ಭಾಷೆ, ತಂತ್ರ, ಪ್ರತಿಮೆ, ಪ್ರತೀಕಗಳಿಗೆ ಸಂಬಂಧಿಸಿದ ವಿಚಾರಗಳಿಗೆ ಆಸಕ್ತಿ ತೋರಿದವು. ಬಂಡಾಯವಾದರೋ ಅದೊಂದು ಮನೋಧರ್ಮ. ಆ ಮನೋಧರ್ಮದ ಹಿನ್ನೆಲೆಯಲ್ಲೇ ಬಂಡಾಯ ಕಾದಂಬರಿಗಳನ್ನು ದೇಸಿ ಜೀವನ ಕ್ರಮದ ನೆಲೆಯಲ್ಲಿ ಪರಿಶೀಲಿಸಬೇಕಾಗುತ್ತದೆ.

ದೇಸಿ ಜೀವನ ಕ್ರಮದ ಹಿನ್ನೆಲೆಯಲ್ಲಿ ಕುಂ. ವೀರಭದ್ರಪ್ಪನವರ 'ಕಂಡದ ಮಳೆ', ಬರಗೂರರ 'ಬೆಂಕಿ', 'ಒಂದು ಊರಿನ ಕಥೆ','ಸೂರ್ಯ', ಚನ್ನಣ್ಣ ವಾಲೀಕಾರರ 'ಹುಲಿಗೆಮ್ಮ', ವೀರಪ್ಪ ಮೊಯಿಲಿಯವರ 'ತೆಂಬರೆ', ಹೊರೆಯಾಲ ದೊರೆಸ್ವಾಮಿ ಅವರ 'ಹುಡುಕಾಡಿ ಬಂದ ಹೊನ್ನಿನ ಬದುಕು' ಕಾದಂಬರಿಗಳನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೪.೪. ಆರ್ಥಿಕತೆ

ವೀರಪ್ಪ ಮೊಯಿಲಿಯವರ 'ತೆಂಬರೆ' ಕಾದಂಬರಿಯು ಆರ್ಥಿಕವಾಗಿ ಹಿಂದುಳಿದ ವರ್ಗವೊಂದು ತುಳುನಾಡಿನಲ್ಲಿ ದೈವದ ಆರಾಧನೆಯಲ್ಲಿ ಭೂತ ಕಟ್ಟುವ ಕೆಲಸವನ್ನು ನಿರ್ವಹಿಸುತ್ತಾ, ತನ್ನ ಬದುಕನ್ನು ಕಟ್ಟಿಕೊಂಡ ಬಗೆಯನ್ನು ವಿವರಿಸುವ ಪ್ರಯತ್ನವನ್ನು ಮಾಡುತ್ತದೆ. ಆರ್ಥಿಕವಾಗಿ ಸಾಕಷ್ಟು ಕಷ್ಟದ ಬದುಕನ್ನು ಅನುಭವಿಸಿದರೂ, ತುಳುನಾಡಿನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬಂದು, ಯಾವುದೇ ಆಮಿಷಗಳಿಗೆ ಒಳಗಾಗದೆ ಸತ್ಯ ಹಾಗೂ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡ, ಎಲ್ಲೂ ತಪ್ಪು ಹೆಜ್ಜೆ ಇಡದೆ ವ್ಯವಸ್ಥೆಯೊಳಗೆ ನಲುಗಿ ಹೋಗುವ ಪ್ರಸಂಗ ಕಾದಂಬರಿಯೊಳಗೆ ಬರುತ್ತದೆ. ಮನೆಯೊಳಗೆ ಕಿತ್ತು ತಿನ್ನುವ ಬಡತನವಿದ್ದರೂ ಅನ್ಯಾಯದ ಹಣಕ್ಕೆ ಕೈಯೊಡ್ಡದೆ, ಎರಡೂ ಕೈಗಳನ್ನು ಕಳೆದು ಕೊಳ್ಳಬೇಕಾದ ಪ್ರಸಂಗ ಮೋಂಟ ಪಂಬದನ ನೋವಿನ ಕತೆಯಾಗಿ ಕಾದಂಬರಿಯೊಳಗೆ ಕಾಣಿಸುತ್ತದೆ.

ಹೊರೆಯಾಲ ದೊರೆಸ್ವಾಮಿ ಅವರ 'ಹುಡುಕಾಡಿ ಬಂದ ಹೊನ್ನಿನ ಬದುಕು' ಕಾದಂಬರಿಯಲ್ಲಿ ಆರ್ಥಿಕವಾಗಿ ಕೆಳಗಿರುವವರ ಬದುಕಿನ ದುರಂತವನ್ನು ಗುರುತಿಸುವ ಪ್ರಯತ್ನವನ್ನು ಮಾಡಿರುತ್ತೇನೆ. ಇಲ್ಲಿ ಆಯ್ದುಕೊಂಡ ಪ್ರಮುಖ ಬಂಡಾಯ ಕಾದಂಬರಿಗಳನ್ನು ಆರ್ಥಿಕತೆಯ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ೫.

ಮಹಿಳಾ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆ ಸ್ವರೂಪ

ಎಪ್ಪತ್ತರ ದಶಕ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಬಹುಮುಖ್ಯವಾದ ಕಾಲಘಟ್ಟವಾಗಿದೆ. ಈ ಕಾಲದ ಮತ್ತೊಂದು ಮುಖ್ಯವಾದ ಸಂವೇದನೆ ಎಂದರೆ ಅದು 'ಮಹಿಳಾ' ಸಂವೇದನೆ. ಇದನ್ನು 'ಮಹಿಳಾ' ಸಂವೇದನೆ ಎಂದು ಗುರುತಿಸುವುದಕ್ಕಿಂತ ಹೆಚ್ಚಾಗಿ 'ಸ್ತ್ರೀವಾದಿ' ಸಂವೇದನೆ ಎಂದೇ ಗುರುತಿಸುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿ ಹಾಗೂ ಇತರ ವಚನಗಾರ್ತಿಯರಿಂದಲೇ ಮಹಿಳಾ ಸಂವೇದನೆಗಳು ಆರಂಭವಾಗುತ್ತವೆ. ಆದರೆ ಬಂಡಾಯದ ಮಹಿಳಾ ಸಂವೇದನೆ ಸ್ತ್ರೀವಾದಿ ನೆಲೆಯಲ್ಲಿ ಹುಟ್ಟಿ ಬಂದುದಾಗಿದೆ. ಪಾಶ್ಚಾತ್ಯ ಲೇಖಕಿಯರಿಂದ ಬೆಳೆದುಬಂದ ಸ್ತ್ರೀವಾದ ತೀರಾ ಇತ್ತೀಚಿನ ಪರಿಕಲ್ಪನೆ. ಕನ್ನಡದಲ್ಲಿ ಮೊದಲು ಬೇರೆ ಬೇರೆ ಘಟ್ಟಗಳಲ್ಲಿ ಮಹಿಳೆಯರು ಸಾಹಿತ್ಯ ರಚಿಸಿದ್ದಾರೆ. ತಮ್ಮ ಸಂವೇದನೆಗಳಿಗೆ ಅಭಿವ್ಯಕ್ತ ರೂಪವನ್ನು ಕೊಟ್ಟಿದ್ದಾರೆ. ಆದರೆ ಸ್ತ್ರೀವಾದದ ಮಾದರಿಗಳು ಮೊಟ್ಟ ಮೊದಲು ಕಾಣಿಸಿಕೊಳ್ಳುವುದು ಬಂಡಾಯ ಚಳುವಳಿಯ ಸಂದರ್ಭದ ಲೇಖಕಿಯರಲ್ಲಿ. ಹೀಗಾಗಿ ಬಂಡಾಯ ಚಳುವಳಿಗೂ ಸ್ತ್ರೀವಾದಕ್ಕೂ ನೇರವಾದ ಸಂಬಂಧವಿದೆ. ಬಂಡಾಯ ಚಳುವಳಿ ಉಂಟುಮಾಡಿದ ಜಾಗೃತಿ ಮತ್ತು ಸಂಘಟನೆಯ ಮೂಲಕ ಇಂದು ಕನ್ನಡದಲ್ಲಿ ಸ್ತ್ರೀವಾದಿ ಚಳವಳಿ ಸ್ವತಂತ್ರವಾಗಿ ಬೆಳೆಯಲು ಕಾರಣವಾಗಿದೆ.

ಸ್ತ್ರೀ ಪುರುಷರ ನಡುವಿನ ಅಸಮಾನತೆ ಅದು ಕೇವಲ ಜೈವಿಕವಲ್ಲ. ನಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪುರಾಣ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಚಾತುರ್ವರ್ಣ್ಯ ವ್ಯವಸ್ಥೆಯಲ್ಲಂತೂ ಸ್ತ್ರೀಯ ಅಸ್ತಿತ್ವ ಅವಹೇಳನಕಾರಿಯಾಗಿದೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಅಲ್ಲಲ್ಲಿ ಧ್ವನಿ ಎತ್ತಿದ ಮಹಿಳಾ ಧ್ವನಿಗಳು ಕೇಳದಂತಾಗಿದೆ. ದಲಿತರಷ್ಟೇ ಶೋಷಣೆಗೊಳಗಾದ ಮಹಿಳೆ, ಬಂಡಾಯ ಚಳುವಳಿಯ ಮುಖ್ಯ ಕಾಳಜಿ ಯಾಗಿದ್ದಾಳೆ. ಹೀಗಾಗಿ ಬಂಡಾಯ ಸಂಘಟನೆಯಲ್ಲಿ ಮಹಿಳಾ ಲೇಖಕರಿಗೆ ಮಹತ್ವದ ಸ್ಥಾನ ದೊರೆಯಿತು. ಪುರುಷ ದಾಷ್ಟ್ಯವನ್ನು, ಯಜಮಾನ ಸಂಸ್ಕೃತಿಯ ಸೋಗಲಾಡಿತನವನ್ನು ನೇರವಾಗಿ ತಿರಸ್ಕರಿಸಿದ ಬಂಡಾಯ ಲೇಖಕರು, ಮಹಿಳೆ ಪುರುಷನಿಗೆ ಸಮಾನವೆಂದು ಸಾರಿದರು. ಹಿಂದೂ ಸಂಸ್ಕೃತಿಯಲ್ಲಿ ಮಹಿಳೆ ದೇವತೆಯಾಗಿ ಇಲ್ಲವೆ ರಾಕ್ಷಸಿಯಾಗಿ ಎರಡು ರೀತಿಯಲ್ಲಿ ಕಂಡುಬಂದರೆ, ಬಂಡಾಯ ಲೇಖಕರು ಮಹಿಳೆಯನ್ನು ಮಹಿಳೆಯಾಗಿ, ಸ್ನೇಹಿತೆಯಾಗಿ, ಸಂಗಾತಿಯಾಗಿ ಕಂಡರು. ಜಾತಿ ಭೇದವನ್ನು ತಿರಸ್ಕರಿಸಿದಂತೆ ಲಿಂಗಭೇದವನ್ನು ಅವರು ನಿರಾಕರಿಸಿದರು. ಹೀಗಾಗಿ ಬಂಡಾಯ ಚಳುವಳಿ ಹುಟ್ಟಿ ಒಂದು ದಶಕವನ್ನು ದಾಟುವ ಸಂದರ್ಭದಲ್ಲಿ ಕನ್ನಡದಲ್ಲಿ ಸ್ತ್ರೀವಾದಿ ಚಳುವಳಿ ತೀವ್ರಗೊಳ್ಳತೊಡಗಿತು. ಈ ತೀವ್ರತೆ ಸಾಹಿತ್ಯದಲ್ಲೂ ಅಭಿವ್ಯಕ್ತವಾಯಿತು.

ಹತ್ತೊಂಬತ್ತನೇ ಶತಮಾನದ ಮಧ್ಯದಲ್ಲಿ ರೂಪುಗೊಂಡ ಸಾಮಾಜಿಕ ಚಳವಳಿಯ ಸ್ವರೂಪಗಳು ಮತ್ತು ಇಪ್ಪತ್ತನೇ ಶತಮಾನದ ಸ್ತ್ರೀಮುಕ್ತಿ ಚಳುವಳಿಗಳಲ್ಲಿ ಸ್ತ್ರೀವಾದಿ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಹಾಗೂ ರಚನಾತ್ಮಕವಾಗಿ ರೂಪಿಸಿದೆ. ಒಟ್ಟು ಒಂದೂವರೆ ದಶಕಗಳ ಸ್ತ್ರೀಮುಕ್ತಿ ಚಳುವಳಿಯ ಅವಿರತ ಹೋರಾಟವು ಪಾಶ್ಚಾತ್ಯ, ಪೌರ್ವಾತ್ಯ

ದೇಶಗಳ ಸ್ತ್ರೀವಾದಿ ಚಳವಳಿಯ ಸಂಸ್ಕೃತಿ ಮೀಮಾಂಸೆಯನ್ನು ಬಹುಮುಖ ಆಯಾಮಗಳಲ್ಲಿ ಸಂರಚಿಸಿವೆ. ಎಪ್ಪತ್ತರ ದಶಕದ ಕನ್ನಡ ಸಾಹಿತ್ಯದ ಆಧುನಿಕ ತಲ್ಲಣದ ಸಂದರ್ಭದಲ್ಲಿ ಸ್ತ್ರೀ ಸಮಾನತೆಗಾಗಿ ಹೋರಾಡಿ ಪುರುಷನಿಗೆ ಸರಿಸಮನಾಗಿ ಬದುಕುವ ಕೆಚ್ಚನ್ನು ತೋರುತ್ತಿರುವ ಸನ್ನಿವೇಶದಲ್ಲೂ ಸ್ತ್ರೀಗೆ ವೈವಾಹಿಕ ಜೀವನದಲ್ಲಿ ಆಗುತ್ತಿರುವ ಮೋಸ, ವಂಚನೆ, ಶೋಷಣೆಗಳು ಸ್ವಲ್ಪವೂ ಕಡಿಮೆಯಾಗದೆ ಇನ್ನೂ ಹೆಚ್ಚಾಗುತ್ತಲೇ ಇರುವುದನ್ನು ನಾವು ಗುರುತಿಸುತ್ತಲೇ ಬಂದಿದ್ದೇವೆ. ಹಾಗಾಗಿ ಕೌಟುಂಬಿಕ ಪರಿಸರದ ಆವರಣವಿರುವ ಕಾದಂಬರಿಗಳನ್ನು ಇಟ್ಟುಕೊಂಡ ಹಾಗೇ ಮಹಿಳೆಯರಿಂದಲೇ ರಚನೆಗೊಂಡಿರುವ ಕಾದಂಬರಿಗಳನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆ ಮೂಲಕ ಸ್ತ್ರೀ ತನ್ನದೇ ಆದ ಹೊಸ ಸಂಸ್ಕೃತಿಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಪ್ರಮುಖ ಕಾದಂಬರಿಕಾರ್ತಿಯರ ಕೃತಿಗಳಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಎಪ್ಪತ್ತರ ದಶಕದ ನಂತರದ ಕಾಲಘಟ್ಟದಲ್ಲಿ ಸಂಸ್ಕೃತಿ ಸಂರಚನೆಯ ಕುರಿತ ಹಾಗೆ ಕಾದಂಬರಿಗಳನ್ನು ರಚನೆ ಮಾಡಿರುವವರಲ್ಲಿ ವೈದೇಹಿ, ಬಿ.ಟಿ ಲಲಿತಾ ನಾಯಕ್, ಗೀತಾ ನಾಗಭೂಷಣ್, ಎಚ್.ನಾಗವೇಣಿ, ಎಂ.ಎಸ್ ವೇದಾ ಪ್ರಮುಖರು. ಇವರ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ವ್ಯವಸ್ಥೆ ಈಗಾಗಲೇ ರೂಢಿಸಿಕೊಂಡು ಬಂದ ಸಂಸ್ಕೃತಿಯನ್ನು ಒಪ್ಪದೇ ತಮ್ಮ ಅಸ್ತಿತ್ವವನ್ನು ಉಳಿಸಲು ಬೇರೊಂದು ಮಾರ್ಗವನ್ನು ಹುಡುಕಲು ಪ್ರಯತ್ನಿಸುವ ಯತ್ನವನ್ನು ಗುರುತಿಸಿದ್ದೇನೆ. ಪುರುಷ ಪ್ರಧಾನ ವ್ಯವಸ್ಥೆಯ ಎಲ್ಲಾ ಹುನ್ನಾರಗಳನ್ನು ತಮ್ಮೊಳಗೆ ಒಪ್ಪಿಕೊಳ್ಳದೆ, ಪ್ರತಿರೋಧಿಸುವ ಮತ್ತು ಅದಕ್ಕೆ ಪರ್ಯಾಯ ದಾರಿಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ನಡೆಸಲಾಗಿದೆ.

'ಮಹಿಳಾ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆ ಸ್ವರೂಪ' ಎಂಬ ಶೀರ್ಷಿಕೆಯಡಿಯಲ್ಲಿ ಸಂಸ್ಕೃತಿಯ ಮರು ನಿರ್ವಚನವನ್ನು ದಾಂಪತ್ಯ, ಸಾಮಾಜಿಕ ಬದುಕು ಸಂಬಂಧ, ಶಿಕ್ಷಣ, ಅಂತರ್ಜಾತಿ ವಿವಾಹ ಮೊದಲಾದ ಅಂಶಗಳನ್ನು ಈ ಭಾಗದಲ್ಲಿ ಉಪ ಅಧ್ಯಾಯಗಳಾಗಿ ವಿಂಗಡಿಸಿ ಅಧ್ಯಯನವನ್ನು ನಡೆಸಲಾಗಿದೆ. ವೈದೇಹಿಯವರ 'ಅಸ್ಪೃಶ್ಯರು', ಬಿ.ಟಿ ಲಲಿತಾನಾಯಕರ 'ಗತಿ','ನೆಲೆಬೆಲೆ', ಗೀತಾ ನಾಗಭೂಷಣರ 'ಬದುಕು', ಎಚ್. ನಾಗವೇಣಿಯವರ 'ಗಾಂಧಿಬಂದ', ಸವಿತಾ ನಾಗಭೂಷಣರ 'ಸ್ತ್ರೀಲೋಕ', ಎಂ.ಎಸ್ ವೇದಾ ಅವರ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಮೊದಲಾದ ಕಾದಂಬರಿಗಳು ಈ ಭಾಗದ ಅಧ್ಯಯನಕ್ಕೆ ಆಕರಗಳಾಗಿವೆ.

೫.೧. ಸಾಮಾಜಿಕ ಬದುಕು ಸಂಬಂಧಗಳು

ಸಮಾಜದ ಪ್ರತಿಬಿಂಬ ಸಾಹಿತ್ಯ. ಸಮಾಜವನ್ನು ಹೊರತು ಪಡಿಸಿದರೆ ಸಾಹಿತ್ಯವಿಲ್ಲ. ಸಮಾಜ ಜೀವಿಯಾದ ಮನುಷ್ಯನ ನಡೆ–ನುಡಿ, ಆಹಾರ, ನ್ಯಾಯಪದ್ಧತಿ, ಜೀವನ ವಿಧಾನ, ಬದುಕಲು ರೂಪಿಸಿಕೊಂಡ ವ್ಯವಸ್ಥೆ ಸಾಹಿತ್ಯದ ಮೂಲಕ ಮೂಡಿ ಬಂದಿದೆ. ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿ ಸಂಪ್ರದಾಯಸ್ಥ ಕುಟುಂಬವೊಂದರ ಬದುಕು, ನೋವು– ನಲಿವುಗಳ ಸುತ್ತ ಹೆಣೆದ ಕತೆ. ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯುಳ್ಳ ಯುವಕನೊಬ್ಬ ಹಳೆಯ

ಕಟ್ಟುಪಾಡುಗಳನ್ನು ಮುರಿದು ಕೊರಗ ಹೆಣ್ಣೊಂದನ್ನು ಮದುವೆಯಾದ ಬಗೆಗಿನ ಪ್ರತಿಕ್ರಿಯೆ, ಪರಿಣಾಮ ಆ ಮನೆಯಲ್ಲಿ ನಡೆಯುವ ಅಂತಃ ಕಲಹ, ಕೋಲಾಹಲ ಗಳೊಂದಿಗೆ ಕೊನೆಗೆ ಆ ಹೆಣ್ಣನ್ನು ಮನೆಗೆ ಪ್ರವೇಶಿಸಲು ಅವಕಾಶ ಒದಗಿಸಿ ವೈದೇಹಿ ಕತೆಗೆ ಮುಕ್ತಾಯ ಕೊಟ್ಟಿದ್ದಾರೆ. ಅಂದರೆ ಸಾಂಪ್ರದಾಯಿಕ ವ್ಯವಸ್ಥೆಯನ್ನು ಮುರಿಯುವ ಪ್ರಯತ್ನವನ್ನು ಲೇಖಕಿ ಮಾಡಿರುವುದನ್ನು ಈ ಭಾಗದಲ್ಲಿ ಗುರುತಿಸಲಾಗಿದೆ.

ಬಿ.ಟಿ ಲಲಿತಾನಾಯಕರ 'ಗತಿ' ಕಾದಂಬರಿಯ ಸೋನಿ ಶೋಷಣೆಯನ್ನು ಪ್ರತಿಭಟಿಸಿ ಸ್ವತಂತ್ರ ಅಸ್ತಿತ್ವ ಪಡೆದುಕೊಳ್ಳಲು ಯತ್ನಿಸುತ್ತಾಳೆ. ಈ ಕಾದಂಬರಿಯಲ್ಲಿ ಲೇಖಕಿಯು ಸಂಸ್ಕೃತಿಯನ್ನು ಮತ್ತೆ ಮರು ನಿರ್ವಚಿಸಿಕೊಂಡ ಬಗೆಯನ್ನು ಈ ಭಾಗದ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಲ್ಲಿ ಉತ್ತರ ಕರ್ನಾಟಕ ಪ್ರದೇಶದ ಕೆಳಜಾತಿಯ ಜನರ ಬದುಕು, ಆ ಸಮುದಾಯದ ಜನ ಬದುಕಿರುವ ಗುಡಿಸಲುಗಳು, ಅಂದಿನ ಹಬ್ಬಗಳು, ಜಾತ್ರೆಗಳು, ಜೋಗತಿಯರ ಸ್ಥಿತಿಗತಿಗಳು, ಆ ಪ್ರದೇಶದ ಸುಗ್ಗಿಯ ಕಾಲದಲ್ಲಿ ಅಲ್ಲಿಗೆ ಬರುವ ಅಲೆಮಾರಿ ಜನರ ಬದುಕಿನ ಕಷ್ಟಗಳು ಹೀಗೆ ಹಲವಾರು ಅಪರೂಪದ ಚಿತ್ರಣಗಳು ಕಾದಂಬರಿಯ ಚೌಕಟ್ಟಿನಲ್ಲಿ ಆಯಾ ಪಾತ್ರಗಳ ಹಿನ್ನೆಲೆಯಲ್ಲಿ ಜೀವಂತವಾಗಿ ಚಿತ್ರಿತಗೊಂಡಿದೆ. ಬಡತನವೇ ಪ್ರಧಾನವಾದ ಕೆಳಜಾತಿಗಳಲ್ಲಿ ಮತ್ತು ಧರ್ಮಗಳಲ್ಲಿ ಮೇಲುಕೀಳು ಮುಖ್ಯವೆನಿಸುವುದಿಲ್ಲ. ಅಲ್ಲಿ 'ಬದುಕು' ಮಾತ್ರ ಮುಖ್ಯ. ಏಕೆಂದರೆ ಬದುಕುವ ಸಲುವಾಗಿ ಅಲ್ಲಿ ನಡೆಯುವ ಸಂಘರ್ಷವೇ ಅಲ್ಲಿನ ಬದುಕು. ಈ ಕಾದಂಬರಿಯಲ್ಲಿ ಲೇಖಕಿ ಸಂಸ್ಕೃತಿಯನ್ನು ಮರು ನಿರ್ವಚಿಸಿಕೊಂಡ ಬಗೆಯನ್ನು ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಸವಿತಾ ನಾಗಭೂಷಣರ 'ಸ್ತ್ರೀಲೋಕ'ದಲ್ಲಿ ಬದುಕಿನ ಬಗೆಗಿನ ಸುಂದರ ಕನಸುಗಳನ್ನು, ಯವ್ವನದ ನಿರೀಕ್ಷೆಗಳನ್ನೂ ಪ್ರತಿ ಹೆಣ್ಣೂ-ಗಂಡೂ ಹೊಂದಿರುತ್ತಾರೆ. ಆದರೆ ಇವೆಲ್ಲವೂ ಆಯಾ ವ್ಯಕ್ತಿಗಳ ಅಂತರಂಗದಿಂದ ಪ್ರೇರಿತವಾದವುಗಳು. ಸಂವೇದನೆಯೇ ವಾಸ್ತವಿಕ ಪ್ರಜ್ಞೆ ಗೆ ಆಧಾರ. ಅವಿವಾಹಿತ ನೆಲೆಯಿಂದ ಉಂಟಾಗುವ ಏಕಾಂಗಿತನಕ್ಕೆ ಹೆದರಿ ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಹೆಚ್ಚಿನ ಯುವತಿಯರು ಬೇಗನೆ ಮದುವೆಯಾಗುವುದನ್ನು ಸಮಾಜ ನೈಜವಾಗಿ ಸ್ವೀಕರಿಸುತ್ತದೆ. ಇಲ್ಲಿ ಸಮಾಜವೆಂದರೆ 'ಸ್ತ್ರೀಲೋಕ'. ಸ್ತ್ರೀಯರೇ ಇರುವ ಅವರ ಜಗತ್ತು. ತನಗೆ ಒಪ್ಪಿಗೆಯಾಗುವ ಹುಡುಗನನ್ನು ಮಾತ್ರ ಮದುವೆಯಾಗುವುದೆಂದು ತೀರ್ಮಾನಿಸುವ ಸಕ್ಕು, ವರದಕ್ಷಿಣೆ ಕೊಟ್ಟು ವಿವಾಹವಾಗುವುದನ್ನು ನಿರಾಕರಿಸುವ ತಂದೆ, ತಾಯಿಗಳಲ್ಲಿ ಇದನ್ನು ಸ್ಪಷ್ಟವಾಗಿ ಹೇಳಿ ಅಂತರ್ಜಾತೀಯ ಪ್ರೇಮ ವಿವಾಹ ಮಾಡಿಕೊಳ್ಳುವ ಪ್ರಜ್ಞಾ, ಮೈದುನ ರಾಜೀವನೂ, ಭಿನ್ನ ಜಾತಿಯವಳೂ ವಿಧವೆಯೂ ಆದ ಸಹೋದ್ಯೋಗಿ ಯುವತಿಯನ್ನು ಪ್ರೀತಿಸಿ ವಿವಾಹವಾಗುವುದನ್ನುಪ್ರೋತ್ಸಾಹಿಸುವ ಸುಮಾ ಇವರೆಲ್ಲರೂ ಮಧ್ಯಮವರ್ಗದ ಪರ್ಯಾಯ ಮಾದರಿಗಳೆನಿಸುತ್ತಾರೆ. ಇನ್ನೂರು-ಮುನ್ನೂರು ಜನ ಸ್ನೇಹಿತ ವರ್ಗದವರು ಸೇರಿ ಸರಳವಾಗಿ ಹಾರ ಬದಲಾಯಿಸಿಕೊಂಡು, ಎಲ್ಲಾ ಕೂಡಿ ಊಟ ಮಾಡಿ ಸುಮಾರು ಎರಡು ಸಾವಿರ ಖರ್ಚಿನಲ್ಲಿ ಜರಗುವ ಪ್ರಜ್ಞಾ-ನರೇಂದ್ರರ ವಿವಾಹವನ್ನೂ 'ಸ್ತ್ರೀಲೋಕ' ಎಲ್ಲಾ ಅರ್ಥಗಳಿಂದಲೂ ಪರ್ಯಾಯ ಮಾದರಿಯಾಗಿ ತೆರೆದಿಡುತ್ತದೆ. ಈ ಕಾದಂಬರಿಯನ್ನು ಸಾಮಾಜಿಕ ಬದುಕು ಸಂಬಂಧದ ಹಿನ್ನಲೆಯಲ್ಲಿ ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಎಂ.ಎಸ್ ವೇದಾ ಅವರ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕಾದಂಬರಿಯಲ್ಲಿ ಮಾಧವಿಯ ಪಾತ್ರ ವಾಸ್ತವಿಕ ಪ್ರಪಂಚಕ್ಕೆ ತೆರೆದಿಟ್ಟ ಕನ್ನಡಿಯಂತಿದೆ. ಇಡೀ ಪುರುಷ ಪ್ರಧಾನ ವ್ಯವಸ್ಥೆಯ ದಬ್ಬಾಳಿಕೆಗಳಿಗೆ ಪ್ರತಿರೋಧವಾಗಿ ನಿಂತ ಎಲ್ಲಾ ಹೆಣ್ಣಿನ ಧ್ವನಿಯಾಗಿ ಕಾಣಿಸುತ್ತಾಳೆ. ವ್ಯವಸ್ಥೆಯ ಕೈಗೊಂಬೆಯಾಗಿ,ವ್ಯವಸ್ಥೆ ಹೇಳಿದಂತೆ ನಡೆಯಬೇಕಾಗಿ ಬಂದಾಗಲೂ ತನ್ನ ನೇರ ಕಟು ಮಾತುಗಳಿಂದ ಮಹಾತ್ಮರೆಂದು ಗುರುತಿಸಿಕೊಂಡವರೆಲ್ಲಾ ತಲೆ ತಗ್ಗಿಸುವಂತೆ ಮಾಡುವ ಒಂದು ಅದಮ್ಯ ಶಕ್ತಿಯಾಗಿ ಮಾಧವಿ ಹೊರ ಹೊಮ್ಮುತ್ತಾಳೆ. ಈ ಕಾದಂಬರಿಯ ಒಳಗೆ ಬರುವ ಎಲ್ಲಾ ಹೆಣ್ಣಿನ ಪಾತ್ರಗಳು ಅಧಿಕಾರಶಾಹಿ ವರ್ಗದೊಳಗಿರುವ ಮತ್ತು ಅದರ ನೆರಳೇ ಬೀಳದ ಹಳ್ಳಿಯ ಪ್ರದೇಶದ ಹೆಣ್ಣುಗಳೂ ಪ್ರಭುತ್ವ, ಅಧಿಕಾರದ ವಿರುದ್ಧ ಸೆಟೆದು ನಿಲ್ಲುವ ಪಾತ್ರಗಳೇ ಆಗಿವೆ. ಇವೆಲ್ಲಾ ಅಂಶಗಳ ಹಿನ್ನಲೆಯಲ್ಲಿ ಈ ಕಾದಂಬರಿಯನ್ನು ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಕನ್ನಡ ಸಾರಸ್ವತ ಲೋಕದ ಪ್ರಮುಖ ಕಾದಂಬರಿಗಳ ಸಾಲಿನಲ್ಲಿ ಸೇರಲು ಅರ್ಹವಾದುದು ಎಚ್. ನಾಗವೇಣಿಯವರ 'ಗಾಂಧಿ ಬಂದ'. ಈ ಕಾದಂಬರಿ ಅನನ್ಯತೆಯಿಂದ ಕೂಡಿದೆ. ತುಳುನಾಡಿನ ಸಾಂಸ್ಕೃತಿಕ ಲೋಕದ ಅನಾವರಣದ ಮೂಲಕ ಸಾಮಾಜಿಕ ಕಾದಂಬರಿಯಾಗಿಯೂ ಗಮನಿಸಿಬಹುದು. ಕರಾವಳಿಯ ಬದುಕು ಕನ್ನಡ ಸೀಮೆಯೊಳಗಿದ್ದರೂ ಸಂಪೂರ್ಣ ಭಿನ್ನವಾದ ಸಂಸ್ಕೃತಿಯಾಗಿದೆ. ಈ ಸಂಸ್ಕೃತಿಯ ಪೂರ್ಣ ಆಳ, ಅಗಲ ತಿಳಿಯಲು ಕರಾವಳಿಯ ಮಣ್ಣಿನ ಜೀವನದ ಭಾಗವಾಗದ ಹೊರತು, ಅದನ್ನು ಗ್ರಹಿಸಲು ಸಾಧ್ಯವಿಲ್ಲ. ಅಲ್ಲಿನ ತುಳು ಸಂಸ್ಕೃತಿ, ಜಾತಿ, ಮತ, ಪಂಥ, ಭೇದಗಳನ್ನು ಮೀರಿದ ಸಂಪತ್ತು. ಕೇರಳ–ಕರ್ನಾಟಕ ರಾಜ್ಯಗಳ ಒಳಗೆ ಸಂಸ್ಕೃತಿ ಹರಡಿಕೊಂಡಿದೆ. ಇಲ್ಲಿ ಭಾಷೆ ಮತ್ತು ಜೀವನ ಹಾಲು ನೀರಿನಂತೆ ಬೆರೆತು ಹೋಗಿದೆ. ದ್ರಾವಿಡ ಭಾಷೆಗಳ ಸಂದರ್ಭದಲ್ಲಿ ತುಳುವಿನ ಚರ್ಚೆ ನಡೆದರೂ ಅದಕ್ಕೆ ನೀಡಿರುವ ಕಿಮ್ಮತ್ತು ಎಷ್ಟೆಂದು ಎಲ್ಲಾ ತುಳುವರಿಗೂ ತಿಳಿದ ವಿಚಾರವೆ. ಇಂಥ ಸಂದರ್ಭದಲ್ಲಿ ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿ ಮುಖ್ಯವಾಗುತ್ತದೆ. ಈ ಕಾದಂಬರಿ ಕರಾವಳಿಯ ಒಂದು ಕಾಲಘಟ್ಟದ ಚರಿತ್ರೆ. ತುಳುವ ಸಂಸ್ಕೃತಿಯ ಭಾಗವಾಗಿ, ಸ್ತ್ರೀವಾದಿ ದೃಷ್ಟಿಕೋನ, ಸ್ವಾತಂತ್ರ್ಯ ಹೋರಾಟ ಮತ್ತು ಗಾಂಧೀಜಿಯವರ ಚಳುವಳಿಯು ಕರಾವಳಿಯ ಮೇಲೆ ಬೀರಿದ ಪರಿಣಾಮ ಎಲ್ಲಾ ದೃಷ್ಟಿಕೋನಗಳಿಂದ ಈ ಕಾದಂಬರಿಯನ್ನು ಗಮನಿಸಬಹುದು. ಕರಾವಳಿಯ ಬದುಕು ಒಂದು ಸಂಕ್ರಮಣ ಕಾಲದಲ್ಲಿದ್ದ ಸಂದರ್ಭದಲ್ಲಿ ಈ ಕಾದಂಬರಿ ಮೂಡಿಬಂದಿದೆ. ಈ ಎಲ್ಲಾ ಅಂಶಗಳನ್ನು ಇಟ್ಟುಕೊಂಡ ಹಾಗೆ ಈ ಭಾಗದಲ್ಲಿ ಈ ಕಾದಂಬರಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೫.೨. ದಾಂಪತ್ಯ

ದಾಂಪತ್ಯದಲ್ಲಿ ಪ್ರೇಮಭಾವನೆ, ರಸಿಕತೆ, ಪರಸ್ಪರ ಸಮ್ಮತಿ, ಸಹಕಾರಗಳಿಂದ ಲೈಂಗಿಕ ಸುಖವನ್ನು ಪಡೆಯುವ ಕಲ್ಪನೆಯನ್ನು ಕಾದಂಬರಿಯ ಪಾತ್ರಗಳು ನಿರೀಕ್ಷಿಸುವುದು ಸಮಾನತೆ ಮೂಲದಿಂದ ಮಾತ್ರವಲ್ಲದೆ, ಸ್ತ್ರೀಯರ ಸಹಜ ಆಕಾಂಕ್ಷೆಯಾಗಿ ಪಠ್ಯದೊಳಗೆ ಅನಾವರಣಗೊಳ್ಳುತ್ತದೆ. ದಾಂಪತ್ಯದ ನೆಲೆಯಲ್ಲಿ ಸ್ತ್ರೀಯರ ಜೀವನದ ಜನನ, ಕ್ಷಮತೆ, ಲೈಂಗಿಕತೆ, ಶ್ರಮ, ಮಾಸಿಕತೆ ಇವುಗಳ ಮೇಲಿನ ನಿರ್ಬಂಧಗಳು ಪುರುಷರ ವರ್ಚಸ್ಸಿನ ಒಟ್ಟು ಪರಿಣಾಮದ ಮೇಲೆ ಅವಲಂಬಿತವಾಗಿದೆ.

ಸವಿತಾ ನಾಗಭೂಷಣರ ಕಾದಂಬರಿ 'ಸ್ತ್ರೀ ಲೋಕ'ದಲ್ಲಿ ದಾಂಪತ್ಯವನ್ನು ಗುರುತಿಸುವುದಾದರೆ ಅದು ಏಕಪಕ್ಷೀಯವೂ ಅಲ್ಲ, ಅದು ಪಾರಸ್ಪರಿಕ. ಈ ಕಾರಣದಿಂದ ಪರಸ್ಪರ ಜೀವನನ್ನು ಪರಿವರ್ತಿಸಿ ವ್ಯಕ್ತಿತ್ವ ವಿಕಸನಕ್ಕೆ ಅನ್ವಯವಾಗುವಂತದ್ದು ಎಂಬುದನ್ನು ಸ್ತ್ರೀಯರು ಪರಿಭಾವಿಸುವ ನೆಲೆಯಿಂದ ನಿರೂಪಿಸುತ್ತದೆ. ದಾಂಪತ್ಯದ ಒಳಗೆ ಹಾಗೂ ಕುಟುಂಬದಲ್ಲಿ ಮಹಿಳೆಯರಿಗೆ ಸಿಕ್ಕಿರುವ ಹಾಗು ಸಿಗಬೇಕಾದ ಅವಕಾಶ ಸಾಧ್ಯತೆಗಳ ಚರ್ಚೆ, ಇವುಗಳ ಜೊತೆಗೆ ದಾಂಪತ್ಯದಲ್ಲಿನ ಅಸಮಾಧಾನ ಕೋಪ ತಾಪಗಳ ಪಾರ್ಶ್ವಿಕ ಚಿತ್ರಣ 'ಸ್ತ್ರೀ ಲೋಕ'ದಲ್ಲಿ ಸಿಗುತ್ತದೆ. (ಸವಿತಾ ನಾಗಭೂಷಣ, ೧೯೯೯, ಪುಟ ೨೭೧) ದಾಂಪತ್ಯದಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಹೆಂಗಸರೇ ಸೋಲುವ ಮತ್ತು ಸೋಲಬೇಕಾದ ಪರಿಸ್ಥಿತಿ ನಿರ್ಮಾಣವಾಗುವುದನ್ನು ಮೇಲಿನ ವಿವರಗಳು ಪಠ್ಯದೊಳಗೆ ಅನಾವರಣಗೊಳಿಸುತ್ತದೆ. ದಾಂಪತ್ಯದಲ್ಲಿ ಸ್ತ್ರೀಯರ ಗೆಲುವು ಎಂಬುದು ದೈನಂದಿನ ಸಣ್ಣ ಸಣ್ಣ ವಿಚಾರಗಳಲ್ಲೂ ಹಾಸ್ಯಾಸ್ಪದ ಸಂಗತಿಯಾಗಿ ಪರಿಣಮಿಸುತ್ತದೆ. ಹೆಂಡತಿಯನ್ನು ಒಪ್ಪುವ, ಪ್ರೀತಿಸುವ ಗಂಡಿನ ಒಳಗೂ ಪುರುಷನೆನ್ನುವ ಸ್ಥಾಪಿತ ಸ್ಥಿತಿ ಕೆಲಸ ಮಾಡುತ್ತದೆ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಲ್ಲಿ ದಾಂಪತ್ಯದ ಸ್ವರೂಪವನ್ನು ಗುರುತಿಸಬಹುದು. ವ್ಯಕ್ತಿಗಳ ಬದುಕಿನಲ್ಲಿ ಬಡತನ ನುಂಗಿಹಾಕುವ ಸ್ತ್ರೀಯರ ಬದುಕು ಪ್ರಧಾನ ನೆಲೆಯಲ್ಲಿ ಚಿತ್ರಣಗೊಂಡಿದೆ. ದಾಂಪತ್ಯದಲ್ಲಿ ನೈಜ ಪ್ರೇಮವೊಂದು ತಪಸ್ಸಿನಂತೆ ವೈವಾಹಿಕ ಸಂಬಂಧದ ಪರಿಪೂರ್ಣತೆಯಲ್ಲಿ ಮಾತ್ರ ವಿವಾಹಕ್ಕೆ ಅರ್ಥ ಲಭಿಸುತ್ತದೆ ಎಂಬ ಅಂಶ ಕಲ್ಯಾಣಿ– ಬೆಳ್ಳಿಯರ ಬದುಕಿನಲ್ಲಿ ಸಾಧ್ಯವಾಗುತ್ತದೆ. 'ಬದುಕು' ಕೃತಿ ನಿರೂಪಿಸುವ ಈ ಅರ್ಥವಂತಿಕೆಯ ಸಂಬಂಧದಲ್ಲಿ ಪ್ರೀತಿಗೆ ಮಾತ್ರ ಸ್ಥಾನ. ಕಲ್ಯಾಣಿ ಅರಿವಿಲ್ಲದೆ ಮಾಡಿದ ತಪ್ಪಿಗಾಗಿ ಜೈಲು ವಾಸ ಅನುಭವಿಸಿ ಮರಳಿ ಬರುವವರೆಗೂ ಬೆಳ್ಳಿ ಕಾಯುತ್ತಾಳೆ. ಕಲ್ಯಾಣಿಯೊಂದಿಗಿನ ಪರಿಪೂರ್ಣತೆಯ ಆರು ವರ್ಷಗಳ ದಾಂಪತ್ಯ ಅವಳನ್ನು ಕಾಯಿಸುತ್ತದೆ. ಮಾರ್ತಾಂಡನ ಚಿತ್ರಣ ದಾಂಪತ್ಯದ ಕುರಿತು ಹೊಸ ಬಗೆಯಲ್ಲಿ ಆಲೋಚಿಸುವಂತೆ ಮಾಡುತ್ತದೆ. ಪ್ರೀತಿಯಿಂದ ಮೂರು ವರುಷ ಸಂಸಾರ ಮಾಡಿ ಹೆಂಡತಿ ಕಾಶಮ್ಮ ಹಳೆಯ ಪ್ರೇಮಿಯೊಂದಿಗೆ ಬದುಕುವ ತೀರ್ಮಾನ ಕೈಗೊಂಡಾಗ ಆತ ಸನ್ಯಾಸಿಯಾಗುತ್ತಾನೆ. ಆದರೂ ಕೊನೆಗಾಲದಲ್ಲಿ ಹೆಂಡತಿಯ ಊರಿಗೆ ಆಕೆಯನ್ನು ಕಾಣುವ ಇಚ್ಛೆಯಿಂದ ಬರುತ್ತಾನೆ. ತೋಟದಲ್ಲಿ ಕೆಲಸ ಮಾಡುತ್ತಿದ್ದ ಫತರೂನನ್ನು ಕಾಶಮ್ಮನ ಹತ್ತಿರ ಕಳಿಸುತ್ತಾನೆ. ದಾಂಪತ್ಯ ಸಂಬಂಧದ ಹೃದಯಂಗಮ ಚಿತ್ರಣ ಇದು. ಮಾರ್ತಾಂಡ ಕೊನೆಗೂ ಹೆಂಡತಿ ಕಾಶಮ್ಮನ ಧ್ಯಾನದಲ್ಲಿ ಜೀವ ಕಳೆದುಕೊಳ್ಳುತ್ತಾನೆ. ಗಂಡ–ಹೆಂಡತಿಯ ಸಂಬಂಧ ಎಲ್ಲಾ ಬಗೆಯ ಸಿದ್ಧಾಂತಗಳನ್ನು, ನಿಯಮಗಳನ್ನು, ಗಣಿತದ ಲೆಕ್ಕಾಚಾರಗಳನ್ನೂ ಮೀರಿ ನಿಲ್ಲುವಂಥದ್ದು ಎಂಬುದನ್ನು ಗೀತಾ ನಾಗಭೂಷಣ ಅವರ ಕೃತಿಗಳು ನಿರೂಪಿಸುತ್ತವೆ. ಹಳ್ಳಿಯ ಕೆಳ ವರ್ಗದ ಬದುಕಿನ ಕ್ರಮ ಇದನ್ನು ಅತಿ ಶಕ್ತವಾಗಿ ತೆರೆದಿಡುತ್ತದೆ. ಕೆಳವರ್ಗದ ಜನತೆಯ ಬದುಕಿನಲ್ಲಿ ಪ್ರೀತಿ, ಪ್ರೇಮ, ಮನುಷ್ಯ ಸಂಬಂಧಕ್ಕೆ ಭಾವನಾತ್ಮಕ ಘನತೆಯಿದೆ. ಇದು ಅವರ ಬದುಕಿನಲ್ಲಿ ಬಡತನವಿದ್ದರೂ ವ್ಯಕ್ತಿಗಳು ಪರಸ್ಪರ ಅವಲಂಬಿತರಾಗಿ ಬದುಕುವಂತೆ ಮಾಡುತ್ತವೆ. ಒಂದರ್ಥದಲ್ಲಿ ಗೀತಾ ಅವರು ಚಿತ್ರಿಸುವ ಅರ್ಥಪೂರ್ಣ ದಾಂಪತ್ಯದ ಸಂಬಂಧಕ್ಕೆ ಆಧ್ಯಾತ್ಮದ ಅರ್ಥಗಳಿವೆ. ಶೋಷಣೆಯ ಸ್ವರೂಪದಲ್ಲಿ ದಲಿತರೆಲ್ಲಾ ಮೂಕರು, ಕಿವುಡರು, ಕುರುಡರು, ಉಸಿರಾಡುವ ಕಲ್ಲಿನ ಮನುಷ್ಯರು,

ಬರೀ ಶಿಲಾ ಮಾನವರು ಎಂದೆನಿಸಿಕೊಳ್ಳುತ್ತಾರೆ. 'ಬದುಕು' ಕೃತಿಯಲ್ಲೂ ಇದೇ ನಿರೂಪಣೆಯ ಮತ್ತೊಂದು ಧ್ವನಿಯಿದೆ. ಈ ಹಿನ್ನಲೆಯಲ್ಲಿ 'ಬದುಕು' ಕಾದಂಬರಿಯನ್ನು ಈ ಭಾಗದ ಅಧ್ಯಯನದಲ್ಲಿ ವಿವರಿಸಲಾಗಿದೆ.

೫.೩. ದೇಸಿ ಜೀವನ ಕ್ರಮ

ದಲಿತರಲ್ಲಿ ಧಾರ್ಮಿಕಾಚರಣೆಗಳು ಆಳವಾಗಿ ಬೇರೂರಿರುವಂತೆ ಅದನ್ನು ವಿರೋಧಿಸುವ ಪ್ರಜ್ಞಾವಂತ ಸಮುದಾಯ ಹುಟ್ಟಿಕೊಂಡಿದೆ. ಕೆಲವೊಮ್ಮೆ ಅಸಾಯಕವಾದ ದಲಿತ ಸಮುದಾಯ ದೇವರ ಬಗೆಗಿನ ಆಚರಣೆ ನಿರರ್ಥಕ ಎಂಬ ಖೇದವನ್ನು ವ್ಯಕ್ತಪಡಿಸುತ್ತದೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯನ್ನು ಗಮನಿಸಿದರೆ ಬದುಕನ್ನು ಶೋಧಿಸುವುದೇ ಬದುಕು. ಲೋಕವು ಬರಿಯ ಲೋಕ ಮಾತ್ರ. ಅದರ ಪೂರ್ವದಲ್ಲಿ ಮಾನವ ಸೇರಿದಾಗ ಮಾತ್ರ ಮಾನವಲೋಕ ಎನಿಸುವುದು. ಆದರೆ ಈ ಲೋಕವೆಂಬುದು ಕೇವಲ ಅಪೂರ್ಣ. ಇಲ್ಲಿ ಎಲ್ಲಿಯವರೆಗೆ ಅಪೂರ್ಣವಾಗಿಯೇ ಉಳಿಯುವುದೆಂದರೆ ಈ ಮಾನವ ಲೋಕದಲ್ಲಿ ಎಲ್ಲಿಯವರೆಗೆ ಬದುಕು ಅಥವಾ ಬದುಕಿನ ಶೋಧ ಕ್ರಿಯೆ ನಡೆಯುವುದೇ ಇಲ್ಲವೋ, ಅಲ್ಲಿಯವರೆಗೂ ಬರಿಯ ಲೋಕ ಮಾತ್ರವೆನಿಸಿ ಉಳಿಯುವುದು. ಆ ರೀತಿಯ ಬದುಕಿನ ಶೋಧವೇ ಕಾದಂಬರಿಯ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ. ಅದರಲ್ಲಿ ಯಾವ ಜನವರ್ಗಕ್ಕೆ ಬದುಕೆಂಬುದೇ ಸಾಧ್ಯವಿಲ್ಲವೋ ಅಂತಹ ಜನವರ್ಗವೊಂದು ನಡೆಸುವ ಬದುಕಿನ ಅನಂತ ಶೋಧವೇ ಬದುಕು ಕಾದಂಬರಿ. ಈ ಹಿನ್ನೆಲೆಯನ್ನಿಟ್ಟುಕೊಂಡು ದೇಸಿ ಜೀವನಕ್ರಮದ ನೆಲೆಯಲ್ಲಿ 'ಬದುಕು' ಕಾದಂಬರಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಬಿ.ಟಿ ಲಲಿತಾನಾಯಕರ 'ಗತಿ' ಕಾದಂಬರಿಯಲ್ಲಿ ದೇವರನ್ನು ಅದೃಶ್ಯ ಶಕ್ತಿ ಎಂದು ನಂಬಿರುವ ಜನರು ಅದರ ಪ್ರತಿರೂಪವನ್ನು ತಮ್ಮ ಜೊತೆಯಲ್ಲಿರುವ ಜನರಲ್ಲಿಯೇ ಗುರುತಿಸುತ್ತಾರೆ. ವ್ಯಕ್ತಿಯ ಮೈಮೇಲೆ ದೇವರು ಬರುವುದು ಇತ್ಯಾದಿಗಳನ್ನು ಜಾತ್ರೆ, ಉತ್ಸವ, ವಿಶೇಷ ಸಂದರ್ಭದಲ್ಲಿ ಈಗಲೂ ಕಾಣಬಹುದಾಗಿದೆ. ಅದೃಶ್ಯ ಶಕ್ತಿಯಾದ ದೇವರು ವ್ಯಕ್ತಿಯ ಮೈಮೇಲೆ ಬಂದು ಸಂದೇಶ ನೀಡುವನೆಂಬುದು ಜನರ ನಂಬಿಕೆಯಾಗಿದೆ. ಈ ಕಾದಂಬರಿ ಈ ನಂಬಿಕೆಯಲ್ಲಿನ ನಿಗೂಢತೆಯನ್ನು ಶೋಧಿಸಿ ಸತ್ಯಾ ಸತ್ಯತೆಯನ್ನು ಪ್ರಕಟಿಸಿದೆ. ಈ ನಂಬಿಕೆಗಳು ಹಣಕ್ಕೆ, ಆಮಿಷಕ್ಕೆ ಬಲಿಯಾಗಿರುವುದನ್ನು ತಿಳಿಸುತ್ತವೆ. ಈ ಕಾದಂಬರಿಯಲ್ಲಿ ಬರುವ ಸೋನಿ ಗಂಡನ ಮನೆಗೆ ಹೋಗಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ದೇವಿಯನ್ನು ಕೇಳಲು ಹೊರಟಾಗ ದೇವಿಯ ನಿರ್ಣಯ ಹೇಳುವ ಪೂಜಾರಿ ಕಾಶಪ್ಪನಿಗೆ ಎರಡೂ ಕಡೆಯಿಂದ ಹಣ ನೀಡಿದರೆ ಆತನ ಮೈಮೇಲೆ ದೇವತೆ ಬರುವುದಿಲ್ಲ. ಯಾರು ಹಣ ನೀಡುತ್ತಾರೋ ಅವರ ಕಡೆ ದೇವಿ ಒಲಿಯುತ್ತಾಳೆ ಎಂಬುದಾಗಿ ತಿಳಿದುಬರುತ್ತದೆ. ಇಲ್ಲಿ ನಂಬಿಕೆಗಳು, ಆಚರಣೆಗಳು ಯಾವುದೋ ಆಮಿಷದ ಹಿನ್ನಲೆಯಲ್ಲಿ ಕೆಲವೇ ವರ್ಗದ ಹಿತಾಸಕ್ತಿಗನುಗುಣವಾಗಿ ಹುಟ್ಟಿವೆ ಎಂಬುದನ್ನು ಸೂಚಿಸುತ್ತದೆ. ಈ ಹಿನ್ನೆಲೆಯನ್ನಿಟ್ಟುಕೊಂಡೇ ಈ ಕಾದಂಬರಿಯನ್ನು ಈ ಭಾಗದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಎಚ್. ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯ ಭಾಷೆ ವಿಚಾರದ ಬಗ್ಗೆ ನೋಡಿದಾಗ ಕಾದಂಬರಿಯ ಒಳಗೆ ಕರಾವಳಿಯ ಕನ್ನಡ ಬಳಕೆಯಾಗಿದೆ. ಕಥೆಯ ನಿರಂತರತೆಯನ್ನು, ಓದುವಿಕೆಯನ್ನು ಎಲ್ಲೂ ತಡೆದು ನಿಲ್ಲಿಸುವುದಿಲ್ಲ. ತುಳುವಿನ ಅನೇಕ ವಿಶಿಷ್ಟ ಪದಗಳು ಇಲ್ಲಿ ಬಳಕೆಯಾಗಿದೆ. ಬೈಪಾಣೆ, ಬೈದೆತಿ, ಉಳ್ಳಾಯ, ಪೊಳಲಿ ಚೆಂಡು, ಏಣೆಲ್, ಕೊಳಕ್ಕೆ, ಗುತ್ತಿನಾರ್, ಆಟ, ಭೇಷೆ, ಕೆಡ್ಡಸ, ಕುಡು–ಅರಿ, ಬಾರಣೆ ಮುಂತಾದ ಪದಗಳಿಗೆ ಕರಾವಳಿಯ ಸಾಂಸ್ಕೃತಿಕ ಮಹತ್ವವಿದೆ. ಇಂತಹ ಪದಗಳ ಜೊತೆಗೆ ಕರಾವಳಿಯ ತುಳು ಲೇಪಿತ ಕನ್ನಡ ಬಳಕೆಯನ್ನು ಕಾದಂಬರಿಯ ಉದ್ದಕ್ಕೂ ಕಾಣಬಹುದಾಗಿದೆ. ಕಾದಂಬರಿಯಲ್ಲಿ ಬರುವ ಪಾತ್ರಗಳ ಹೆಸರೂ ಕರಾವಳಿಯ ಜನರ ಬಾಯಲ್ಲಿ ಹಿಂದೆ ನಿತ್ಯ ಸುಳಿದಾಡುತ್ತಿದ್ದ ಈಗ ಅಪರೂಪಕ್ಕೆ ಕಾಣಸಿಗುವ ಹೆಸರುಗಳಾಗಿವೆ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡ ಹಾಗೆ ಈ ಕಾದಂಬರಿಯನ್ನು ಸಂಸ್ಕೃತಿ ಸಂರಚನೆಯ ಸ್ವರೂಪದ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

೫.೪. ಅಂತರ್ಜಾತಿ ವಿವಾಹ

ಭಾರತೀಯ ಜಾತಿ ಪದ್ಧತಿಯು ಸಾಮಾಜಿಕ ಶ್ರೇಣೀಕರಣವನ್ನು ವಿವರಿಸುತ್ತದೆ. ಅದಲ್ಲದೇ ಸಾಮಾಜಿಕ ನಿರ್ಭಂಧಗಳಡಿ ಭಾರತ ಉಪಖಂಡದ ಸಾವಿರಾರು ಪಂಗಡದ ಪ್ರವರ್ಗಗಳನ್ನು ವಂಶವಾಹಿನಿಗಳ ಸಮೂಹವನ್ನು ವ್ಯಾಖ್ಯಾನಿಸುತ್ತದೆ. ಇದನ್ನೇ ಜಾತಿಗಳು ಎಂದು ಗುರುತಿಸಲಾಗಿದೆ. ಹಿಂದುತ್ವದೊಂದಿಗೆ ಗುರುತಿಸಿಕೊಂಡಿರುವ ಇತರ ಮುಸ್ಲಿಮರ ಕೆಲವು ಗುಂಪುಗಳು ಮತ್ತು ಕ್ರಿಶ್ಚನ್ನರು ಕೂಡಾ ಇದೇ ತೆರನಾದ ಗುಂಪು ಪ್ರಭೇದಗಳನ್ನು ಹೊಂದಿರುವುದು ಭಾರತದ ಉಪಖಂಡದಲ್ಲಿ ಕಾಣಿಸುತ್ತದೆ. ಆದರೆ ದೊಡ್ಡ ದೊಡ್ಡ ನಗರಗಳಲ್ಲಿ ಜಾತಿಯ ನಿರ್ಭಂಧಗಳು ಅಷ್ಟೊಂದು ಬಿಗಿಯಾಗಿಲ್ಲ.

ಇದು ಗ್ರಾಮೀಣ ವಲಯದಲ್ಲಿ ಕಟ್ಟುನಿಟ್ಟಿನ ಕ್ರಮದಲ್ಲಿ ಚಾಲ್ತಿಯಲ್ಲಿದೆ. ಆಧುನಿಕ ಭಾರತದಲ್ಲಿ ಜಾತಿ ಪದ್ದತಿಯು ವಿವಿಧ ಸ್ತರಗಳಲ್ಲಿ ಮುಂದುವರೆದಿದೆ ಎನ್ನಬಹುದು. ಯಾಕೆಂದರೆ ಇದಕ್ಕೆ ರಾಜಕೀಯ ಕಾರಣಗಳು, ಸಾಮಾಜಿಕ ಗ್ರಹಿಕೆಗಳು ಮತ್ತು ನಡವಳಿಕೆಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ. ಭಾರತದಲ್ಲಿನ ಜಾತಿ ವ್ಯವಸ್ಥೆಯು ಜಾತಿಯ ಹೊರಗೆ ವಿವಾಹವನ್ನು ನಿಷೇಧಿಸುತ್ತದೆ. ಆದರೂ ಹೆಚ್ಚುತ್ತಿರುವ ಶಿಕ್ಷಣ, ಉದ್ಯೋಗ, ಮಧ್ಯಮ ವರ್ಗದ ಆರ್ಥಿಕ ಹಿನ್ನೆಲೆ ಮತ್ತು ನಗರೀಕರಣದ ಕಾರಣದಿಂದ ಅಂತರ್ಜಾತೀಯ ವಿವಾಹಗಳು ಕ್ರಮೇಣವಾಗಿ ಸಮ್ಮತಿಯನ್ನು ಪಡೆದುಕೊಳ್ಳುತ್ತಿವೆ. ವಚನಗಳ ಕಾಲಘಟ್ಟದಲ್ಲೇ ಸಮಾಜವನ್ನು ಹೊಸ ದಿಕ್ಕಿನ ಕಡೆಗೆ ಕೊಂಡೊಯ್ಯುವ ಪ್ರಯತ್ನದಲ್ಲಿ ಸಾಮಾಜಿಕ ಸಂಚಲನವನ್ನುಂಟು ಮಾಡಲು ವಚನಕಾರರು ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹವಿತ್ತಿರುವುದನ್ನು ನಾವು ಗುರುತಿಸಬಹುದು. ಸಾಮಾಜಿಕ ವ್ಯವಸ್ಥೆ ಒಪ್ಪಿಕೊಂಡಿರುವಂತಹ ರೂಢಿಗತ ಆಲೋಚನೆಗಳನ್ನು ಬಿಟ್ಟು, ಹೊಸ ನೆಲೆಯಲ್ಲಿ ಸಮಾಜದ ಬದಲಾವಣೆಗೆ ತೊಡಗಿರುವಂತಹ ಮನೋಸ್ಥಿತಿಯನ್ನು ನಾವು ಬಂಡಾಯ ಕಾಲಘಟ್ಟದ ಮಹಿಳಾ ಕಾದಂಬರಿಗಳಲ್ಲಿ ಗುರುತಿಸಬಹುದು. ಗೀತಾ ನಾಗಭೂಷಣರ 'ಬದುಕು' ಕಾದಂಬರಿ ಹೈದ್ರಾಬಾದ್ ಕರ್ನಾಟಕ ಅದರಲ್ಲೂ ಕಲ್ಬುರ್ಗಿ ಜಿಲ್ಲೆಯ ಶಿವಳ್ಳಿ ಎಂಬ ಗ್ರಾಮದಲ್ಲಿ ಕೆಳಜಾತಿಯ ಮಲ್ಲ ಪ್ಪನ ಪಾತ್ರದ ಮುಖಾಂತರ 'ಬದುಕ'ನ್ನು ಶೋಧಿಸುತ್ತಾ ನಡೆಯುತ್ತದೆ. ಮಲ್ಲಪ್ಪನ ಎರಡನೇ ಮಗಳು ಕಾಶಮ್ಮ ಅದೇ ಗ್ರಾಮದ ಮೇಲ್ಜಾತಿಯ

ಲಿಂಗರಾಜನೊಡನೆ ಪ್ರಣಯಕ್ಕೆ ಬಿದ್ದ ಕಾರಣ ಅವಳಿಗೆ ಗುಟ್ಟಾಗಿ ಸ್ವಜಾತಿಯ ವರನ ಜೊತೆ ಮದುವೆ ಮಾಡುವ ಮೂಲಕ ಸಾಂಪ್ರದಾಯಿಕ ವ್ಯವಸ್ಥೆ ತಮ್ಮ ಜವಾಬ್ದಾರಿಯಿಂದ ತೊಲಗಿತಾದರೂ, ಆಧುನಿಕತೆಗೆ ತೆರೆದುಕೊಂಡ ಕಾಶಮ್ಮ ತನಗಿಷ್ಟವಿಲ್ಲದ ಗಂಡನನ್ನು ತಿರಸ್ಕರಿಸಿ, ತಾನು ಇಷ್ಟಪಟ್ಟು ಪ್ರೇಮಿಸಿದ ಮೇಲ್ಜಾತಿಯ ಲಿಂಗರಾಜನ ಜೊತೆ ಬದುಕನ್ನುಕಟ್ಟಿಕೊಳ್ಳಲು ಬಯಸುವುದು ವ್ಯವಸ್ಥೆಯ ವಿರುದ್ಧದ ಬಂಡಾಯವಾಗಿ ಕಾಣಿಸುತ್ತದೆ. ಈ ಅಂಶಗಳ ನೆಲೆಯಲ್ಲಿಯೇ ವೈದೇಹಿಯವರ 'ಅಸ್ಪೃಶ್ಯರು' ಮತ್ತು ಸವಿತಾ ನಾಗಭೂಷಣರ 'ಸ್ತ್ರೀಲೋಕ'' ಕಾದಂಬರಿಯನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

೫.೫. ಪುರುಷ ಸ್ವಾಮ್ಯದ ಸ್ವರೂಪ.

ಹೆಣ್ಣಿನ ಲೈಂಗಿಕ ಶೋಷಣೆ, ಅತ್ಯಾಚಾರದಂತಹ ಅಮಾನವೀಯ ವರ್ತನಾ ವ್ಯವಹಾರಗಳು ಉಳಿದ ಕಡೆಗಳಿಗಿಂತ ಹೆಚ್ಚಾಗಿ ಸಮಾಜದೊಳಗೆ ಕುಟುಂಬದಲ್ಲಿ ಉದ್ಭವಿಸುತ್ತದೆ. ಗಂಡ–ಹೆಂಡತಿಯನ್ನು, ತಂದೆ–ಮಗಳನ್ನು, ಅಣ್ಣ–ತಂಗಿಯನ್ನು ಲೈಂಗಿಕವಾಗಿ ಶೋಷಿಸುವ ಅಸಾಮಾನ್ಯದ ಹಲವು ಮಾದರಿಗಳು ಅನನ್ಯ ಸಾಂಸ್ಕೃತಿಕ ಪಠ್ಯದೊಳಗೆ ಚರ್ಚೆಗೊಳಗಾಗುವುದು ಕೂಡಾ ಕಂಡು ಬರುತ್ತದೆ. ತಂದೆಯೇ ಮಗಳನ್ನು ಅತ್ಯಾಚಾರ ಮಾಡಿ ಅವಳ ಗರ್ಭಾವಸ್ಥೆಗೆ ಕಾರಣವಾದ ನಿದರ್ಶನದ ಚರ್ಚೆ 'ಸ್ತ್ರೀ ಲೋಕ'ದಲ್ಲಿ ಕಾಣಿಸಿಕೊಳ್ಳುತ್ತದೆ. ಕುಡಿತದ ಅಮಲಿನಲ್ಲಿ ಹೆಂಡತಿ ಮಗಳ ನಡುವಿನ ವ್ಯತ್ಯಾಸ ಗುರುತಿಸದೆ, ವರ್ತಿಸಿದ ಆತ ನೈಜ ವಿಚಾರ ಅರಿವಾದಾಗ ಯಾರಿಗೂ ಮುಖ ತೋರಿಸದೆ ಪಲಾಯನ ಮಾಡುತ್ತಾನೆ'. (ಸವಿತಾ ನಾಗಭೂಷಣ, ೧೯೯೬, ಪುಟ ೧೭೭) ಇಲ್ಲಿ ಪ್ರಶ್ನೆ ಎದುರಾಗುವುದು ಪುರುಷ ಅರಿವಿದ್ದು ಮಾಡಿದ ಕೃತ್ಯವೇ ಅಥವಾ ಆತನ ಅರಿವಿಗೆ ಬಾರದೆ ಮಾಡಿದ್ದೇ ಎಂಬುದಲ್ಲ. ಗಂಡಸಿನ ಯಾವುದೇ ವರ್ತನೆಗಳಿಗೂ ಅದರ ಪರಿಣಾಮಗಳ ಅನುಭವಿಸುವಿಕೆಗೆ ಹೆಣ್ಣು ಗುರಿಯಾಗಬೇಕಾಗುತ್ತದೆ. ಇದನ್ನು ಪುರುಷ ಅರ್ಥ ಮಾಡಿಕೊಂಡಿದ್ದಲ್ಲಿ ಇಂತಹ ಶೋಷಣೆಗೆ ಕುಟುಂಬದಲ್ಲಿ ಎಡೆ ಇರುವುದಿಲ್ಲ. ಅಲ್ಲದೆ ಮಾನವ ಸಂಬಂಧಗಳ ಮೂಲ ತಿಳುವಳಿಕೆ ಕುಟುಂಬದಲ್ಲಿ ಹೆಚ್ಚು ನಿಖರವಾಗಿ, ವಸ್ತುನಿಷ್ಠವಾಗಿ ರಚನೆಗೊಂಡಾಗ ಮಾತ್ರ ಕುಟುಂಬಗಳಲ್ಲಿ ಅತ್ಯಾಚಾರದಂತಹ ಅನುಚಿತ, ಅಮಾನವೀಯ ಸನ್ನಿವೇಶಗಳನ್ನು ಮೀರುವುದು ಸಾಧ್ಯವಾಗುತ್ತದೆ. ಈ ಎಲ್ಲಾ ಅಂಶಗಳನ್ನು ಇಟ್ಟುಕೊಂಡ ಹಾಗೆ ಈ ಕಾದಂಬರಿಯನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಲ್ಲಿ ಪುರುಷನೊಬ್ಬ ತನ್ನ ಬದುಕನ್ನು ಕಟ್ಟಿಕೊಳ್ಳಲು ತಾನು ಹುಟ್ಟಿಸಿದ ಮಗಳನ್ನೇ ಮಾಪುರ ದೇವಿಯ ಸೇವೆಗೆ ಅರ್ಪಿಸುವ ಪ್ರಸಂಗ ನೀಲವ್ವನ ಪಾತ್ರದಲ್ಲಿ ಬರುತ್ತದೆ. ಆಚರಣೆಯ ಹೆಸರಲ್ಲಿ ದಲಿತ ಹೆಣ್ಣುಗಳು ವ್ಯವಸ್ಥೆಯೊಳಗೆ ಬಲಿಯಾಗುವುದನ್ನು ಕಾದಂಬರಿ ಚಿತ್ರಿಸುತ್ತದೆ. ಕಾಶಮ್ಮನ ವಿಷಯದಲ್ಲೂ ಪುರುಷ ಸಮಾಜ ಆಕೆಯ ಮನಸ್ಥಿತಿಯನ್ನು ಅರ್ಥೈಸಿಕೊಳ್ಳದೆ ಹೆದರಿಸಿ, ಬೆದರಿಸಿ ಬೇರೆಡೆ ಕರೆದೊಯ್ದು ತನಗಿಷ್ಟವಿಲ್ಲದ ಗಂಡನ್ನು ಮದುವೆಯಾಗುವ ಪ್ರಸಂಗ ಬರುತ್ತದೆ. ಆದರೆ ಕಾಶಮ್ಮ ಆರಂಭದಲ್ಲಿ ವ್ಯವಸ್ಥೆಗೆ ತಲೆಬಾಗಿದಳಾದರೂ ಕಾದಂಬರಿಯ ಕೊನೆಯಲ್ಲಿ ತಾನಿಷ್ಟಪಟ್ಟ ಲಿಂಗರಾಜುವನ್ನು ವಿವಾಹವಾಗಲು

ಮುಂದುವರಿಯುವುದು ಇದು ಪುರುಷ ಪ್ರಧಾನ ವ್ಯವಸ್ಥೆ ಮಾಡಿದ್ದ ಬಂಧನದಿಂದ ಬಿಡುಗಡೆ ಬಯಸುವ ಪ್ರಯತ್ನವಾಗಿ ಕಾಣಬಹುದು. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಈ ಕಾದಂಬರಿಯನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಎಂ.ಎಸ್ ವೇದಾ ಅವರ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕಾದಂಬರಿಯೊಳಗೆ ಪುರುಷ ಸ್ವಾಮ್ಯದ ಸ್ವರೂಪವನ್ನು ಆರಂಭದಲ್ಲಿ ಶರಭಯ್ಯ, ಯಯಾತಿಯ ಪಾತ್ರದಿಂದ ತೊಡಗಿ ಕೊನೆಯದಾಗಿ ವಿಶ್ವಾಮಿತ್ರನ ಪಾತ್ರದವರೆಗೂ ಅದು ವಿಸ್ತಾರ ಪಡೆಯುವುದನ್ನು ಗುರುತಿಸಬಹುದು. ಈ ಕಾದಂಬರಿಯನ್ನು ಪುರುಷ ಸ್ವಾಮ್ಯದ ಸ್ವರೂಪದ ನೆಲೆಯಲ್ಲಿ ಮೇಲಿನ ಎಲ್ಲಾ ಅಂಶಗಳನ್ನಿಟ್ಟುಕೊಂಡು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ೬.

ಮುಸ್ಲಿಂ ಸಂವೇದನೆಯ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪ

೧೯೭೦ರ ಕಾಲಕ್ಕಾಗುವಾಗ ಕನ್ನಡಕ್ಕೆ ಅಪರಿಚಿತವಾಗಿದ್ದ ಮುಸ್ಲಿಂ ಸಂಸ್ಕೃತಿಯ ಅನೇಕ ಸಂವೇದನೆಗಳು ಕನ್ನಡ ಸಾಹಿತ್ಯದಲ್ಲಿ ಕ್ರಿಯಾಶೀಲವಾಗಿ ಬರೆಯಲ್ಪಡಲು ಆರಂಭವಾಯಿತು. ಇಂತಹ ಹಿಂದೂ, ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳನ್ನು ಒಗ್ಗೂಡಿಸಿಕೊಂಡು ಇಂದು ಕನ್ನಡ ಸಾಹಿತ್ಯ ಶ್ರೀಮಂತವಾಗುತ್ತಾ ಬಂದಿದೆ. ಮತ್ತು ತನ್ನ ಪರಿಧಿಯನ್ನು ವಿಸ್ತರಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ದಲಿತರು, ಶೂದ್ರರು, ಮುಸ್ಲಿಮರು ಹೊಸಗನ್ನಡ ಸಾಹಿತ್ಯದ ಮಧ್ಯಭಾಗದಲ್ಲಿ ಶೋಷಣೆಯ ವಿರುದ್ಧ ಧ್ವನಿ ಎತ್ತಲು ಸಾಧ್ಯವಾಯಿತು. ತಮ್ಮ ತಮ್ಮ ಸಮುದಾಯದೊಳಗಿನ ಸಾಂಸ್ಕೃತಿಕ ಸಂವೇದನೆಗಳನ್ನು ಹೊರಜಗತ್ತಿಗೆ ಪರಿಚಯಿಸಲು ಸಾಧ್ಯವಾಯಿತು. ಇತರ ಸಮುದಾಯದವರು ಬೇರೆ ಸಂಸ್ಕೃತಿಯ ಕುರಿತು ಬರೆಯಬಹುದು ಆದರೆ ಅದರೊಳಗಿನ ಸಂವೇದನೆಗಳನ್ನು ವಸ್ತುನಿಷ್ಠವಾಗಿ ಕಂಡುಕೊಳ್ಳಲು ಸಾಧ್ಯವಿಲ್ಲ. ಉದಾಹರಣೆಗೆ ದಲಿತರ ಕುರಿತು ಇತರ ಕಾದಂಬರಿಕಾರರು ಬರೆಯಬಹುದು ಆದರೆ ಅಲ್ಲಿ ಸಂಸ್ಕೃತಿಯ ಸೂಕ್ಷ್ಮತೆಯನ್ನು ವಸ್ತುನಿಷ್ಠವಾಗಿ ಸಂವೇದಿಸಿ ಬರೆಯಲಾಗುವುದಿಲ್ಲ. ಹಾಗೆಯೇ ಮುಸ್ಲಿಂ ಸಂಸ್ಕೃತಿಯನ್ನು ಆ ಜನಾಂಗದಿಂದ ಬಂದವರೇ ಬರವಣಿಗೆಯ ರೂಪದಲ್ಲಿ ಅಭಿವ್ಯಕ್ತಪಡಿಸಿದಾಗ ಅದು ಹೆಚ್ಚು ಬಲಿಷ್ಠವಾಗಿರುತ್ತದೆ. ಕನ್ನಡ ಸಾಹಿತ್ಯಕ್ಕೆ ಅಪರಿಚಿತವೆನಿಸುವ ಮುಸ್ಲಿಂ ಅನುಭವಗಳು ಅದು ಕೇವಲ ಆ ಸಮುದಾಯಕ್ಕೆ ಮಾತ್ರ ಸೀಮಿತವಾಗಿರದೆ ಎಲ್ಲಾ ಜನರನ್ನು ತಲುಪಲು ಸಾಧ್ಯವಾಯಿತು. ಹಾಗಾಗಿ ಅದು ಎಲ್ಲಾ ಮನುಷ್ಯರ ಅನುಭವವಾಗಿ ಕಾಣಿಸಿಕೊಳ್ಳುತ್ತದೆ. ಹಸಿವು, ಬಡತನ, ಮೌಢ್ಯ, ಅನಕ್ಷರತೆ ಮುಸ್ಲಿಮರನ್ನು ಕಾಡಿದಂತೆ ಇತರ ಬಡವರನ್ನು ಕಾಡಿದೆ. ಮುಸ್ಲಿಂ ಧರ್ಮದ ಹಿನ್ನೆಲೆಯಲ್ಲಿ ಅಥವಾ ಅಲ್ಲಿಯ ಸಂವೇದನೆಯ ಹಿನ್ನೆಲೆಯಲ್ಲಿ ಸಮಸ್ಯೆಗಳು ಹೇಗೆ ರೂಪು ತಳೆದಿದೆ ಎಂಬುದನ್ನು ಗುರುತಿಸುವುದು ಇಲ್ಲಿ ಮಹತ್ವದ್ದಾಗಿದೆ. ಮುಸ್ಲಿಂ ಜನಾಂಗದಿಂದ ಬಂದ ಲೇಖಕರೇ ಈ ಅನುಭವಗಳನ್ನು ರೂಪಿಸಿರುವುದರಿಂದ ಅವು ಮುಸ್ಲಿಂ ಸಂಸ್ಕೃತಿಯ ನಿಜವಾದ ದಾಖಲೆಗಳಾಗುತ್ತವೆ. ಸಾರಾ ಅವರ ಕಾದಂಬರಿಯ ಹಿನ್ನೆಲೆಯಲ್ಲಿ ಮುಖ್ಯವಾಗಿ 'ಸ್ತ್ರೀ' ನೆಲೆಯನ್ನು ಗುರುತಿಸುವ ಕೆಲಸ ಮಾಡಲಾಗಿದೆ. ಸಾರಾ ಅವರ

ಕಾದಂಬರಿ ಸ್ತ್ರೀ ಸಂವೇದನೆಯಿಂದ ಹೇಗೆ ಕೂಡಿದೆಯೆಂದರೆ ಅಲ್ಲಿ ಚಿತ್ರಿಸಿರುವ ಶೋಷಿತ ಸ್ತ್ರೀಯ ಪಾತ್ರದ ಮೂಲಕವೇ ಸ್ತ್ರೀಯ ಸಮಸ್ಯೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿರುವುದರಿಂದ ಮತ್ತು ಅದರ ಧೋರಣೆಗಳು ಸ್ತ್ರೀ ಪರವಾಗಿರುವುದರಿಂದ ಅವರೊಬ್ಬರು ಸ್ತ್ರೀವಾದಿ ಎಂದು ಅರ್ಥೈಸುವುದು ಸಮಂಜಸವಾಗಿದೆ.

ಸ್ತ್ರೀಯೆಂದರೆ ಸೃಷ್ಟಿಯೊಂದರ ಅವಿಭಾಜ್ಯ ಅಂಗವಾಗಿರುವ ಗರ್ಭಕೋಶ ಮಾತ್ರವೆಂದು ಒಪ್ಪಿಕೊಂಡ ಸಮಾಜವು ಸ್ತ್ರೀ ಸಂಸ್ಕೃತಿಯ ಅನೇಕ ಸೂಕ್ಷ್ಮಾಂಶಗಳನ್ನು ಅರ್ಥೈಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಹಾಗಾಗಿ ಹೆಣ್ಣು ಎಂದರೆ ಗರ್ಭಕೋಶ ಎಂಬಂತಹ ಸ್ವೀಕೃತ ಮೌಲ್ಯಗಳನ್ನು ಚರ್ಚೆ ಮಾಡಲಾಗುತ್ತದೆ. ಏಕೆಂದರೆ ಹಾಗೆ ಒಪ್ಪಿಸಿಕೊಳ್ಳುವ ಮೌಲ್ಯಗಳು ಮಕ್ಕಳನ್ನು ಹೆರುವುದು, ಪೋಷಿಸುವುದು, ಹೆಣ್ಣಿನ ಸಾಧ್ಯತೆಗಳನ್ನು ಪರಿಗಣಿಸಿ ಅವಳ ಇತರೆ ಸಾಧ್ಯತೆಗಳನ್ನು ಸಾರಾಸಗಟಾಗಿ ಅಲ್ಲಗಳೆಯುತ್ತದೆ. ಇಂತಹ ಪರಂಪರೆಯಲ್ಲಿ ಹೆಣ್ಣಿಗೆ ಯಾವುದೇ ಆಯ್ಕೆಗಳಿಲ್ಲದೆ ಅವಳು ಪುರುಷ ಸ್ವೀಕೃತ ಮೌಲ್ಯಗಳನ್ನು ಕಾಪಾಡುತ್ತಾ ಬದುಕ ಬೇಕಾಗುತ್ತದೆ. ಹೆಣ್ಣು ಹೆರುವವಳು, ಪೋಷಿಸುವವಳು, ದೈಹಿಕವಾಗಿ ದುರ್ಬಲಳು ಆದ್ದರಿಂದ ಸದಾ ಅವಲಂಬಿತಳಾಗಿರಬೇಕಾದವಳು ಎಂದು ಹೆಣ್ಣಿಗೆ ಆರೋಪಿಸಿದ ಮಿತಿಗಳನ್ನು ಮತ್ತು ದೌರ್ಬಲ್ಯಗಳನ್ನು ಸ್ತ್ರೀವಾದವು ಪ್ರಶ್ನಿಸುತ್ತದೆ. ಮತ್ತು ಇಂತಹ ಸಮಸ್ಯೆಗಳನ್ನು ಅಲ್ಲಗಳೆಯುತ್ತದೆ. ಹೆಣ್ಣಿನ ಇಂತಹ ಮಿತಿಗಳನ್ನು ಪ್ರಶ್ನಿಸುವ ಮತ್ತು ಅವರ ದೌರ್ಬಲ್ಯಕ್ಕೆ ಕಾರಣವಾಗುವ ಅಂಶಗಳನ್ನು ಅವರು ತಮ್ಮ ಬರವಣಿಗೆಯಲ್ಲಿ ಚರ್ಚಿಸಿದ್ದಾರೆ.

ಎಪ್ಪತ್ತರ ದಶಕದ ನಂತರದ ಕಾಲಘಟ್ಟದಲ್ಲಿ ಮುಸ್ಲಿಂ ಸಂಸ್ಕೃತಿ ಸಂರಚನೆಯ ಕುರಿತ ಹಾಗೆ ಕಾದಂಬರಿಗಳನ್ನು ರಚನೆ ಮಾಡಿರುವವರಲ್ಲಿ ಸಾರಾ ಅಬೂಬಕ್ಕರ್, ಫಕೀರ್ ಮಹಮ್ಮದ್ ಕಟ್ಪಾಡಿ, ಬೊಳುವಾರು ಮಹಮ್ಮದ್ ಕುಂಞ ಪ್ರಮುಖರು. ಇವರ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ವ್ಯವಸ್ಥೆ ಈಗಾಗಲೆ ರೂಢಿಸಿಕೊಂಡು ಬಂದ ಸಂಸ್ಕೃತಿಯನ್ನು ಹಾಗೆ ಒಪ್ಪದೆ ಸಂಸ್ಕೃತಿಯ ಮರುನಿರ್ಮಾಣದಲ್ಲಿ ತೊಡಗಿರುವುದನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದೇನೆ. ಪುರುಷಪ್ರಧಾನ ವ್ಯವಸ್ಥೆಯ ಎಲ್ಲಾ ಹುನ್ನಾರಗಳನ್ನು ಒಪ್ಪಿಕೊಳ್ಳದೆ ಅದನ್ನು ಪ್ರತಿಭಟಿಸುವ ಮತ್ತು ಸಂಸ್ಕೃತಿಯನ್ನು ಮರು ಸಂರಚಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ನಡೆಸಲಾಗಿದೆ. "ಮುಸ್ಲಿಂ ಸಂವೇದನೆ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪ" ಎಂಬ ಶೀರ್ಷಿಕೆಯಡಿಯಲ್ಲಿ ಸಂಸ್ಕೃತಿಯ ಮರು ನಿರ್ವಚನವನ್ನು ದಾಂಪತ್ಯ, ಶಿಕ್ಷಣ, ಸಾಮಾಜಿಕ ಬದುಕು ಸಂಬಂಧ, ವೃತ್ತಿ ಮತ್ತು ಧರ್ಮ ಮೊದಲಾದ ಅಂಶಗಳ ಮೂಲಕ ಅಧ್ಯಯನವನ್ನು ನಡೆಸಲಾಗಿದೆ. ಸಾರಾ ಅವರ 'ಚಂದ್ರಗಿರಿಯ ತೀರದಲ್ಲಿ'(೧೯೮೧), 'ಸಹನಾ'(೧೯೮೫), 'ವಜ್ರಗಳು'(೧೯೮೮), ಫಕೀರ್ ಮಹಮ್ಮದ್ ಕಟ್ಪಾಡಿಯವರ 'ಸರಕುಗಳು'(೧೯೮೯), ಬೊಳುವಾರರ 'ಜೆಹಾದ್'(೧೯೮೭) ಮೊದಲಾದ ಆಯ್ದ ಪ್ರಮುಖ ಕಾದಂಬರಿಗಳು ಈ ಭಾಗದ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿವೆ.

೬.೧. ಧರ್ಮ.

ಧರ್ಮದ ಕಟ್ಟುಪಾಡಿನಲ್ಲಿ ಬಂಧಿತರಾಗಿದ್ದ, ಸಾರಸ್ವತ ಲೋಕದಿಂದ ದೂರ ಉಳಿದಿದ್ದ ಮುಸ್ಲಿಂ ಹೆಣ್ಣುಮಕ್ಕಳ ನೋವು ನಲಿವುಗಳನ್ನು ಕಥಿಸಲು ಸಾರಾ ಮನಸ್ಸು ಮಾಡಿದ್ದು ಕನ್ನಡದ ಅದೃಷ್ಟ ಎನ್ನಬೇಕು. ಮುಸ್ಲಿಂ ಸಮಾಜದ ಬದುಕು ಧರ್ಮದ ನಿಯಮಗಳ ಅಡಿಯಲ್ಲಿ ನಡೆಯುವುದನ್ನು ಸಾರ ಸೆರೆ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಧರ್ಮದ ಹಿನ್ನೆಲೆಯಲ್ಲಿ ನಡೆಯುವ ಹೆಣ್ಣಿನ ಶೋಷಣೆಯನ್ನು ಸಾರಾ ಅವರ ಮೊದಲ ಕಾದಂಬರಿ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯಲ್ಲಿ ನಾವು ಗುರುತಿಸಬಹುದು. ಮುಸ್ಲಿಮ್ ಜನಾಂಗದೊಳಗೆ ಆಳವಾಗಿ ಬೇರುಬಿಟ್ಟಿರುವ ಧಾರ್ಮಿಕ ಕಂದಾಚಾರಗಳನ್ನು ಈ ಕಾದಂಬರಿಯು ಎಳೆ ಎಳೆಯಾಗಿ ಚಿತ್ರಿಸುವ ಪ್ರಯತ್ನ ಮಾಡಿದೆ. ಜೊತೆಗೆ ಈ ಜನಾಂಗದ ದುಡಿಯುವ ವರ್ಗದವರ ಬದುಕು ಪರಿಣಾಮಕಾರಿಯಾಗಿ ಬಂದಿದೆ. ಅಲ್ಲದೆ ಅಮಾಯಕ ಜನರ ಮೌಢ್ಯ, ಸಣ್ಣತನ, ತ್ಯಾಗ, ಅಮಾನವೀಯತೆಗಳಿಂದ ಕೂಡಿದ ಈ ಕಾದಂಬರಿ ಅಮಾನವೀಯ ಬದುಕನ್ನು ಹಂತ ಹಂತವಾಗಿ ವಿವರಿಸುವ ಪ್ರಯತ್ನ ಮಾಡಿದೆ.

ಗಂಡಸರು ತಮಗಿಷ್ಟ ಬಂದ ಹಾಗೆ ಹೆಂಡತಿಯರಿಗೆ ತಲಾಕ್ ಕೊಡುವುದು, ಎರಡನೇ ಮದುವೆಯಾಗುವುದು, ತಲಾಕ್‌ಗಳಿಗೆ ಕಾರಣಗಳನ್ನು ಕೊಡದೇ ಇರುವುದು, ಹೆಣ್ಣಿಗೆ ಜೀವನಾಂಶ ಕೊಡಲು ನಿರಾಕರಿಸುವುದು ಇಂತಹ ಜಟಿಲ ಮತ್ತು ಸೂಕ್ಷ್ಮ ಸಮಸ್ಯೆಗಳನ್ನೆತ್ತಿಕೊಂಡು ಸಾರಾ ಅವರ ಕಾದಂಬರಿ ಮಾತನಾಡುತ್ತದೆ. ಈ ಕಾದಂಬರಿಯಲ್ಲಿ ಕೇಂದ್ರ ಬಿಂದುವಾಗಿರುವ ಹೆಣ್ಣು, ಹೃದಯ ಭಾವನೆಗಳೇನೂ ಇಲ್ಲದೆ ಉಸಿರಾಡುತ್ತಿರುವ ಜೀವಿ ಎನ್ನುವಲ್ಲಿ ಹೆಣ್ಣನ್ನು ನಡೆಸಿಕೊಳ್ಳುವ ಮುಸ್ಲಿಂ ಜನಾಂಗದ ವ್ಯವಸ್ಥೆಯ ಈ ಪದ್ಧತಿಯಿಂದ ಹೆಣ್ಣಿಗೆ ಆಗುತ್ತಿರುವ ಅನ್ಯಾಯ, ಶೋಷಣೆಗಳ ವಿರುದ್ಧ ಒಬ್ಬ ವಿದ್ಯಾವಂತ ಮಹಿಳೆಯ ಎಚ್ಚರವನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ಮುಸ್ಲಿಂ ಜನಾಂಗದಲ್ಲಿ ಬಡವರ್ಗದ ಅಮಾಯಕ ಮುಗ್ಧ ಜನತೆ ಧಾರ್ಮಿಕ ಮೌಲ್ಯಗಳ ಚೌಕಟ್ಟಿನಲ್ಲಿ ಸಿಕ್ಕು ನರಳುವ ಚಿತ್ರವನ್ನು ಲೇಖಕಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಸಂಪ್ರದಾಯದ ಸರಳುಗಳಲ್ಲಿ ಸಿಕ್ಕು ತತ್ತರಿಸುತ್ತಿರುವ ಇಲ್ಲಿನ ಬದುಕು ಗಾಢವಾದ ಅಭಿವ್ಯಕ್ತಿ ಅಥವಾ ಪರಿಣಾಮವನ್ನುಂಟು ಮಾಡುತ್ತದೆ. ಈ ಕಾದಂಬರಿಯ ನಾಯಕಿ ನಾದಿರಾ ಇಲ್ಲಿ ಎರಡು ಕಾರಣಗಳಿಂದ ಶೋಷಣೆಗೆ ಅಥವಾ ಸಮಸ್ಯೆಗೆ ಒಳಗಾಗಿ ಕೊನೆಗೆ ಮಸೀದಿಯ ಕೊಳದಲ್ಲಿ ಹಾರಿ ಸಾಯುವುದರ ಮೂಲಕ ಬದುಕಿನ ಕ್ರೂರ ವ್ಯಂಗ್ಯವನ್ನು ಎತ್ತಿ ಹಿಡಿಯುತ್ತಾಳೆ.

ಸಾರ ಅವರ 'ಸಹನಾ' ಕಾದಂಬರಿಯು ಧರ್ಮದ ಕಟ್ಟುಪಾಡಿನಲ್ಲಿ ಬಂಧಿತರಾಗಿದ್ದ ಸಾರಸ್ವತ ಲೋಕದಿಂದ ದೂರ ಉಳಿದಿದ್ದ ಮುಸ್ಲಿಂ ಹೆಣ್ಣುಮಕ್ಕಳ ನೋವು ನಲಿವುಗಳನ್ನು ಕಥಿಸಲು ಲೇಖಕಿ ಮನಸ್ಸು ಮಾಡಿದ್ದು ಕನ್ನಡದ ಅದೃಷ್ಟ ಎನ್ನಬೇಕು. ಮುಸ್ಲಿಂ ಸಮಾಜದ ಬದುಕು ಧರ್ಮದ ನಿಯಮಗಳ ಅಡಿಯಲ್ಲಿ ನಡೆಯುವುದನ್ನು ಸಾರಾ ಸೆರೆ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಆದರೆ ನಿಯಮಗಳ ಭಾರ ಹೆಣ್ಣಿನ ಮೇಲೆ ಹೆಚ್ಚು ಬೀಳುತ್ತದೆ. ಹಿಂದೂ ಸಮಾಜದಲ್ಲಿರುವಂತೆ ಮುಸ್ಲಿಂ ಸಮಾಜದ ಒಳಗಿನ ಪುರುಷಕೇಂದ್ರಿತ ಆಶಯಗಳು ಸ್ತ್ರೀ ಸಮಾಜ ಜೀವಿ ಎಂಬುದನ್ನು ನಿರ್ದಾಕ್ಷಿಣ್ಯವಾಗಿ ಹೊಸಕಿ ಹಾಕುತ್ತದೆ. ಧರ್ಮದೊಳಗೆ ಸ್ತ್ರೀಯರ ಬದುಕು ಪುರುಷನಿಗೆ

ಪೂರಕವಾಗಿ ರೂಪಿತಗೊಂಡಿರುತ್ತವೇ ವಿನಃ ಸ್ವತಂತ್ರವಾಗಿ ಅಲ್ಲ. ಇಲ್ಲಿ ಮಾನವೀಯತೆಯ ಜಿಜ್ಞಾಸೆ ಯಾವುದೇ ಕಾಲ ಸಂದರ್ಭಗಳಲ್ಲೂ ಹೇಳುವುದಿಲ್ಲ. ಮುಸ್ಲಿಂ ಸಮಾಜ ಈ ಅರ್ಥದಲ್ಲಿ ಸಂಪೂರ್ಣವಾಗಿ ಪುರುಷಮಯ. ಸ್ತ್ರೀಗೆ ಅವಳ ಬದುಕಿಗೆ ಸ್ಥಾನ ಕಲ್ಪಿಸುವ ಸನ್ನಿವೇಶವೇ ಇದರೊಳಗೆ ಎದುರಾಗುವುದಿಲ್ಲ. ಧರ್ಮವನ್ನೇ ಎದುರು ಮಾಡಿಕೊಂಡು ಬದುಕಿಗೆ ಅರ್ಥ ಕಂಡುಕೊಳ್ಳಲು ಪ್ರಯತ್ನಿಸುವ ಕಾಸರಗೋಡು, ಉಳ್ಳಾಲ, ಮಂಗಳೂರು ಪ್ರದೇಶಗಳಲ್ಲಿ ದಟ್ಟವಾಗಿರುವ ಮಾಪಿಳ್ಳೆ ಮುಸ್ಲಿಂ ಸಮಾಜ ಸಾರಾ ಅವರ ಕೃತಿಗಳಲ್ಲಿ ಅನಾವರಣಗೊಳ್ಳುತ್ತದೆ.

ಧಾರ್ಮಿಕ ಚೌಕಟ್ಟಿನಲ್ಲಿ ನಡೆಯುವ ಸ್ತ್ರೀ ಶೋಷಣೆಯ ಇನ್ನೊಂದು ಮುಖವನ್ನು ನಾವು ಸಾರಾ ಅವರ 'ವಜ್ರಗಳು' ಕಾದಂಬರಿಯಲ್ಲಿ ಗುರುತಿಸಬಹುದು. ಇಲ್ಲಿ ಮುಸ್ಲಿಂ ಸ್ತ್ರೀಯೊಬ್ಬಳು ಗಂಡನಿಂದ ದೌರ್ಜನ್ಯಕ್ಕೊಳಗಾಗುವ ಮತ್ತು ತಲಾಕ್‌ಗೆ ಒಳಗಾಗುವ ಸ್ಥಿತಿಯ ವಿವರವಿದೆ. ಮುಸ್ಲಿಂ ಜಗತ್ತಿನ ಒಳ ಹೊರಗುಗಳು ಮೇಲೆ ಬೆಳಕು ಬೀರಬಲ್ಲ ಕಾದಂಬರಿಯಾಗಿದೆ. ವಜ್ರ ಬೆಲೆ ಬಾಳುವಂತಹ ವಿಶೇಷ ಮೌಲ್ಯವನ್ನು ಹೊಂದಿದಂತ ಒಂದು ಆಭರಣ. ಅಂತೆಯೇ ಸ್ತ್ರೀಯೂ ಕೂಡಾ ಅಷ್ಟೇ ಮೌಲ್ಯ ಉಳ್ಳವಳು ಎಂಬುದನ್ನು ತಮ್ಮ ಬರವಣಿಗೆಯ ಮೂಲಕ ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮುಸ್ಲಿಂ ಸಮಾಜದ ಸಂಪ್ರದಾಯಗಳು ಭೇದಿಸಲಸಾಧ್ಯವಾದ ವಜ್ರದಂತೆ ಗಟ್ಟಿಯಾಗಿದ್ದು, ಅವು ಮಹಿಳೆಯನ್ನು ಯಾವ ರೀತಿ ಹಿಂಸಿಸುತ್ತದೆ ಎಂಬುದನ್ನು ಲೇಖಕಿ ಕಾದಂಬರಿಯ ಉದ್ದಕ್ಕೂ ಹೇಳುವ ಪ್ರಯತ್ನ ಮಾಡಿದ್ದಾರೆ. ಈ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸಾರಾ ಅವರ ಆಯ್ದ ಕಾದಂಬರಿಯನ್ನು ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಬೊಳುವಾರು ಮಹಮ್ಮದ್ ಕುಂಞಿ ಅವರ 'ಜೆಹಾದ್' ಕಾದಂಬರಿಯಲ್ಲಿ ಇಸ್ಲಾಂ ಧರ್ಮದ ವಿಧಿ ವಿಧಾನಗಳು ಶವ ಸಂಸ್ಕಾರದ ಮೂಲಕ ಕಾದಂಬರಿಯ ಆರಂಭಿಕ ಭಾಗದಲ್ಲಿ ಕಾಣಿಸುತ್ತದೆ. ಕಾದಂಬರಿಯ ನಾಯಕ ರಶೀದನ ತಾಯಿ ಅಮೀನಮ್ಮ ಬಡತನದ ಬದುಕಿನಲ್ಲಿ ಕನಸನ್ನು ಕಂಡವರು. ಅನಾಥರಾದ ಇಬ್ಬರು ಮಕ್ಕಳಿಗೆ ಸಲೀನಾ ಟೀಚರ್ ಆಶ್ರಯ ನೀಡಲು ಮುಂದಾದಾಗ ಅದೇ ಸಮುದಾಯದವರು ಕೆಟ್ಟ ಕೆಟ್ಟ ಮಾತುಗಳಿಂದ ಏನೇನು ಹೇಳಿದರೂ, ಆ ತಬ್ಬಲಿ ಮಕ್ಕಳಿಗೆ ಆಶ್ರಯ ನೀಡಲು ಯಾರೂ ಮುಂದಾಗಲಿಲ್ಲ. ಕೊನೆಗೆ ಸಲೀನಾ ಟೀಚರು ಆ ಇಬ್ಬರು ಮಕ್ಕಳ ವಿದ್ಯಾಭ್ಯಾಸದ ಜೊತೆ ಜೊತೆಗೆ ಅವರಿಗೆ ಆಶ್ರಯವನ್ನು ನೀಡುತ್ತಾರೆ. ಇಲ್ಲಿ ಲೇಖಕರ ಉದ್ದೇಶ ಎರಡು ಸಮುದಾಯದ ಸಂಸ್ಕೃತಿಯನ್ನು ಪರಿಚಯಿಸುವ ಜೊತೆಗೆ ಮಾನವೀಯತೆಯ ಧರ್ಮವೇ ಅತಿ ಮುಖ್ಯ ಎಂಬುದನ್ನು ತಿಳಿಸುವಂತಿದೆ. ಕೇವಲ ಒಣ ಪ್ರತಿಷ್ಠೆಯ ಧರ್ಮ ವ್ಯಕ್ತಿಯೊಬ್ಬನ ಜೀವ ಬದುಕಿನ ಜೊತೆಗೆ ಆಟ ಆಡುವಂತಿರಬಾರದು. ಬದ್ಧರಾಗಿ ಬದುಕುವ ಹಕ್ಕು ಎಲ್ಲರಿಗೂ ಇದೆ ಹಾಗಾಗಿ ಇಲ್ಲಿ ಕ್ರಿಶ್ಚಿಯನ್ ಧರ್ಮದ ಸಲೀನಾ ಟೀಚರ್ ಮಾನವೀಯತೆಯ ಸಾಕಾರಮೂರ್ತಿಯಾಗಿ ಕಾದಂಬರಿಯೊಳಗೆ ಕಾಣಿಸಿಕೊಳ್ಳುತ್ತಾರೆ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಈ ಕಾದಂಬರಿಯನ್ನು ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಫಕೀರ್ ಮಹಮ್ಮದ್ ಕಟ್ಪಾಡಿ ಅವರ 'ಸರಕುಗಳು' ಕಾದಂಬರಿಯಲ್ಲಿ ಸಾಂಸ್ಕೃತಿಕ ಜಗತ್ತನ್ನು ಗಮನಿಸುವುದಾದರೆ, ಮದುವೆಯಾದ ಹೆಣ್ಣುಮಕ್ಕಳು ತವರು ಮನೆಯಲ್ಲಿ ಇರಬೇಕಾದುದು ಕೋಯಾ ಮನೆತನದ ಸಂಪ್ರದಾಯ. ಗಂಡಂದಿರು ದಿನಾ ಬಂದು ಹೋಗುವುದು ಸಾಂಪ್ರದಾಯಿಕ ರೂಢಿ. ಆದರೆ ಪುರುಷ ಪ್ರಧಾನ

ವ್ಯವಸ್ಥೆಯಲ್ಲಿ ಹೆಣ್ಣು ಮಗಳು ಮದುವೆಯಾಗಿ ಗಂಡನ ಮನೆಯಲ್ಲಿರುವುದು ನಿಯಮ. ಆದರೆ ಈ ಕಾದಂಬರಿ ಭಿನ್ನ ಸಂಪ್ರದಾಯವನ್ನು ಹೊಂದಿರುವ ಕೋಯಾ ಮನೆತನವನ್ನು ಪರಿಚಯಿಸುವ ಪ್ರಯತ್ನ ಮಾಡಿದೆ. ಕಾದಂಬರಿಯ ಕೊನೆಯಲ್ಲಿ ನಫೀಸಾ ಇಡೀ ವ್ಯವಸ್ಥೆಗೆ ಭಿನ್ನ ನೆಲೆಯಲ್ಲಿ ಗುಡಿಸಲ ಕೇರಿಯ ಹೆಣ್ಣುಗಳು ಎಲ್ಲಾ ರೀತಿಯ ಗೌರವದೊಂದಿಗೆ ನಿಕಾಹ್ ಆಗಬೇಕೆಂದು ಬಯಸುವುದು ಇದು ಬಹಳ ದೊಡ್ಡ ಬದಲಾವಣೆಯಾಗಿ ಕಾಣಿಸುತ್ತದೆ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಈ ಕಾದಂಬರಿಯನ್ನು ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೬.೨: ದಾಂಪತ್ಯ

ಮುಸ್ಲಿಂ ಸಮುದಾಯದ ವೈವಾಹಿಕ ಬದುಕು ಸಂಕೀರ್ಣವಾದರೂ ಸರಳ ರೇಖಾತ್ಮಕವಾಗಿ ಕಾಣಿಸಿಕೊಳ್ಳುತ್ತದೆ. ವಿವಾಹ ಕುಟುಂಬದ ರಚನಾ ತಳಹದಿಯೇ ಪುರುಷ ಕೇಂದ್ರಿತವಾಗಿರುವುದರಿಂದ ವೈವಾಹಿಕ ಸ್ವರೂಪ ವಿನ್ಯಾಸವು ಕೂಡಾ ಪುರುಷ ನಿಷ್ಠವಾಗಿದೆ. ಇದರಲ್ಲಿ ಸ್ತ್ರೀ ಪುರುಷನಿಗೆ ಅನುಗುಣವಾಗಿ, ಪೂರಕವಾಗಿ ರೂಪು ತಾಳುವ ಆತನ ಸ್ಥಿರಾಸ್ತಿ ಹೀಗೆ ಪರಿಭಾವಿಸುವಾಗಲೂ ಧಾರ್ಮಿಕತೆಗೆ ಅಧೀನವಾಗಿರುತ್ತದೆ ಎಂಬುದು ಗಮನಾರ್ಹ. ದಾಂಪತ್ಯದ ಸ್ವರೂಪದ ಮಾತುಗಳು ಇಲ್ಲಿ ಧರ್ಮದ ಅಧೀನವಾಗಿದೆ. ಸಾರಾ ಅವರ ಕೃತಿಗಳಲ್ಲಿನ ವೈವಾಹಿಕ ಸ್ವರೂಪದ ಜೀವಸೆಲೆ ಎನ್ನುವುದು ಸ್ತ್ರೀಯ ಮೂಲದಲ್ಲಿ ನಿಂತು ವಿವಾಹ, ದಾಂಪತ್ಯ ಮತ್ತು ಕುಟುಂಬದ ಒಳಸುಳಿಗಳನ್ನು, ವಕ್ರತೆಗಳನ್ನು ಗಮನಿಸಬಹುದಾಗಿದೆ. ಪ್ರಾಪ್ತ ವಯಸ್ಸಿಗೆ ಪೂರ್ವದಲ್ಲಿ ವಿವಾಹವಾಗುವ ಪರಿಣಾಮವಾಗಿ ನಿರ್ದಿಷ್ಟವಾಗಿ ದಾಂಪತ್ಯದ ಬಗೆಗಿನ ಧೋರಣೆಗಳು ಇದರೊಳಗೆ ಸ್ತ್ರೀಯಲ್ಲಿ ರೂಪು ತಾಳಲಾರವು. ಯೌವನವೆಂಬುದು ಇಂದ್ರಿಯಗಮ್ಯ ಆಸೆ ಅಪೇಕ್ಷೆಗಳನ್ನು ತಣಿಸುವ ಕಾಳಜಿಯನ್ನಷ್ಟೇ ಹೊಂದಿರುವುದರಿಂದ ವಿವಾಹಿತ ವಧುವರರು ದೇಹ ಮೂಲದ ಹಿತಾಸಕ್ತಿಗೆ ಒಮ್ಮುಖವಾಗಿ ತುಡಿಯುವುದು ನೈಸರ್ಗಿಕ ಸಹಜ. ಈ ಅರ್ಥದಲ್ಲಿ ಸಾರಾ ಅವರು ತಮ್ಮ ಕೃತಿಗಳಲ್ಲಿ ಪ್ರಥಮ ಸಮಾಗಮ ಎಂಬುದು ಅಂತಸ್ಥವಾಗಿ ದಾಂಪತ್ಯವನ್ನು ನಿರೂಪಿಸುವ ಆರಂಭದ ಬಿಂದುವಾಗಿ ಚಿತ್ರಿಸುತ್ತಾರೆ.

ಸಾರಾ ಅವರು ಪರಿಕಲ್ಪಿಸುವ ವೈವಾಹಿಕ ಸ್ವರೂಪದಲ್ಲಿ ಸ್ತ್ರೀಯರ ದಾಂಪತ್ಯ ಜೀವನ ಒಂದು 'ಯಾತನಾ ಶಿಬಿರ'. ಪುರುಷನ ಬಾಹ್ಯ ವ್ಯವಹಾರದ ಹಿನ್ನೆಲೆಯಲ್ಲಿ ಅಡಗಿರುವ ಆತನ ಕೌಟುಂಬಿಕ ಅಭೀಪ್ಸೆಯ ತತ್ವ.ಇದರಲ್ಲಿ ಸ್ತ್ರೀ ಹೆರುವ ಯಂತ್ರ ಮಾತ್ರ ಆಗಿರುತ್ತಾಳೆ. ಬುರ್ಖಾದ ಹೊರಗಿನ ಜಗತ್ತೇ ಆಕೆಗೆ ನಿಷಿದ್ಧವೆಂಬ ಸ್ಥಿತಿಯಲ್ಲಿ ಆರ್ಥಿಕ ಸ್ವಾತಂತ್ರ್ಯದ ಸಂದರ್ಭಗಳೇ ಇಲ್ಲಿ ಏಳುವುದಿಲ್ಲ. ಅತ್ಯಂತ ಬಡತನದ ಒಳಗೆ ಮಾಪಿಳ್ಳೆ ಹೆಣ್ಣು ಮನೆಯೊಳಗೆ ಕುಳಿತು ಬೀಡಿ ಕಟ್ಟಬಲ್ಲಳು. ಆದರೆ ಅದರ ಮಾರುಕಟ್ಟೆಯ ವ್ಯವಹಾರ ಪೂರ್ಣವಾಗಿ ಪುರುಷ ನೋಡಿಕೊಳ್ಳುತ್ತಾನೆ. ಇಲ್ಲಿ ಹೆಣ್ಣು ದುಡಿಯಬಲ್ಲಳು ಆದರೆ ಹಣ ಸಂಪಾದಿಸಲಾರಳು ಎಂಬುದನ್ನು ಕಾದಂಬರಿ ಅನಾವರಣಗೊಳಿಸುವ ಮೂಲಕ ಹೆಣ್ಣನ್ನು ಆರ್ಥಿಕ ಸ್ವಾತಂತ್ರದಿಂದ ಹೇಗೆ ವಂಚಿತರನ್ನಾಗಿ ಮಾಡಲಾಗಿದೆ ಎಂಬುದನ್ನು ತಿಳಿಯಪಡಿಸುತ್ತದೆ.

ಸಾರಾ ಅವರ 'ಸಹನಾ' ಕಾದಂಬರಿಯಲ್ಲಿ ಮುಸ್ಲಿಂ ಸಮುದಾಯದಲ್ಲಿ 'ದಾಂಪತ್ಯ' ಎಂಬ ಪದಗಳಿಗೆ ಅರ್ಥವನ್ನು ನೀಡುವವರು ಪುರುಷರೇ. ಹೆಣ್ಣು ದಾಂಪತ್ಯದೊಳಗೆ ಕಾಲಿಡುತ್ತಿದ್ದಂತೆಯೇ ಆಕೆ ಪುರುಷನ ಸರಕಾಗಿ

ಗುರುತಿಸಲ್ಪಡುತ್ತಾಳೆ. ತನ್ನ ನೋವು, ಆಸೆ, ಆಕಾಂಕ್ಷೆಗಳಿಗೆ ಯಾವುದೇ ಸಹಾಯ ಸಿಗದಿದ್ದರೂ ಆಕೆ ತನ್ನ ಗಂಡನ ಆಸೆ ಆಕಾಂಕ್ಷೆಗಳನ್ನು ಸಂಪೂರ್ಣವಾಗಿ ಪೂರೈಸುವವಳಾಗಿರಬೇಕು. ಅವಿಭಕ್ತ ಕುಟುಂಬದೊಳಗೆ ಬದುಕು ನಡೆಸುವುದು ಮುಸ್ಲಿಂ ಹೆಣ್ಮಕ್ಕಳಿಗೆ ಕಷ್ಟದ ಕೆಲಸವೇ ಸರಿ. ಆಕೆ ಕೇವಲ ಪತಿಯನ್ನು ಮಾತ್ರ ಮದುವೆಯಾಗುತ್ತಿರಲಿಲ್ಲ. ಬದಲಾಗಿ ಮನೆಯವರೆಲ್ಲರ ಕೆಲಸ ಕಾರ್ಯಗಳನ್ನು ನಿಭಾಯಿಸಬೇಕಾಗಿತ್ತು. ಇಲ್ಲಿ ಸಂಪ್ರದಾಯ, ಮೌಢ್ಯ, ಅಜ್ಞಾನ, ಬಡತನಗಳಲ್ಲಿ ಸಿಕ್ಕಿ ನರಳಿದ ಹೆಣ್ಣೊಬ್ಬಳು ಕೆಣಟಿಜಜಜಿಟಿಜಜನೆಗೆ ಸ್ವತಂತ್ರವಾಗಿ ಆಲೋಚನೆ ಮಾಡುವುದು, ಬದುಕಿಸಲು ಹಾತೊರೆಯುವುದು, ದಿನನಿತ್ಯ ಕೊಂದು ತಿನ್ನುವ ಸಮಾಜವಾದಿ ವ್ಯವಸ್ಥೆಯ ವಿಷವರ್ತುಲದಿಂದ ದೂರ ಸರಿಯುವುದು, ಆತ್ಮಾಭಿಮಾನದಿಂದ ತಲೆ ಎತ್ತಿ ಬದುಕುವುದು ಇಲ್ಲಿ ತೀರಾ ಮುಖ್ಯವೆನಿಸುತ್ತದೆ. ಈ ಎಲ್ಲಾ ಅಂಶಗಳನ್ನು ಇಟ್ಟುಕೊಂಡ ಹಾಗೆ ಈ ಭಾಗದ ಅಧ್ಯಯನದಲ್ಲಿ ಈ ಕಾದಂಬರಿಯನ್ನು ವಿಶ್ಲೇಷಿಸಲಾಗಿದೆ.

೬.೩. ಸಾಮಾಜಿಕ ಬದುಕು ಸಂಬಂಧ

ಸಾರಾ ಅವರು ಕಾಸರಗೋಡಿನಲ್ಲಿ ಹುಟ್ಟಿ ಮಲಯಾಳ ಮಾತೃಭಾಷೆಯಾಗಿದ್ದರೂ ಕನ್ನಡದ ಬಗ್ಗೆ ಒಲವು ಬೆಳೆಸಿಕೊಂಡಿದ್ದ ಅವರು ಗೃಹಿಣಿಯಾಗಿ, ಅದರ ಬಂಧನಕ್ಕೊಳಗಾಗದೆ ತಮ್ಮ ಸುತ್ತಮುತ್ತ ಪ್ರಚಲಿತವಾಗಿದ್ದ ನಂಬಿಕೆಗಳನ್ನು ತಮ್ಮ ಬಾಲ್ಯದಿಂದಲೇ ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸುತ್ತಾ, ವಿಶ್ಲೇಷಿಸುತ್ತಾ ಬಂದವರು. ವೈಜ್ಞಾನಿಕ, ವೈಚಾರಿಕ ಮನೋಭಾವದ ಹಿನ್ನಲೆ ಹಾಗೂ ಆಧುನಿಕ ದೃಷ್ಟಿಕೋನದಿಂದ ಮುಸ್ಲಿಂ ಸಮಾಜ ವಿಶೇಷತಃ ಸ್ತ್ರೀ ಸುತ್ತಮುತ್ತ ನಡೆಯುವ ಚಟುವಟಿಕೆಗಳನ್ನು ಸೃಜನಶೀಲ ನೆಲೆಯಲ್ಲಿ ಚಿಂತಿಸಿದವರು. ಮುಸ್ಲಿಂ ಮಹಿಳೆಯ ಅಂತರಂಗದ ಒಳನೋಟಗಳು, ತಲ್ಲಣಗಳು, ವಾಸ್ತವ ಸತ್ಯಗಳು, ಕಂದಾಚಾರ, ಅಂಧಶ್ರದ್ಧೆಗಳು ಮೊಟ್ಟ ಮೊದಲ ಬಾರಿಗೆ ಇವರ ಸಾಹಿತ್ಯದಲ್ಲಿ ಅನಾವರಣಗೊಂಡವು. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಹಿಂದಿನಿಂದಲೂ ದಬ್ಬಾಳಿಕೆಗೆ, ಶೋಷಣೆಗೆ ಒಳಗಾಗಿ, ನರಳುತ್ತಾ ಬಂದಿದ್ದಾಳೆ. ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯ ಕಬಂಧ ಬಾಹುಗಳಲ್ಲಿ ಅಮಾಯಕ ಹೆಣ್ಣು ನಲುಗಿ ಹೋಗುವ, ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಬಿಡುವ ವಾಸ್ತವ ಚಿತ್ರವನ್ನು ಅವರು ಕೊಡುತ್ತಾರೆ. ಅದೇ ಸಮಯಕ್ಕೆ ಗಂಡಿನ ದರ್ಪ, ದಾರ್ಷ್ಯ, ಅವಿವೇಕ, ಬೇಜವಾಬ್ದಾರಿಗಳು ಅವರ ಕಾದಂಬರಿಗಳಲ್ಲಿ ವ್ಯಕ್ತವಾಗುತ್ತದೆ. ಅದಕ್ಕೆ ಸಂಬಂಧಿಸಿದ ಪರಿಣಾಮಗಳನ್ನು ಅನುಭವಿಸುವ ಹೆಣ್ಣಿನ ಮನಸ್ಸಿನ ಸೂಕ್ಷ್ಮತೆ, ಅತಂತ್ರತೆ, ಅಸಹಾಯಕತೆಗಳು ಭಾವಪೂರ್ಣವಾಗಿ ಮೂಡಿಬರುತ್ತವೆ. ಇವರು ಚಿತ್ರಿಸುವ ಎಲ್ಲಾ ಹೆಣ್ಣುಗಳು ಸಂಪ್ರದಾಯ, ಸ್ವಪ್ರತಿಷ್ಠೆ, ಬಡತನಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡು ಕಮರಿ ಹೋಗುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ದೇಶದ ಬೇರು ಬಿಟ್ಟಿರುವ ಮೂಢ ನಂಬಿಕೆಗಳ ಅಂಧ ಸಂಪ್ರದಾಯಗಳು ಇಲ್ಲಿಯ ಜನತೆಯ ಬದುಕನ್ನು ಸುಲಿದು ತಿಂದಿವೆ. ವರದಕ್ಷಿಣೆಯಂಥ ಕ್ರೂರ ಪದ್ದತಿಯಿಂದ ಇಲ್ಲವೆ ಜನರ ಬದುಕಿನ ದಿಕ್ಕು ತಪ್ಪಿದಂತಾಗಿದೆ ಎಂಬುದನ್ನು ಈ ಕಾದಂಬರಿಗಳಲ್ಲಿ ಬಹಳ ಮಾರ್ಮಿಕವಾಗಿ ಚಿತ್ರಿಸಲಾಗಿದೆ.

ಸಾರಾ ಅವರ ಕೃತಿಗಳಲ್ಲಿ ಮುಸ್ಲಿಂ ಸಂಸ್ಕೃತಿಯ ಚಿತ್ರಣವನ್ನು ಗಮನಿಸಿದರೆ ಕೌಟುಂಬಿಕ ವಲಯದಲ್ಲಿ ಸ್ತ್ರೀಯನ್ನು ಧ್ವನಿಯಿಲ್ಲದವರ ಪುರುಷರ ಮಾತು ನಿರಂಕುಶವಾಗಿ ವ್ಯವಹರಿಸುತ್ತಾರೆ ಮುಸ್ಲಿಮ್ ಜಗತ್ತಿನಲ್ಲಿ ತಾವು

ನೋಡಿದ ನೇತ್ಯಾತ್ಮಕ ಅಂಶಗಳು ಚಿತ್ರಿಸುವುದರಲ್ಲಿ ಲೇಖಕಿ ಹೆಚ್ಚು ಆಸಕ್ತಿ ವಹಿಸಿದ್ದಾರೆ. ಅದಕ್ಕೆ ಅವರು ನೀಡುವ ಕಾರಣವೇನೆಂದರೆ ಹಾಗೆ ಸಮಸ್ಯೆಗಳನ್ನು ಬಿಡಿಸುವ ಮೂಲಕ ಅವುಗಳನ್ನು ಪರಿಹರಿಸಲು ಪ್ರಯತ್ನಿಸುವುದು ಮತ್ತು ಅವುಗಳ ಕಡೆಗೆ ಸಮಾಜದ ಗಮನ ಹರಿದು, ಸಮಾಜ ಸುಧಾರಣೆ ಸಾಧ್ಯ ಎನ್ನುವುದು ಲೇಖಕಿಯ ನಂಬಿಕೆ. ಆ ಕೆಲಸವನ್ನು ಸಾರಾ ಅವರು ಯಶಸ್ವಿಯಾಗಿ ಮಾಡಿದ್ದಾರೆ.

ಸಾರ ಅವರ ಆಯ್ದ ಮೂರು ಕಾದಂಬರಿಗಳಲ್ಲಿ ಅವರ ಧೋರಣೆಗಳು ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗಿದೆ. ಮೊದಲನೇ ಕಾದಂಬರಿಯಾದ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ನಾಯಕಿ ನಾದಿರಾ ಪರಿಸ್ಥಿತಿಯನ್ನು ಎದುರಿಸಲಾರದೆ ಚಂದ್ರಗಿರಿ ನದಿಗೆ ತನ್ನ ಪ್ರಾಣವನ್ನು ಅರ್ಪಿಸುತ್ತಾಳೆ. ಈ ಮೂಲಕ ಸಂಪ್ರದಾಯದ ರೀತಿ ನೀತಿಗಳನ್ನು ಸಮಾಜದ ವ್ಯವಸ್ಥೆಯೊಳಗಿರುವ ಹುಳುಕುಗಳನ್ನು ಎತ್ತಿ ತೋರಿಸುತ್ತಾಳೆ. ಇದು ಧರ್ಮದ ಚೌಕಟ್ಟಿನೊಳಗಿನ ಇಂಥ ನಂಬಿಕೆಗಳಿಗೆ ಒಳಗಾದ ಹೆಣ್ಣು ಹೇಗೆ ತ್ಯಾಗಮಯಿಯಾಗಿರಬೇಕಾಗುತ್ತದೆ ಎಂಬುದನ್ನು ತಿಳಿಸುತ್ತದೆ.

ಸಾರಾ ಕಾದಂಬರಿಯ ಮೂಲಕ ತಮ್ಮ ಸಮುದಾಯದ ಹುಳುಕುಗಳನ್ನು ಸಮಾಜಕ್ಕೆ ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಹಾಗಾಗಿ ಇಲ್ಲಿ ಮುಸ್ಲಿಂ ಸಮುದಾಯದ ಕೆಳವರ್ಗದ ಜನರ ಸಾಮಾಜಿಕ ಬದುಕನ್ನು ಪರಿಶೀಲಿಸುವ ಮೂಲಕ ಅದರೊಳಗಿನ ಇನ್ನೂ ಹೊರಗೆ ಗೋಚರಿಸದಿರುವ ಅನೇಕ ಮೌಲ್ಯಗಳನ್ನು ಪತ್ತೆಹಚ್ಚಿ, ಆ ಮೂಲಕ ಅಲ್ಲೊಂದು ಅರಿವಿನ ಬೆಳಕನ್ನು ಹಚ್ಚುವ ಕೆಲಸವನ್ನು ಮಾಡುವ ಪ್ರಯತ್ನವನ್ನು ಗುರುತಿಸಬಹುದು. ಬದುಕಿನ ಶೋಧವು ಸಾರಾ ಅವರ ಇನ್ನೊಂದು ಕೇಂದ್ರ. ಅದಕ್ಕಾಗಿಯೇ ಪಶ್ಚಿಮ ಕಡಲ ತೀರದ ಚಿಕ್ಕ ಊರಿನಲ್ಲಿ ವಾಸಿಸುತ್ತಿರುವ ತಮ್ಮ ಸಮುದಾಯದ ಜನರ ಬದುಕಿನ ಶೋಧವೇ ಅವರ ಕಾದಂಬರಿಯ ಕೇಂದ್ರವಸ್ತು.

ಸಾರಾ ಅವರ 'ವಜ್ರಗಳು' ಕಾದಂಬರಿಯಲ್ಲಿ ಸಾಮಾಜಿಕ ಬದುಕು-ಸಂಬಂಧಗಳನ್ನು ಗಮನಿಸಿದರೆ, ಮದುವೆಯಾದ ನಂತರ ಗಂಡನ ಪ್ರೀತಿ ಸಹಕಾರ ಇಲ್ಲದಿದ್ದರೆ ಅತ್ತೆಯ ಮನೆಯಲ್ಲಿ ಎಲ್ಲರ ತಿರಸ್ಕಾರಕ್ಕೆ ಒಳಗಾಗಿ ಬಿಡುವ ಮಹಿಳೆಯರ ಬದುಕಿಗೆ ಉದಾಹರಣೆಯಂತೆ ತೋರುತ್ತದೆ ನಫೀಸಾಳ ಬದುಕು. ಈ ಎಲ್ಲಾ ಅಂಶಗಳನ್ನು ಇಟ್ಟುಕೊಂಡ ಹಾಗೆ ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಫಕೀರ್ ಮಹಮ್ಮದ್ ಕಟ್ಪಾಡಿ ಅವರ 'ಸರಕುಗಳು' ಕಾದಂಬರಿಯಲ್ಲಿ ಬರುವ ಹಾಜಿಮಾ ಹಿರಿಯ ಸ್ತ್ರೀ ಪಾತ್ರ. ಮತ್ತು ತನ್ನ ಪರಿಸರಕ್ಕೆ ಅನುಗುಣವಾಗಿ ಸಾಕಷ್ಟು ಅನುಭವಗಳನ್ನು ಪಡೆದಿರುವ ಮಹಾತಾಯಿ. ಬಡತನವೆಂಬುದಕ್ಕೆ ಬದುಕನ್ನೇ ಮುಡಿಪಾಗಿಟ್ಟು ತನ್ನ ಕುಟುಂಬವನ್ನು ತನ್ನ ದುಡಿಮೆಯಿಂದಲೇ ಸಾಕಿ ಸಲಹಿ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಅರಬಿಗಳ ಜೊತೆಗೆ ಮದುವೆ ಮಾಡಿಸಿ ಅದರಿಂದ ಬರುವ ಸಂಪಾದನೆಯಲ್ಲಿ ಮಕ್ಕಳು ಮೊಮ್ಮಕ್ಕಳನ್ನು ಪಾಲಿಸುತ್ತಾ ಬಂದವಳು. ಇವರ ಆರ್ಥಿಕ ಬದುಕಿಗೆ ಅರಬರೇ ಆಧಾರವಾಗಿದ್ದರು. ಈ ಕಾದಂಬರಿಯು ವಿಶಿಷ್ಟ ಕುಟುಂಬ ಪದ್ದತಿಯ ಸುತ್ತ ಬೆಳೆಯುತ್ತದೆ. ಒಂದು ಬಗೆಯ ಪಿತೃಪ್ರಧಾನ ಅಧಿಕಾರವುಳ್ಳ ಮಾತೃಪ್ರಧಾನ ಸಂಸ್ಕೃತಿಯ ಬದುಕು ಇಲ್ಲಿಯದು. ಇಲ್ಲಿ ಕೊಟ್ಟ ಗಂಡು ಕುಲಕ್ಕೆ ಹೊರಗೆ ಆದರೆ ದುಡಿಮೆ ನಿರ್ವಹಣೆ ಎಲ್ಲದರ ಜವಾಬ್ದಾರಿ ಆತನದು. ಈ ವ್ಯವಸ್ಥೆಯಲ್ಲಿ ಪ್ರೇಮವಿವಾಹ ಸಾಧ್ಯವೇ ಇಲ್ಲವೇನೋ

ಅನಿಸಿಬಿಡುತ್ತದೆ. ಜಗತ್ತಿನ ಮನುಷ್ಯರೆಲ್ಲರೂ ಮುಗ್ಧರಾಗಿರುತ್ತಿದ್ದರೆ ಆಗ ಅವರಿಗೆ ಕಾನೂನು, ಪೊಲೀಸು, ನ್ಯಾಯಸ್ಥಾನ ಇವು ಯಾವುದರ ಅಗತ್ಯವೂ ಇರಲಾರದು. ಜನರು ಬುದ್ಧಿವಂತರಾದಂತೆಯೇ ತಮ್ಮೊಳಗೆ ವ್ಯವಸ್ಥೆಯೊಂದನ್ನು ರೂಪಿಸಿಕೊಂಡು ಬಳಿಕ ಅದರೊಳಗೇ ಸಿಲುಕಿ ಚಡಪಡಿಸುತ್ತಾರೆ. ಈ ನಡುವೆ ಬಲಿಷ್ಠರಾದವರು ತಮಗೆ ಅನುಕೂಲವಾಗುವಂತೆ ನ್ಯಾಯ ಅನ್ಯಾಯಗಳ ಪಟ್ಟಿ ಸಿದ್ಧಪಡಿಸಿ ಸಾರ್ವಜನಿಕರಿಗಾಗಿ ಬಿಡುಗಡೆಗೊಳಿಸುತ್ತಾರೆ. ಕುಟ್ಟಿಚ್ಚಿರಾದಲ್ಲಿ ಆದದ್ದೂ ಇದುವೇ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಈ ಕಾದಂಬರಿಯನ್ನು ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಬೊಳುವಾರರ 'ಜೆಹಾದ್ 'ಕಾದಂಬರಿಯು ಉಳಿದೆಲ್ಲಾ ಕಾದಂಬರಿಗಿಂತ ಭಿನ್ನವಾದ ನೆಲೆಯಲ್ಲಿ ಎರಡು ಧರ್ಮಗಳ ಮಧ್ಯೆ ಸಾಮಾಜಿಕ ಬದುಕು ಸಂಬಂಧಗಳನ್ನು ತಿಳಿಸುವ ಪ್ರಯತ್ನವನ್ನು ಮಾಡುತ್ತದೆ. ಬಡ ಕುಟುಂಬದಲ್ಲಿ ಜನಿಸಿದ ರಶೀದ ತನ್ನ ತಾಯಿಯನ್ನು ಕಳೆದುಕೊಂಡಾಗ ಸಾಂಪ್ರದಾಯಿಕ ವಿಧಿವಿಧಾನಗಳ ಪ್ರಕಾರ ಆಕೆಯ ಶವ ಸಂಸ್ಕಾರಕ್ಕೆ ಸಮುದಾಯದ ಜನ ಸೇರಿದ್ದರಾದರೂ ಕ್ರಿಯೆ ಮುಗಿದ ಬಳಿಕ ಜವಾಬ್ದಾರಿಯನ್ನು ಕಳೆದುಕೊಂಡವರಂತೆ ಅವರವರ ಮನೆ ಸೇರಿದ್ದು ಅದೊಂದು ಅಮಾನವೀಯ ವರ್ತನೆಯಾಗಿ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತದೆ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಈ ಕಾದಂಬರಿಯನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

೬.೫. ಶಿಕ್ಷಣ

ಸಾರಾ ಅವರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಪುರುಷರ ಶೈಕ್ಷಣಿಕ ಮಟ್ಟವಂತೂ ತೀರಾ ಪ್ರಾಥಮಿಕ ನೆಲೆಯದು. ಕೆಲವರು ಧಾರ್ಮಿಕ ಶಿಕ್ಷಣವನ್ನು ಪಡೆದಿದ್ದರೆ, ಹಲವರು ಅದನ್ನೂ ಪಡೆದಿಲ್ಲ. ಒಂದು ಸಣ್ಣ ಗುಂಪು ಮಾತ್ರ ಆಧುನಿಕ ಶಿಕ್ಷಣದ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿದೆ. ಪ್ರೌಢಶಾಲಾ ಶಿಕ್ಷಣವನ್ನು ಪಡೆದವರ ಸಂಖ್ಯೆ ತೀರಾ ಕಡಿಮೆ. ಇವೆಲ್ಲವುಗಳ ಪರಿಣಾಮವಾಗಿ ಅವರ ಆರ್ಥಿಕ ಸ್ಥಿತಿಗತಿ ಕೆಳಮಟ್ಟದ್ದಾಗಿದ್ದು, ಹೆಚ್ಚಿನವರು ಸ್ತ್ರೀಯರ ದುಡಿಮೆಯನ್ನೇ ಅವಲಂಬಿಸಿದವರು. ಗೃಹಕೃತ್ಯದ ಜವಾಬ್ದಾರಿಗಳಿಂದ ಪಲಾಯನ ಮಾಡುವ ಗಂಡಸರಾಗಿ ಕಾಣಿಸಿಕೊಳ್ಳುತ್ತಾರೆ. ಸಾರಾ ಅವರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಮಹಿಳೆಯರೆಲ್ಲಾ ಪುರುಷ ಪ್ರಧಾನ ವ್ಯವಸ್ಥೆ ಹಾಕಿದ ಚೌಕಟ್ಟನ್ನು ಮೀರದಂತವರು. ಹಾಗಾಗಿ ಆರ್ಥಿಕ ಹೊಡೆತ ಮಹಿಳೆಯರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿದೆ. ಶಿಕ್ಷಣ ಪಡೆಯುವ ವಯಸ್ಸಿನಲ್ಲಿ ದಾಂಪತ್ಯದೊಳಗೆ ಕಾಲಿಡಬೇಕಾದ ಸನ್ನಿವೇಶಗಳು ಮುಸ್ಲಿಂ ಸಮುದಾಯದೊಳಗಿ ರುವುದನ್ನು ಕಾದಂಬರಿ ಚಿತ್ರಿಸಿದೆ. ಈ ಕಾರಣಕ್ಕಾಗಿಯೇ ಸ್ತ್ರೀಯರು ಅನೇಕ ಕಷ್ಟಗಳಿಗೆ ತುತ್ತಾಗುವುದನ್ನು ಕಾದಂಬರಿ ತೋರಿಸಿಕೊಡುತ್ತದೆ. ಹಿಂದಿನಿಂದ ರೂಢಿಗತವಾಗಿ ಬಂದಿರುವುದನ್ನೇ ಸ್ತ್ರೀಯರು ಪಾಲಿಸಿಕೊಂಡು ಹೋಗಬೇಕಾಗಿತ್ತು. ಅಪ್ಪಿತಪ್ಪಿಯೂ ಯಾವುದನ್ನೂ ಪ್ರಶ್ನಿಸುವಂತಿರಲಿಲ್ಲ.

'ಶಿಕ್ಷಣ'ದ ಕೊರತೆ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಬದುಕನ್ನು ಎಷ್ಟೊಂದು ನಲುಗಿಸುತ್ತದೆ ಎನ್ನುವುದು ಸಹನಾ ಕಾದಂಬರಿಯ ನಸೀಮಾನ ಪಾತ್ರದಲ್ಲಿ ವ್ಯಕ್ತವಾಗುತ್ತದೆ. ಹದಿಮೂರನೇ ವಯಸ್ಸಿಗೆ ಮದುವೆಯಾಗಿ ಹದಿನಾಲ್ಕು ತುಂಬುದರೊಳಗೆ ಒಂದು ಮಗುವಿನ ತಾಯಿಯಾಗಿ ಆ ಹೆರಿಗೆಯ ಸಮಯದಲ್ಲಿ ಅವಳು ಪಡುವ ಯಾತನೆ, ಅವಳ ಯಾತನೆ ಕಂಡು ಸೂಲಗಿತ್ತಿ ಹೇಳುವ ಬುದ್ಧಿ ಮಾತು, ಅಲ್ಲದೆ ವರ್ಷವೊಂದಕ್ಕೆ

ಒಂದೊಂದು ಮಗುವಿನ ತಾಯಿಯಾಗಿ ಅವಳು ದೈಹಿಕ ಮತ್ತು ಮಾನಸಿಕ ಕಾಯಿಲೆಗೆ ಒಳಗಾಗುವುದು ಇವೆಲ್ಲವೂ ಆ ಸಮುದಾಯದ ಒಳಗಿರುವ ಗಂಡು– ಹೆಣ್ಣಿಗಿರುವ ಶಿಕ್ಷಣದ ಕೊರತೆಯೇ ಕಾರಣವಾಗಿದೆ. ಗಂಡು ಮತ್ತು ಹೆಣ್ಣು ಮಕ್ಕಳ ನಡುವಿನ ಭೇದ ಭಾವ ಕಾಣಿಸುವುದು ಶಿಕ್ಷಣದ ಕೊರತೆಯಿಂದಲೇ ಎಂಬುದನ್ನು ಕಾದಂಬರಿಯು ಬಯಲು ಪಡಿಸುತ್ತದೆ. ಬೊಳುವಾರರ 'ಜೆಹಾದ್' ಕಾದಂಬರಿಯನ್ನು ಗಮನಿಸಿದರೆ ಆರಂಭದಿಂದಲೇ ಮುಸ್ಲಿಮರಲ್ಲಿ ಶೈಕ್ಷಣಿಕ ಹಿನ್ನೆಲೆಯ ಕೊರತೆಯಿರುವ ಕಾರಣದಿಂದಲೇ ಏನೋ ಇಲ್ಲಿ ಶಿಕ್ಷಣ ಪಡೆಯುವ ಇಸ್ಲಾಂ ಮಕ್ಕಳ ವಿರುದ್ಧ ಧಾರ್ಮಿಕ ಮುಖಂಡರು ಧ್ವನಿ ಏರಿಸುತ್ತಾ ಹೋಗುವುದನ್ನು ಕಾದಂಬರಿಗಳು ಚಿತ್ರಿಸುವ ಪ್ರಯತ್ನ ಮಾಡಿವೆ.

ಒಟ್ಟಿನಲ್ಲಿ ಈ ಕಾದಂಬರಿಯೊಳಗೆ ಸಾಂಪ್ರದಾಯಿಕ ಮನಸ್ಥಿತಿಯುಳ್ಳ ಇಸ್ಲಾಂ ಸಮುದಾಯ ಮತ್ತು ಆಧುನಿಕ ಮನಸ್ಥಿತಿಯುಳ್ಳ ಕ್ರಿಶ್ಚಿಯನ್ ಸಮುದಾಯದೊಳಗಿನ ಸಂಘರ್ಷದ ಜೊತೆಗೆ ರಶೀದ್ ಇಸ್ಲಾಂ ಸಂಸ್ಕೃತಿಯನ್ನು ಪೂರ್ತಿಯಾಗಿ ತಿರಸ್ಕರಿಸದೆ, ಕ್ರಿಶ್ಚಿಯನ್ ಸಂಸ್ಕೃತಿಯನ್ನು ಪುರಸ್ಕರಿಸದೆ ಎರಡರ ಮಧ್ಯೆ ಒಂದು ರೀತಿಯ ಸಮತೋಲನವನ್ನು ಕಾಯ್ದುಕೊಂಡು ಹೋಗಲು ಕಾದಂಬರಿಯ ಉದ್ದಕ್ಕೂ ಪ್ರಯತ್ನಿಸುವುದನ್ನು ನಾವು ಗುರುತಿಸಬಹುದು.

೬.೬. ವೃತ್ತಿ

ಸಾರಾ ಅವರ ಕೃತಿಗಳು ಸಾಮಾನ್ಯವಾಗಿ ಮುಸ್ಲಿಂ ಸಮುದಾಯದ ಕೆಳವರ್ಗದ ಜನರ ಬದುಕನ್ನು ಹೆಚ್ಚು ಕೇಂದ್ರೀಕರಿಸಿರುವುದರಿಂದ ಅವರ ಕಾದಂಬರಿ ಪಾತ್ರಗಳೆಲ್ಲವೂ ಹೆಚ್ಚಿನ ಶಿಕ್ಷಣಕ್ಕೆ ತೆರೆದುಕೊಂಡಂತದ್ದಲ್ಲ. ಧಾರ್ಮಿಕ ಶಿಕ್ಷಣವನ್ನು ಅಲ್ಪಸ್ವಲ್ಪ ಪಡೆದ ಜನಸಮೂಹವೇ ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಬೇಕಾದ ಅಲ್ಪಸ್ವಲ್ಪ ಆರ್ಥಿಕತೆಯನ್ನು ಹೊಂದಿದ ಲಘು ಕೆಲಸಗಳನ್ನು ಜನ ಆಯ್ದುಕೊಳ್ಳುವುದನ್ನು ಕಾದಂಬರಿಯೊಳಗೆ ಗುರುತಿಸಬಹುದು. ಇಲ್ಲಿ ಬರುವ ಗಂಡು ಪಾತ್ರಗಳೆಲ್ಲಾ ಸಾಮಾನ್ಯವಾಗಿ ಸೋಮಾರಿತನವನ್ನು ಮೈಗೂಡಿಸಿಕೊಂಡ ಮತ್ತು ಮಹಿಳೆಯರು ದುಡಿದುದರಲ್ಲೇ ಕುಳಿತು ತಿನ್ನುವ ಪ್ರವೃತ್ತಿಯನ್ನೇ ಸಕೀನಾಳ ಅಣ್ಣ ಮತ್ತು ಜುಲೇಕನ ಮಗನ ಪಾತ್ರಗಳಲ್ಲಿ ಗುರುತಿಸಬಹುದು. ಸಾಮಾನ್ಯ ಗುಡಿಸಲುಗಳನ್ನು ಹೊಂದಿದ ಬಡ ಕುಟುಂಬಗಳು ಅಲ್ಲಲ್ಲಿ ಆಡುಗಳನ್ನು ಸಾಕಿಕೊಂಡು, ಕೋಳಿಗಳನ್ನು ಸಾಕಿಕೊಂಡು ಬದುಕನ್ನು ಕಟ್ಟುವ ಕಾರ್ಯದಲ್ಲಿ ನಿರತರಾಗಿರುವುದನ್ನು ಕಾದಂಬರಿಯೊಳಗೆ ಗುರುತಿಸಬಹುದು. ಇನ್ನು ಅನೇಕ ಕುಟುಂಬಗಳಲ್ಲಿ ಗಂಡ ಬಿಟ್ಟು ಹೋದ ಮಹಿಳೆಯರು ಮನೆಯೊಳಗೆ ಕುಳಿತುಕೊಳ್ಳದೆ ತಮ್ಮ ಮಕ್ಕಳ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡು ಶ್ರೀಮಂತರ ಮನೆಗೆ ಅಡುಗೆ ಮತ್ತು ಬಾಣಂತನ ಮಾಡಿಸುವ ಕೆಲಸವನ್ನು ನಿರ್ವಹಿಸುವುದನ್ನು ಕಾದಂಬರಿಯಲ್ಲಿ ಗುರುತಿಸಬಹುದು. ಮುಸ್ಲಿಂ ಬಡ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಮದುವೆಗಾಗಿ ಮೊದಲೇ ಹಣವನ್ನು ಕೂಡಿಡಬೇಕಾಗಿರುವುದರಿಂದ ಅವರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡದೆ ಬೀಡಿ ಕಟ್ಟುವ ಕೆಲಸವನ್ನು ತಮ್ಮ ಮನೆಯ ಆದಾಯದ ಮೂಲವಾಗಿ ಗುರುತಿಸಿಕೊಳ್ಳುವುದನ್ನು ನಸೀಮಾಳ ಪಾತ್ರದ ಮೂಲಕ ಕಾಣಬಹುದು. ಸಾರಾ ಅವರ ಕಾದಂಬರಿಗಳಲ್ಲಿ ಬರುವ ಗಂಡಿನ ಪಾತ್ರಗಳೆಲ್ಲವೂ ವೃತ್ತಿಯ ಹಿನ್ನೆಲೆಯಲ್ಲಿ ಹೆಣ್ಣಿನ ಪಾತ್ರಗಳಿಗಿಂತ ಗೌಣವಾಗಿದ್ದು, ಹೆಣ್ಣಿನ ವೃತ್ತಿಗಳೆಲ್ಲವೂ ಹೆಚ್ಚು ಜವಾಬ್ದಾರಿಯುತವಾದ ಮತ್ತು ಮನೆಗೆ ನೆರವಾಗುವ ಪಾತ್ರಗಳಂತೆ ಕಾಣಿಸುತ್ತದೆ.

ಮುಸ್ಲಿಂ ಸಮುದಾಯದ ಕಾದಂಬರಿಯನ್ನು ಸ್ಥೂಲವಾಗಿ ಗಮನಿಸಿದಾಗ ಸಮುದಾಯದಲ್ಲೂ ಅಧಿಕಾರ ಹೊಂದಿದವರೆಲ್ಲಾ ಐಷಾರಾಮಿ ಬದುಕನ್ನು ಕಟ್ಟಿಕೊಂಡಿದ್ದು, ಉಳಿದ ಬಡವರ್ಗ ತಮಗೆ ಅನುಕೂಲವಾಗುವಂತೆ ಸಣ್ಣ ಸಣ್ಣ ವೃತ್ತಿಯಲ್ಲಿ ತೊಡಗಿಸಿ ಕೊಂಡಿರುವುದನ್ನು ಕಾದಂಬರಿಯಲ್ಲಿ ಗಮನಿಸಬಹುದು. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಆಯ್ದ ಕಾದಂಬರಿಗಳನ್ನು ಈ ಭಾಗದ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ೭.

ಸಮಾರೋಪ

"ಕನ್ನಡ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆ ಸ್ವರೂಪ" (೧೯೭೪ರ ನಂತರದ ಪ್ರಮುಖ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ಸಂಶೋಧನಾ ಮಹಾಪ್ರಬಂಧವನ್ನು ೧೯೭೪ರ ದಶಕದ ಸಾಹಿತ್ಯ ಪಂಥಗಳನ್ನು ಕೇಂದ್ರವಾಗಿಟ್ಟುಕೊಂಡು ವಿಶ್ಲೇಷಣೆಯನ್ನು ನೀಡಿರುತ್ತೇನೆ. ಈ ಅಧ್ಯಯನವು ೧೯೭೪ರ ನಂತರದ ಪ್ರಮುಖ ಸಾಹಿತ್ಯ ಘಟ್ಟಗಳನ್ನು ಕೇಂದ್ರವಾಗಿಟ್ಟುಕೊಂಡಿದೆ. ದಲಿತ, ಬಂಡಾಯ ಕಾಲಘಟ್ಟದ ಪ್ರಧಾನ ಕಾದಂಬರಿಗಳು ಈ ಅಧ್ಯಯನದ ಕೇಂದ್ರವಾಗಿದೆ. ೧೯೭೪ರ ನಂತರದ ಕಾಲದಲ್ಲಿ ಅನೇಕರ ಕಾದಂಬರಿಗಳು ಬಂದಿವೆಯಾದರೂ, ನನ್ನ ಸಂಶೋಧನೆಯು ದಲಿತ, ಬಂಡಾಯ ಕಾಲಘಟ್ಟವನ್ನೇ ಕೇಂದ್ರವಾಗಿರಿಸಿರುವ ಕಾರಣ ಎಲ್ಲಾ ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ. ಕಾಲದ ಪರಿಮಿತಿಯಿಂದಾಗಿ ಒಂದು ನಿರ್ದಿಷ್ಟ ಚೌಕಟ್ಟನ್ನು ಹಾಕಿಕೊಂಡು ಗಾಂಧಿವಾದ, ಮಾರ್ಕ್ಸ್ ವಾದ, ಲೋಹಿಯಾವಾದ, ಅಂಬೇಡ್ಕರ್ ವಾದ ಮತ್ತು ಸ್ತ್ರೀವಾದಗಳ ಹಿನ್ನಲೆಯಲ್ಲಿ ಆಯ್ದ ಕಾದಂಬರಿಗಳನ್ನು ವಿಶ್ಲೇಷಣೆಗೊಳಪಡಿಸಿರುತ್ತೇನೆ. ಆಯ್ದ ಕಾದಂಬರಿಗಳು ಸಂಸ್ಕೃತಿಯನ್ನು ಮರು ನಿರ್ವಚಿಸುವಲ್ಲಿ ವಹಿಸಿದ ಪಾತ್ರಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸುವ ಮೂಲಕ ಒಂದು ತಾತ್ವಿಕ ಚೌಕಟ್ಟನ್ನು ಒದಗಿಸಲಾಗಿದೆ. ಕಾಲದ ಪರಿಮಿತಿಯನ್ನು ಇಟ್ಟುಕೊಂಡು ಕನ್ನಡ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪ(೧೯೭೪ರ ನಂತರದ ಪ್ರಮುಖ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಅಡಿಯಲ್ಲಿ ೭ ಅಧ್ಯಾಯಗಳಿದ್ದು, ಇಲ್ಲಿ ಆಯ್ದ ಕನ್ನಡ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪವನ್ನು ಬೇರೆ ಬೇರೆ ಪರಾಮರ್ಶನ ಗ್ರಂಥಗಳ ಮೂಲಕ ನಾನೇ ಸಂಗ್ರಹಿಸಿದ ಮಾಹಿತಿಗಳ ಆಧಾರದಲ್ಲಿ ವಿಶ್ಲೇಷಿಸಿರುವೆ.

ಒಂದು 'ಸಂಸ್ಕೃತಿ'ಯ ಹಿರಿಮೆ ಇರುವುದು ಅದರ ಶಿಖರಗಳಲ್ಲಿ ಮಾತ್ರವಲ್ಲ. ಅದರತ್ತ ಏರುವ ಒಂದೊಂದು ಹೆಜ್ಜೆಯಲ್ಲಿಯೂ ಅದು ವ್ಯಕ್ತವಾಗುತ್ತಾ ಹೋಗುತ್ತದೆ. ಪರಿಪಕ್ವ ಮನಸ್ಸಿನ ಪರಿಣತ ಫಲ ಸಂಸ್ಕೃತಿ. ಇದರ ಹಿನ್ನೆಲೆಯನ್ನು ಒಳಗೊಂಡ ಕಲಾಕೃತಿಗಳು ಕಲಾವಿದನ ಪ್ರತಿಭೆಯ ಪ್ರತಿನಿಧಿ ಮಾತ್ರವಲ್ಲದೆ, ಜನಾಂಗದ ನಿಧಿಯೂ ಆಗುತ್ತವೆ. ಅವುಗಳ ವಿಕಾಸದಲ್ಲಿ ಜನಜೀವನದ ಪ್ರತಿಬಿಂಬವನ್ನೇ ಕಾಣುತ್ತೇವೆ. ಈ ಅರ್ಥದಲ್ಲಿ ಕಲೆ ಎನ್ನುವುದು ಸಮಾಜದ ಆತ್ಮಕತೆ. ಕನ್ನಡನಾಡಿನ ಆತ್ಮಕಥೆಯನ್ನು ಹೇಳುವ ಶಕ್ತಿ ಸಾಧನಗಳಾಗಿಯೇ ಉಳಿದಿವೆ. ಅಂತರಂಗಿಕ ಅನುಭವದ ಆಧ್ಯಾತ್ಮಿಕ ಸಾಧನೆಗಳು, ಧಾರ್ಮಿಕ ಆಚರಣೆಗಳು, ಹಬ್ಬಹರಿದಿನಗಳು, ಸಾಹಿತ್ಯ, ಕಲೆಗಳು

ಮೊದಲಾದುವುಗಳಿಂದ ಹಿಡಿದು ಬಹಿರಂಗದ ಪರಿಕರಗಳೆನ್ನಬಹುದಾದ ಬಟ್ಟೆ ನೇಯುವುದು, ಬುಟ್ಟಿ ಹೆಣೆಯುವುದು, ಬಣ್ಣ ಹಾಕುವುದರವರೆಗಿನ ಎಲ್ಲಾ ಚಟುವಟಿಕೆಗಳು ವಿಶಾಲ ಅರ್ಥದಲ್ಲಿ ವಲಯದೊಳಕ್ಕೇ ಬರುತ್ತವೆ. ಜೀವನದ ಎಲ್ಲಾ ಅಂಗಗಳಲ್ಲಿಯೂ, ಊರುಗಳ ಮತ್ತು ವ್ಯಕ್ತಿಗಳ ಹೆಸರುಗಳಲ್ಲಿಯೂ ನಾಡಿನ ಸಂಸ್ಕೃತಿಯ ಆತ್ಮಕತೆ ಮಿಡಿಯುತ್ತಿದೆ.

ಬದಲಾಗುತ್ತಿರುವ ಸನ್ನಿವೇಶಕ್ಕೆ ಅನುಗುಣವಾಗಿ ಜನಜೀವನ ಹೊಂದಿಕೊಳ್ಳಬೇಕಾಗುತ್ತದೆ. ಹೊಸ ಹೊಸ ವಿಚಾರಗಳ ಮಥನದಿಂದ ಅನೇಕ ಹಳೆಯ ನಂಬಿಕೆಗಳು ಕುಸಿಯುತ್ತವೆ. ಹೊಸ ಬೆಳಕು ಮೂಡುತ್ತದೆ. ಅದು ಅನಿವಾರ್ಯ ಮತ್ತು ಅಗತ್ಯ. ಹಣ್ಣೆಲೆ ಉದುರಿ ಹೊಸ ಎಲೆ ಚಿಗುರುವಂತೆ ಸಹಜವೂ ಹೌದು. ವೃಕ್ಷ ಜೀವಂತವಾಗಿರುವುದರ ಲಕ್ಷಣ ಅದು. ಕರ್ನಾಟಕ ಸಂಸ್ಕೃತಿ ಇಂತಹ ಜೀವಂತ ಲಕ್ಷಣವನ್ನು ಪಡೆದು ಹೊಸ ಹೊಸ ಚಿಗುರನ್ನು, ಹೂವು ಹಣ್ಣುಗಳನ್ನು ಅರಳಿಸುತ್ತಾ ಬಂದಿದೆ. ತಳದಲ್ಲಿರುವ ತಾಯಿ ಬೇರಿನ ಸತ್ವದಿಂದ ಮೇಲೆ ಪಲ್ಲವಿಸಿ ನಿತ್ಯ ನೂತನವಾಗಿ ನಳನಳಿಸುತ್ತಿದೆ.

ಇಂದಿನ ಜಾಗತೀಕರಣ ಮತ್ತು ಅಭಿವೃದ್ಧಿ ಬಲಗಳ ಒತ್ತಡದ ಪರಿಸರದಲ್ಲಿ ಕರ್ನಾಟಕ ನವೀನ ಸಂಸ್ಕೃತಿ ಆವಿರ್ಭಾವದ ಯುಗಕ್ಕೆ ಪ್ರವೇಶಿಸಿದೆ. ಉದ್ಯೋಗಾವಕಾಶಗಳಿಂದಾಗಿ ಜೀವನ ಶೈಲಿಯಲ್ಲಿ ಬದಲಾವಣೆಗಳಾಗುತ್ತಿವೆ. ಶಿಕ್ಷಣ ಕ್ಷೇತ್ರದಲ್ಲಿ ಅಪೂರ್ವ ಪ್ರಗತಿ ಸಾಧಿಸುತ್ತಿದೆ. ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಗಳು ತಲ್ಲಣ ಅನುಭವಿಸುತ್ತಿವೆ. ಬಡವ-ಬಲ್ಲಿದರ ನಡುವೆ ಅಂತರ ಹೆಚ್ಚಿದೆ. ಕನ್ನಡ ಭಾಷೆ ಹೊರಗಿನ ಒತ್ತಡದಿಂದ ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲು ಮತ್ತು ಜವಾಬುಗಳ ಯುಗದಲ್ಲಿ ಭಾರತೀಯ ಸಂಸ್ಕೃತಿಯ ಹೊಸ ಮಾರ್ಪಾಟಿನೊಂದಿಗೆ ಕರ್ನಾಟಕ ಸಂಸ್ಕೃತಿಯು ಯಶಸ್ವಿಯಾಗಿ ಹೆಜ್ಜೆ ಹಾಕುತ್ತಿದೆ ಎನ್ನಬಹುದು.

ಆಧುನಿಕತೆಯ ಪ್ರಭಾವ, ಶಿಕ್ಷಣ, ವಸಾಹತುಶಾಹಿ ವ್ಯವಸ್ಥೆ, ಬಂಡವಾಳಶಾಹಿ ವ್ಯವಸ್ಥೆ, ಶ್ರಮ, ದೇಸಿ ಚಿಂತನಾ ಕ್ರಮದಲ್ಲಾದ ಬದಲಾವಣೆ ಇಡೀ ಭಾರತೀಯ ಜನ ಜೀವನವನ್ನೇ ಬದಲಾಯಿಸಿತು. ಮನುಷ್ಯನ ಆಚಾರ-ವಿಚಾರ, ರೀತಿ-ನೀತಿ, ಸಂಪ್ರದಾಯ, ನಂಬಿಕೆಗಳೆಲ್ಲವೂ ಹೊಸ ಸ್ವರೂಪವನ್ನು ಪಡೆಯಲಾರಂಭಿಸಿತು. ಕೃಷಿ ವ್ಯವಸ್ಥೆಯಿಂದ ನಗರದ ಕಡೆ ಮುಖ ಮಾಡಿದ ಆಧುನಿಕ ಜನ ತಮ್ಮ ಬದುಕನ್ನು ಹೊಸ ನೆಲೆಯಲ್ಲಿ ಕಟ್ಟಿಕೊಳ್ಳುವ ಪ್ರಯತ್ನ ಮಾಡಿರುವುದನ್ನು ನಾವು ಗುರುತಿಸಬಹುದು. ಹಾಗೆಂದು ಪರಂಪರೆಯನ್ನು ಸಂಪೂರ್ಣವಾಗಿ ತ್ಯಜಿಸದೆ, ಆಧುನಿಕತೆಯನ್ನು ಸಂಪೂರ್ಣವಾಗಿ ಸ್ವೀಕರಿಸದೆ ಅವೆರಡರ ಮಧ್ಯೆ ಸಮನ್ವಯತೆ ಸಾಧಿಸಲು ಪ್ರಯತ್ನಿಸಿರುವುದನ್ನು ನಾನು ಕಾದಂಬರಿಗಳಲ್ಲಿ ಗುರುತಿಸುವ ಪ್ರಯತ್ನ ಮಾಡಿರುತ್ತೇನೆ.

ಅನುವಾದಗಳ ಕಾರ್ಯವು ಈ ಸಮಯದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳಲು ಆರಂಭಿಸಿದರಿಂದಲೋ ಏನೋ ಕಾದಂಬರಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಎನ್ನಬಹುದು. ಆರಂಭದಲ್ಲಿ ಬಂಗಾಳಿ, ಮರಾಠಿಯಿಂದ ಕಾದಂಬರಿಗಳು ಅನುವಾದಗೊಂಡವು. ಆರಂಭದಲ್ಲಿ ಕಾದಂಬರಿಗಳನ್ನು ಇಲ್ಲಿಯ ಸಮಸ್ಯೆಗಳನ್ನು ಕೇಂದ್ರೀಕರಿಸಿಕೊಂಡು ರಚಿಸಲಾಯಿತು. ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆಗಳು ಮರು ಸೃಷ್ಟಿಗೊಂಡವು.

ಹೀಗಾಗಿ ಸಾಮಾಜಿಕ ವಸ್ತುಗಳು ಕಾದಂಬರಿಯ ಕೇಂದ್ರವಾಗಿರುವುದರಿಂದ ಅಪಾರ ಓದುಗ ವರ್ಗವನ್ನು ಹುಟ್ಟು ಹಾಕಿದವು. ಬ್ರಾಹ್ಮಣ ವರ್ಗ ಈ ಸಂದರ್ಭದಲ್ಲಿ ಹೆಚ್ಚು ಶಿಕ್ಷಣಕ್ಕೆ ತೆರೆದುಕೊಂಡವರಾ ದ್ದರಿಂದ ಆ ಸಮುದಾಯದ ಸಮಸ್ಯೆಗಳು ಆರಂಭಿಕ ಕಾಲದ ಕಾದಂಬರಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡವು. ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಇಂಗ್ಲೀಷ್ ವಿದ್ಯಾಭ್ಯಾಸ, ರಾಷ್ಟ್ರೀಯತೆಯನ್ನೊಳಗೊಂಡ ಕಾದಂಬರಿಗಳು ಸೃಷ್ಟಿಯಾದವು. ನವೋದಯ ಸಂದರ್ಭದಲ್ಲಿ ಪ್ರಾದೇಶಿಕ ಕಾದಂಬರಿಗಳಿಗೆ ಹೆಚ್ಚು ಒತ್ತು ದೊರೆತವು. ಶಿಕ್ಷಣ, ಆಧುನಿಕತೆ, ವಸಾಹತುಶಾಹಿಯ ಬಗ್ಗೆ ಮರು ಚಿಂತಿಸುವಂತೆ ಈ ಕಾದಂಬರಿಗಳು ಪ್ರೇರೇಪಿಸಿದವು. ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಯ ಒಲವನ್ನು ನಿರಾಕರಿಸಿ ಪ್ರಾದೇಶಿಕ ಭಾಷೆಗೆ ಹೆಚ್ಚಿನ ಮಹತ್ವ ದೊರೆಯಿತು. ಪ್ರಾದೇಶಿಕ ಅನನ್ಯತೆ ಕಾದಂಬರಿಯಲ್ಲಿ ಮೂಡಿಬಂತು. ಜಮೀನ್ದಾರಿಕೆ, ವೈದಿಕ ಸಂಪ್ರದಾಯ, ಅಸ್ಪೃಶ್ಯತೆ, ಲಿಂಗ ತಾರತಮ್ಯಗಳ ಸಂಘರ್ಷವು ಕಾದಂಬರಿಯಲ್ಲಿ ಕಾಣಿಸಿಕೊಂಡವು. ಪ್ರಗತಿಶೀಲರಲ್ಲಿ ವರ್ಗ ಸಂಘರ್ಷವು ಸಾಹಿತ್ಯದ ವಸ್ತುವಾಯಿತು. ವರ್ಗದ ನೆಲೆಯಲ್ಲಿ ಸಮಾಜದ ಬದಲಾವಣೆಯನ್ನು ಗುರುತಿಸಲಾಯಿತು. ಶೋಷಣೆಯ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವುದೇ ಪ್ರಗತಿಶೀಲರ ಮುಖ್ಯ ಧೋರಣೆಯಾಗಿತ್ತು. ಇದರಿಂದ ಶೋಷಿತರ ಬದುಕನ್ನೇ ಕಾದಂಬರಿಗಳಿಗೆ ವಸ್ತುವಾಗಿಸಿಕೊಂಡು ಕಾದಂಬರಿ ಕ್ಷೇತ್ರವನ್ನು ವಿಸ್ತರಿಸಿದರು. ನವ್ಯ ಕಾಲಘಟ್ಟದ ಕ್ಕಾಗುವಾಗ ಭಾರತದ ಸ್ವಾತಂತ್ರ ಸ್ಥಿತಿಯಲ್ಲಿ ಬದಲಾವಣೆಗೊಂಡು, ನಗರಗಳು ಬೃಹತ್ ಪ್ರಮಾಣದಲ್ಲಿ ಬೆಳೆದಿದ್ದವು. ರಾಜಕೀಯ ಆಡಳಿತವು ಜನತೆಯಲ್ಲಿ ಭ್ರಮನಿರಸನವನ್ನುಂಟು ಮಾಡಿತು. ಕೈಗಾರಿಕೆಗಳ ಅತಿಯಾದ ಅವಲಂಬನೆಯಿಂದ, ಮಹಾ ಯುದ್ಧಗಳಿಂದಾಗಿ ಸಾಮಾಜಿಕ ಸಂಬಂಧಗಳಲ್ಲಿ ಬಿರುಕು ಬಿಡಲಾರಂಭಿಸಿತು. ಏಕತಾನತೆ ಕಾಡಲಾರಂಭಿಸಿತು. ನಗರಕ್ಕೆ ಬಂದು ಗ್ರಾಮಗಳಲ್ಲಿ ಬೇರುಬಿಟ್ಟಿದ್ದವರಿಗೆ ಅತ್ಯಂತ ಭ್ರಮ ನಿರಸನ ಉಂಟಾಯಿತು. ಇದನ್ನು ಕಾದಂಬರಿಯಲ್ಲಿ ತರಲು ಪ್ರಯತ್ನಿಸಿದರು. ನಗರ ಸಮಸ್ಯೆಗಳು ಪ್ರಧಾನವಾದವು. ರಾಜಕೀಯ ಅಧಃಪತನ ತೀಕ್ಷ್ಣವಿಡಂಬನೆಗೆ ಒಳಗಾಯಿತು. ಇದರಿಂದ ಕಾದಂಬರಿಗೆ ಹೊಸ ಆಯಾಮಗಳು ದೊರೆಯಿತು. ದಲಿತ, ಬಂಡಾಯ ಚಳುವಳಿಯಲ್ಲಿ ಹಲವು ಸಂಸ್ಕೃತಿಗಳು ಧ್ವನಿಯನ್ನು ಪಡೆದವು. ಇದಕ್ಕೆ ಅನೇಕ ಪ್ರಗತಿಪರ ಚಳವಳಿಗಳು ಪ್ರೇರಣೆ ನೀಡಿದ್ದವು. ಚಾರಿತ್ರಿಕವಾಗಿ ಸಾಮಾಜಿಕ ನೆಲೆಯಲ್ಲಿ ಅಲಕ್ಷಿತ ಎನಿಸಿಕೊಂಡ ಸಮುದಾಯಗಳೆಲ್ಲವೂ ಈ ಸಂದರ್ಭದಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಂಡವು. ದಲಿತ, ಮುಸ್ಲಿಂ, ಮಹಿಳಾ ಸಂವೇದನೆಗಳು ಕಾಣಿಸಿಕೊಂಡವು. ಶೋಷಿತರ, ದಮನಿತರ ಪರವಾಗಿ ರುವ ನಿಲುವುಗಳು ಪ್ರಧಾನವಾದವು. ಹೋರಾಟ ಪ್ರತಿಭಟನೆಗಳೇ ಮುಖ್ಯ ಧ್ವನಿಯಾಗಿ ಕಾಣಿಸಿಕೊಂಡವು. ಇಂತಹ ಸನ್ನಿವೇಶದಲ್ಲಿ ಕಾದಂಬರಿ ಕ್ಷೇತ್ರವು ವೈವಿಧ್ಯತೆಯಿಂದ ಕೂಡಿಕೊಂಡಿವೆ. ಹೀಗೆ ಕನ್ನಡದಲ್ಲಿ ಕಾದಂಬರಿ ಕ್ಷೇತ್ರವು ಮಹತ್ವದ ಸಾಧನೆಯನ್ನು ಗಳಿಸಿದೆ.

ಲೇಖಕರ ಮನೋಧರ್ಮ, ಸಾಹಿತ್ಯ ರಚನೆಯ ಕಾಲಘಟ್ಟ, ಪರಿಸರಗಳ ಪ್ರಭಾವದಿಂದ ಅವರು ವ್ಯಕ್ತಪಡಿಸುವ ಚಿಂತನೆಗಳಿಗೂ ಅಂತರವಿರುತ್ತದೆ. ಸಾಮೂಹಿಕವಾಗಿ ಕಲೆತು ಹಾಡುವ, ಹಾಡಿನ ಗತಿಗೆ ತಕ್ಕಂತೆ ಕುಣಿಯುವ ದಲಿತ ಸಮುದಾಯದ ಜೀವನಕ್ರಮ ಬಂಡಾಯ ಕಾದಂಬರಿಗಳಲ್ಲಿ ಮೈತಳೆದಿದೆ. ದಲಿತ ಕಾದಂಬರಿಗಳಲ್ಲಿ ದಲಿತರ ಚಿತ್ರಕಲೆ, ಕಥೆಗಾರಿಕೆ, ಕನಸುಗಾರಿಕೆ, ಹಾಡುಗಾರಿಕೆ ಮುಂತಾದ ಸೃಜನಶೀಲ ಗುಣಗಳ

ಪ್ರಸ್ತಾಪ ಸಾಕಷ್ಟು ದೊರೆಯುತ್ತದೆ. ದಲಿತರಲ್ಲಿರುವ ಚಾಲಾಕಿ ಸ್ವಭಾವದ ಅಪರೂಪದ ಚಿತ್ರಣವೂ ಈ ಕಾಲದ ಕಾದಂಬರಿಗಳ ಮೂಲಕವೆ ತಿಳಿದು ಬರುತ್ತದೆ. ಎಂದರೆ ಎಷ್ಟೇ ಶೋಷಿತರಾಗಿದ್ದರೂ, ಅವರ ಲವಲವಿಕೆ, ಸೃಜನಶೀಲತೆಗಳನ್ನು ಬರಡಾಗಿಸಲು ಶೋಷಕರಿಂದ ಸಾಧ್ಯವಾಗಿಲ್ಲ ಎಂಬ ನಿಲುವು ಸ್ಪಷ್ಟವಾಗುತ್ತದೆ.

ದಲಿತರ, ಮಹಿಳೆಯರ ಮತ್ತು ಮುಸ್ಲಿಂ ಸಾಂಸ್ಕೃತಿಕ ಜಗತ್ತಿನ ಅನಾವರಣ ನವ್ಯೋತ್ತರ ಕಾದಂಬರಿಗಳ ಕಾಲದಲ್ಲಿ ಅನಾವರಣಗೊಂಡಿ ರುವುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಇವರೆಲ್ಲರ ಸಾಂಸ್ಕೃತಿಕ ಜಗತ್ತಿನ ಅನಾವರಣ ತುಲನಾತ್ಮಕವಾಗಿ ಹೆಚ್ಚಾಗಿದೆ. ಇದರಿಂದ ಲೇಖಕರು ತನ್ನ ಸಮಾಜ, ಸಂಸ್ಕೃತಿಯ ಕುರಿತಂತೆ ಅಧಿಕೃತವಾಗಿ ಮಾತನಾಡುವಂತೆ ಅನ್ಯ ಸಂಸ್ಕೃತಿಯ ಕುರಿತು ಮಾತನಾಡಲು ಸಾಧ್ಯವಾಗುವುದಿಲ್ಲ. ಏನನ್ನು ಹೇಳ ಹೊರಟರೂ ಅದು ಕೇವಲ ಮೇಲ್ ಸ್ತರದ ವಿವರಗಳಲ್ಲಿ ವಿರಮಿಸುತ್ತದೆ ಎಂಬ ಸತ್ಯವನ್ನು ಒಪ್ಪಿಕೆಣಟಿಜಜಜುಿಟಿಜಜಳ್ಳಬಹುದು. ಆದರೆ ಈವರೆಗೆ ಆಯಾ ಸಂಸ್ಕೃತಿಗಳ ಕುರಿತಂತೆ ಗ್ರಹಿಸಿರುವ ಅನೇಕ ವಿಚಾರಗಳಲ್ಲಿ ಎಲ್ಲವೂ ಸಾಹಿತ್ಯ ಕ್ಷೇತ್ರದಲ್ಲಿ ಪ್ರವೇಶ ಪಡೆದಿಲ್ಲ. ಈ ಎಲ್ಲಾ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಚಹರೆಯ ಎಲ್ಲಾ ಅಂಶಗಳಲ್ಲಿ ಕೆಲವೊಂದು ಇನ್ನೂ ಬೆಳಕಿಗೆ ಬಾರದೆ ಇರುವುದನ್ನು ಕಾದಂಬರಿಗಳು ಸೂಚಿಸುತ್ತವೆ.

ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನಗಳ ಸಂದರ್ಭದಲ್ಲಿ ಪರ್ಯಾಯ ಸಂಸ್ಕೃತಿಯ ಸ್ವರೂಪವನ್ನು ಕುರಿತ ಶೋಧ ಮತ್ತು ಪ್ರತಿಪಾದನೆಯ ಚರ್ಚೆಗಳು ಇತ್ತಿಚೇಗೆ ವಿಶೇಷವಾಗಿ ನಡೆಯುತ್ತಿವೆ. ಭಾರತದಂತಹ ದೇಶದಲ್ಲಿ ಇರುವುದು ಒಂದು ಸಂಸ್ಕೃತಿಯಲ್ಲ, ಹಲವು ಸಂಸ್ಕೃತಿಗಳೆಂಬ ತಾತ್ವಿಕ ಗ್ರಹಿಕೆಗಳ ಮೇಲೆ ಚರ್ಚೆಗಳು ನಡೆದಿವೆ. ಪರ್ಯಾಯ ಸಂಸ್ಕೃತಿಯನ್ನು ಇತ್ತೀಚೆಗಿನ ವಿವಿಧ ಜನಾಂಗ ಜಾನಪದ ಸಂಬಂಧಿ ಅಧ್ಯಯನಗಳು ಸಮರ್ಥಿಸಿವೆ. ಸಂಸ್ಕೃತಿಯನ್ನು ಹೊಂದಿರುವ ಪ್ರತಿಯೊಂದು ಜನಾಂಗವು ತನ್ನ ಅನನ್ಯ ಜಾನಪದದ ಮೂಲಕ ವಿಷಯ ವಿಶಿಷ್ಟವಾದ ಪರಿಕಲ್ಪನೆಗಳನ್ನು ಮುಂದಿಟ್ಟಿವೆ. ಒಂದು ನಿರ್ದಿಷ್ಟ ಸಂಸ್ಕ ತಿಯ ವಿಶಿಷ್ಟತೆಯನ್ನು, ಆ ಸಂಸ್ಕೃತಿಯು ಮುಂದಿಡುವ ಕೆಲವು ಪರಿಕಲ್ಪನೆಗಳ ಮೂಲಕ ನೋಡಬಹುದಾಗಿದೆ. ಕನ್ನಡ ಕಾದಂಬರಿಗಳಲ್ಲಿ ಅನಾವರಣಗೊಂಡಿರುವ ದಲಿತ, ಬಂಡಾಯ, ಮುಸ್ಲಿಂ ಮತ್ತು ಮಹಿಳಾ ಸಂಸ್ಕೃತಿಯ ಸ್ವರೂಪದ ಚರ್ಚೆಯು ಅತ್ಯಂತ ಮಹತ್ವದ್ದಾಗುತ್ತದೆ.

ಅಧ್ಯಯನದ ಫಲಿತಗಳು:

೧) ದಲಿತ, ಬಂಡಾಯ ಚಳುವಳಿಯಲ್ಲಿ ಹಲವು ಸಂಸ್ಕೃತಿಗಳು ಧ್ವನಿಯನ್ನು ಪಡೆದವು. ಇದಕ್ಕೆ ಅನೇಕ ಪ್ರಗತಿಪರ ಚಳವಳಿಗಳು ಪ್ರೇರಣೆಯನ್ನು ನೀಡಿವೆ.

೨) ದಲಿತ, ಬಂಡಾಯ, ಸ್ತ್ರೀ ಮತ್ತು ಮುಸ್ಲಿಂ ಸಂವೇದನೆಗಳು ಈ ಸಂದರ್ಭದಲ್ಲಿ ಕಾಣಿಸಿ**ಕೊಂ**ಡವು. ಶೋಷಿತರ, ದಮನಿತರ ಪರವಾದ ನಿಲುವುಗಳು ಪ್ರಧಾನವಾದವು. ಪ್ರತಿಭಟನೆ, ಹೋರಾಟ ಮುಖ್ಯ ಧ್ವನಿಯಾಯಿತು. ಈ

ಸಂದರ್ಭದಲ್ಲಿ ಕಾದಂಬರಿಗಳು ಸಂಸ್ಕೃತಿಯನ್ನು ಪುನರ್ ನಿರ್ಮಿಸಿಕೊಂಡ ಬಗೆಯನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

೨) ಭಾರತೀಯ ಸಮಾಜ ಹಲವು ಸಂಸ್ಕೃತಿ ಗಳಿಂದ ಕೂಡಿದೆ. ವೈದಿಕಶಾಹಿ ಮತ್ತು ವಸಾಹತುಶಾಹಿ ಧೋರಣೆಯ ಅಧ್ಯಯನ ಕ್ರಮಗಳು ಬಹುಸಂಸ್ಕೃತಿಗಳಿಗೆ ಅಷ್ಟೊಂದು ಮಾನ್ಯತೆ ನೀಡಿರಲಿಲ್ಲ. ತಮ್ಮ ನಿಲುವುಗಳಿಗನುಗುಣವಾದ ಏಕಾಕೃತಿಯ ಮಾದರಿಯ ಚರಿತ್ರೆಯನ್ನು ನಿರ್ಮಿಸಲು ಪ್ರಯತ್ನಿಸಿದ್ದವು. ಅದಕ್ಕೆ ಬಹುಸಂಸ್ಕೃತಿಗಳ ಶಕ್ತಿ ಸಾಧ್ಯತೆಗಳನ್ನು, ವೈವಿಧ್ಯ ವೈಶಿಷ್ಟತೆಗಳನ್ನು ಕಾದಂಬರಿಗಳಲ್ಲಿ ಅಡಕಗೊಂಡಿರುವ ವಿವಿಧ ಜನಸಮುದಾಯಗಳ ಬದುಕುಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹೇಳಿರುವೆ.

೩) ಆಧುನಿಕತೆಯ ಪ್ರಭಾವ, ಶಿಕ್ಷಣ, ವಸಾಹತುಶಾಹಿ ವ್ಯವಸ್ಥೆ, ಬಂಡವಾಳಶಾಹಿ ವ್ಯವಸ್ಥೆ, ಶ್ರಮ, ದೇಸಿ ಚಿಂತನಾ ಕ್ರಮದಲ್ಲಾದ ಬದಲಾವಣೆ ಇಡೀ ಭಾರತೀಯ ಜನ ಜೀವನವನ್ನೇ ಬದಲಾಯಿಸಿತು. ಮನುಷ್ಯನ ಆಚಾರ–ವಿಚಾರ, ರೀತಿ–ನೀತಿ, ಸಂಪ್ರದಾಯ, ನಂಬಿಕೆಗಳೆಲ್ಲವೂ ಹೊಸ ಸ್ವರೂಪವನ್ನು ಪಡೆಯಲಾರಂಭಿಸಿತು. ಕೃಷಿ ವ್ಯವಸ್ಥೆಯಿಂದ ನಗರದ ಕಡೆ ಮುಖ ಮಾಡಿದ ಆಧುನಿಕ ಜನ ತಮ್ಮ ಬದುಕನ್ನು ಹೊಸ ನೆಲೆಯಲ್ಲಿ ಕಟ್ಟಿಕೊಳ್ಳುವ ಪ್ರಯತ್ನ ಮಾಡಿರುವುದನ್ನು ನಾವು ಗುರುತಿಸಬಹುದು. ಹಾಗೆಂದು ಪರಂಪರೆಯನ್ನು ಸಂಪೂರ್ಣವಾಗಿ ತ್ಯಜಿಸದೇ ಆಧುನಿಕತೆಯನ್ನು ಸಂಪೂರ್ಣವಾಗಿ ಸ್ವೀಕರಿಸಿದೆ, ಅವೆರಡರ ಮಧ್ಯೆ ಸಮನ್ವಯತೆಯನ್ನು ಸಾಧಿಸಲು ಪ್ರಯತ್ನಿಸಿರುವುದನ್ನು ನಾನು ಕಾದಂಬರಿಗಳಲ್ಲಿ ಗುರುತಿಸುವ ಪ್ರಯತ್ನ ಮಾಡಿರುತ್ತೇನೆ.

೪) ಭಾರತ ಹಲವು ಸಂಸ್ಕೃತಿಗಳನ್ನು ತನ್ನೊಳಗೆ ಮೈಗೂಡಿಸಿಕೊಂಡಿದೆ. ವೈದಿಕಶಾಹಿ ಮತ್ತು ವಸಾಹತುಶಾಹಿ ಧೋರಣೆಯ ಅಧ್ಯಯನ ಕ್ರಮಗಳು ಬಹುಸಂಸ್ಕೃತಿಗೆ ಅಷ್ಟೊಂದು ಮಾನ್ಯತೆ ನೀಡಿರಲಿಲ್ಲ. ತಮ್ಮ ನಿಲುವುಗಳಿಗನುಗುಣವಾದ ಏಕಾಕೃತಿಯ ಮಾದರಿಯ ಚರಿತ್ರೆಯನ್ನು ನಿರ್ಮಿಸಲು ಪ್ರಯತ್ನಿಸಿದ್ದವು. ಅದಕ್ಕೆ ಬಹುಸಂಸ್ಕೃತಿಗಳ ಶಕ್ತಿ ಸಾಧ್ಯತೆಗಳನ್ನು, ವೈವಿಧ್ಯ ವಿಶಿಷ್ಟತೆಯನ್ನು ಕಾದಂಬರಿಗಳಲ್ಲಿ ಅಡಕಗೊಂಡಿರುವ ವಿವಿಧ ಸಮುದಾಯಗಳ ಬದುಕುಗಳನ್ನು ಸಾಂಸ್ಕೃತಿಕ ಹಿನ್ನೆಲೆಯನ್ನು ಗುರುತಿಸುವ ಪ್ರಯತ್ನ ಮಾಡಿರುವೆ.

೫) ಭಾರತೀಯ ಸಮಾಜ ನಿತ್ಯ ನಿರಂತರ ಬದಲಾವಣೆಗೆ ಒಳಗಾಗುತ್ತಾ ಬಂದಿದೆ. ಬಹುಸಂಖ್ಯಾತ ಸಮುದಾಯಗಳ ಮೇಲೆ ವೈದಿಕ ವಿಚಾರಧಾರೆಯು ಹಿಡಿತ ಸಾಧಿಸಿದ್ದರಿಂದ, ಬಹುಸಂಖ್ಯಾತರ ಬದುಕು ಕಾಲದಿಂದ ಕಾಲಕ್ಕೆ ಪಲ್ಲಟಕ್ಕೆ ಒಳಗಾಗಿದೆ. ಜಾತಿ, ಧರ್ಮ, ವರ್ಗ, ಪ್ರಭುತ್ವ, ಜಮೀನ್ದಾರಿಕೆ, ಲಿಂಗತಾರತಮ್ಯವನ್ನು ಪೋ ೇಷಿಸುವ ವೈದಿಕತೆ ಮತ್ತು ಬಂಡವಾಳಶಾಹಿ ವಿರುದ್ಧ ಸಾಮಾನ್ಯರಲ್ಲಿ ಸಂಘರ್ಷದ ತುಡಿತಗಳಿವೆ. ಅದಕ್ಕೆ ಅವೈದಿಕ ವೈಚಾರಿಕತೆ, ಗಾಂಧೀಜಿ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್ ಮತ್ತು ಸ್ತ್ರೀವಾದದ ವಿಚಾರಗಳು ಪ್ರೇರಣೆ ನೀಡಿವೆ. ಪ್ರಸ್ತುತ ಸಮಸ್ಯೆಗಳೊಂದಿಗೆ ಸಂಸ್ಕೃತಿಯ ಮರು ನಿರ್ವಚನವನ್ನು ಗುರುತಿಸಲು ಪ್ರಯತ್ನಿಸಿರುವೆ.

೬) ಸಂಸ್ಕೃತಿಯ ಪುನರ್ರಚನೆಗೆ ಕಾರಣವಾದ ವೈದಿಕ ಸಂಪ್ರದಾಯ, ಅಸ್ಪೃಶ್ಯತೆ, ಶಿಕ್ಷಣ, ಆಧುನಿಕತೆ, ರಾಷ್ಟ್ರೀಯತೆ, ಬಂಡವಾಳಶಾಹಿ, ಜಾಗತೀಕರಣ, ಲಿಂಗತಾರತಮ್ಯದಂತಹ ಸಮಸ್ಯೆಗಳನ್ನು ಕಾದಂಬರಿಗಳ ಮುಖೇನ ವಿಶ್ಲೇಷಿಸಲಾಗಿದೆ.

೭) ಪ್ರತಿಯೊಂದು ಸಮುದಾಯಕ್ಕೂ ತನ್ನದೇ ಆದ ಅಸ್ತಿತ್ವ ಪ್ರಶ್ನೆ ಬಂದಾಗ ಅತ್ಯಂತ ಪ್ರಬಲವಾದ ಸಮುದಾಯದ ವಿರುದ್ಧ ತಿರುಗಿ ಬೀಳುವುದನ್ನು ನಾವು ಯುಗ ನಿಯಮವಾಗಿ ಗುರುತಿಸಬಹುದು.

ಹಾಗಾಗಿ ಪರಂಪರೆಯಿಂದ ಬಂದ ಸಂಪ್ರದಾಯವನ್ನು ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡ ಲೇಖಕರು ನಿಧಾನವಾಗಿ ಅವನ್ನು ಕೂಲಂಕುಷವಾಗಿ ಪರಿಶೀಲಿಸಿ ಬದಲಾವಣೆಗೆ ಯತ್ನಿಸಿರುವುದನ್ನು ಕಾದಂಬರಿಗಳಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಬದಲಾಗಬೇಕಾದ ಸನ್ನಿವೇಶವನ್ನು ನಿರ್ಮಾಣ ಮಾಡುವ ಮೂಲಕ ಸಾಂಪ್ರದಾಯಿಕ ವ್ಯವಸ್ಥೆ ಒಪ್ಪಿಕೊಂಡು ಬಂದಿರುವ ನಂಬಿಕೆಗಳನ್ನು ಮರು ಪ್ರಶ್ನಿಸುವ ಕೆಲಸಕ್ಕೆ ಕೈ ಹಾಕುವುದನ್ನು ಕಾದಂಬರಿಗಳು ಚಿತ್ರಿಸುವ ಪ್ರಯತ್ನ ಮಾಡಿವೆ. ಈ ಮೂಲಕ ಸಮಾಜದ ಬದಲಾವಣೆಯ ಅವಶ್ಯಕತೆಯನ್ನು ಗುರುತಿಸಲಾಗಿದೆ.

೮) ಈ ಮಹಾಪ್ರಬಂಧದಲ್ಲಿ ಮುಖ್ಯವಾಗಿ ಚರ್ಚಿಸಿದ ದಲಿತ ಕಾದಂಬರಿಗಳು ಅವುಗಳ ಭಾಷೆ, ಜಾತಿ ವ್ಯವಸ್ಥೆ, ಆಹಾರ ಪದ್ಧತಿ, ಶಿಕ್ಷಣ, ಲಿಂಗದ ಪ್ರಶ್ನೆಯ ಮೂಲಕ ತನ್ನದೇ ಆದ ಅನನ್ಯತೆಯನ್ನು ಗುರುತಿಸುವ ಪ್ರಯತ್ನ ಮಾಡಿರುವುದನ್ನು ಗುರುತಿಸಲಾಗಿದೆ. ಇವನ್ನು ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್, ಗಾಂಧಿ ವಿಚಾರಗಳ ಮೂಲಕ ಚರ್ಚಿಸಲಾಗಿದೆ. ಉತ್ತರಗಳನ್ನು ಕಂಡುಕೊಳ್ಳಲಾಗಿದೆ. ಮನುಷ್ಯ ಬದಲಾಗುತ್ತಿರುವ ಸಂಸ್ಕೃತಿಯನ್ನು ಅವನೇ ಸೃಷ್ಟಿಸಿದ ಸಾಹಿತ್ಯದಲ್ಲಿ ದಾಖಲಿಸಿದ್ದಾನೆ. ಸಾಹಿತ್ಯ ಕೃತಿಗಳಲ್ಲಿ ಬದಲಾವಣೆಯನ್ನು ಸಂಪೂರ್ಣವಾಗಿ ಪ್ರತಿಬಿಂಬಿಸಿದ್ದಾನೆಂದು ಹೇಳಲಾಗದಿದ್ದರೂ, ಪ್ರಮುಖಾಂಶಗಳನ್ನು ಹಿಡಿದಿಟ್ಟಿದ್ದಾನೆ ಎಂದು ಹೇಳಬಹುದು. ಆದರೆ ಸಮಾಜದಲ್ಲಿ ಅಸ್ಪೃಶ್ಯರೆನಿಸಿಕೊಂಡ ದಲಿತನನ್ನು ಸಾಹಿತ್ಯದ ಸಂದರ್ಭದಲ್ಲಿ ಮತ್ತು ಸಂಸ್ಕೃತಿ ದಾಖಲೀಕರಣ ಸಂದರ್ಭದಲ್ಲಿ ಅಸ್ಪೃಶ್ಯರಾಗಿಯೇ ದೂರ ಉಳಿಸಲಾಗಿದೆ.

೯) ಕೆಳ ಸಮುದಾಯಗಳು ಬ್ರಿಟಿಷ್ ಶಿಕ್ಷಣ, ವೈಚಾರಿಕತೆ, ಸುಧಾರಣೆಗಳಿಂದ ಅರಿವನ್ನು ಪಡೆದುಕೊಂಡರೂ ಅವರ ಸ್ಥಿತಿಗತಿಯಲ್ಲಿ ದೊಡ್ಡ ಬದಲಾವಣೆಯನ್ನು ಗುರುತಿಸುವಂತಿಲ್ಲ. ಸರ್ಕಾರಿ ಸವಲತ್ತುಗಳಿಂದ ಸ್ವಲ್ಪ ಸುಧಾರಿಸಿದರೂ, ಕೆಳವರ್ಗ ಮೇಲ್ವರ್ಗವನ್ನು ಅನುಸರಿಸುವ, ಶೋಷಕರೊಂದಿಗೆ ಕೈಜೋಡಿಸುವ ಮನೋಭಾವವನ್ನು ಹೊಂದಿದಂತೆ ಕಾಣುತ್ತದೆ. ಈ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದು ಪ್ರಮುಖವಾಗಿದೆ.

೧೦) ಈ ಮಹಾ ಪ್ರಬಂಧದಲ್ಲಿ ಮುಖ್ಯವಾಗಿ ಚರ್ಚಿಸಿದ ದಲಿತ, ಬಂಡಾಯ, ಮಹಿಳಾ ಮತ್ತು ಮುಸ್ಲಿಂ ಕಾದಂಬರಿಗಳು ವಸಾಹತುಶಾಹಿ ಆಳ್ವಿಕೆಯ ನಂತರ ಭಾರತೀಯ ಸಮಾಜದಲ್ಲುಂಟಾದ ಸ್ಥಿತ್ಯಂತರಗಳಿಗೆ ಪ್ರತಿಕ್ರಿಯಿಸಿದೆ. ಈ ಪ್ರತಿಕ್ರಿಯೆಯ ಹಿಂದಿರುವ ಸಾಂಸ್ಕೃತಿಕ ಸಂರಚನೆಗಳನ್ನು ಪ್ರಸ್ತುತ ಸವಾಲುಗಳೊಂದಿಗೆ ಚಿಂತಿಸಲಾಗಿದೆ.

೧೧) ವಿಶ್ವವನ್ನೇ ಒಂದು ಹಳ್ಳಿಯಾಗಿ ಪರಿವರ್ತಿಸಿ, ಹಳ್ಳಿಯ ಯಜಮಾನಿಕೆಯನ್ನು ಸಾಮ್ರಾಜ್ಯಶಾಹಿ ಪಡೆಯುವ ಹುನ್ನಾರದಲ್ಲಿದೆ. ಪಶ್ಚಿಮ ಮಾತ್ರ ಶ್ರೇಷ್ಠವೆಂದು ತನ್ನದಾಗಿಸಿಕೊಂಡ ಮಾಧ್ಯಮಗಳ ಮೂಲಕ ಜನರ ಮೆದುಳನ್ನು ಪಶ್ಚಿಮೀಕರಿಸಲಾಗುತ್ತಿದೆ. ನಮ್ಮ ದಿನ ನಿತ್ಯದ ಜೀವನದಲ್ಲಿ ಈ ಪಾಶ್ಚಾತೀಕರಣ ವನ್ನು ನೋಡುತ್ತಿದ್ದೇವೆ. ಇದು ನಮ್ಮನ್ನೇ ಮರೆಯುವ ಅತ್ಯಂತ ಅಪಾಯದ ಮನೋಭಾವವಾಗಿದೆ. ಅಂತಹ ಮನೋಭಾವವನ್ನೇ ಸಾಮ್ರಾಜ್ಯಶಾಹಿ ಸೃಷ್ಟಿಸುತ್ತಿದೆ. ಬಡ ದೇಶಗಳ ಹುಳುಕುಗಳನ್ನು ಭೂತಗನ್ನಡಿಯಲ್ಲಿ ಹಿಡಿದು ತೋರಿಸುತ್ತಿದೆ. ಹೀಗಾಗಿ ಜಾತೀಯತೆ, ಮತೀಯತೆಗಳು ಕೇವಲ ಸಾಮಾಜಿಕ, ಧಾರ್ಮಿಕ ಸಮಸ್ಯೆಯಾಗದೆ ಆರ್ಥಿಕ, ರಾಜಕೀಯ ಸಮಸ್ಯೆಯಾಗಿವೆ. ಈ ಸಂಗತಿಗಳು ಪರಂಪರೆಯ ಮೇಲೆ ಪರಿಣಾಮ ಬೀರುತ್ತವೆ. ಈ ಎಲ್ಲಾ ಅಂಶಗಳ ಜೊತೆಗೆ ಮನುಷ್ಯ ಮುಖಾಮುಖಿಯಾಗಬೇಕಾಗುತ್ತದೆ. ತಮ್ಮತನವನ್ನು ಅರ್ಥಮಾಡಿಕೊಂಡು ಅಪಾಯಗಳನ್ನು ಎದುರಿಸುವ ಎದೆಗಾರಿಕೆಯನ್ನು ಹುಡುಕಬೇಕಿದೆ. ಬಹುಸಂಸ್ಕೃತಿಗಳ ಸತ್ವವಾದ ದುಡಿಮೆಯಲ್ಲಿ ಮಹಿಳೆಯರನ್ನು ಒಳಗೊಂಡು ಪ್ರಜಾಪ್ರಭುತ್ವ ಮೌಲ್ಯ ದ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲು ಕಾಲ ಕಾಲಕ್ಕೆ ಬಂದ ಕಾದಂಬರಿಗಳಲ್ಲಿ ಹೆಣಗಿದ ಸಂಗತಿಗಳನ್ನು ಗುರುತಿಸಿರುವೆ.

೧೨) ಸಾಂಸ್ಕೃತಿಕವಾಗಿ ಅಧ್ಯಯನ ಮಾಡಲು ಹೊರಟಾಗ ನಮ್ಮ ಕಥನಗಳೆಲ್ಲ ಹೊಸ ಶಬ್ದಗಳನ್ನು ಬಿಟ್ಟು ಕೊಡುತ್ತವೆ. ಅಲ್ಲಿನ ವಿವರಗಳು ಕೇವಲ ಸಾಹಿತ್ಯಿಕ, ಕಲಾತ್ಮಕವಷ್ಟೇ ಆಗಿರದೆ ನಮ್ಮ ಸಂಸ್ಕೃತಿಯ ಅನೇಕ ಒಳಲಯಗಳನ್ನು, ಮುಚ್ಚಿಟ್ಟ ಸತ್ಯಗಳನ್ನು ತೆರೆದು ತೋರುತ್ತವೆ. ಸಂಸ್ಕೃತಿಯ ಚಲನಾ ವಿಧಾನವನ್ನು ಅರಿಯುವಲ್ಲಿ ಹೀಗೆ ಸಾಹಿತ್ಯದ ಅಧ್ಯಯನ ನೆರವಾಗುತ್ತದೆ. ಈ ನೆಲೆಯಿಂದ ನಮ್ಮ ಸಾಹಿತ್ಯ ಕೃತಿಗಳನ್ನು ಹೊಸ ಓದಿನ ಮೂಲಕ ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ.

ಒಟ್ಟಿನಲ್ಲಿ ದಲಿತ ಬಂಡಾಯ ಕಾಲಘಟ್ಟದ ಸಾಂಸ್ಕೃತಿಕ ಬೇರುಗಳು ಶಿಥಿಲಗೊಳ್ಳುತ್ತಿರುವ ಆಧುನಿಕ ಕಾಲಘಟ್ಟದಲ್ಲಿ ಶೋಧನೆ ಮತ್ತು ಚರ್ಚೆಗೊಳಗಾಗುತ್ತಿರುವ ಸಾಂಸ್ಕೃತಿಕ ಅನನ್ಯತೆಯ ಪ್ರಶ್ನೆಯನ್ನು ಕನ್ನಡದ ಕಾದಂಬರಿಕಾರರು ಮುಖ್ಯ ಪ್ರಶ್ನೆಯಾಗಿ ಸ್ವೀಕರಿಸಿದರೆ ಬಹುಮುಖಿ ಸಂಸ್ಕತಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘರ್ಷಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಚಿತ್ರಿಸಲು ಸಾಧ್ಯವಿದೆ. ಈ ಅಧ್ಯಯನವು ಹೊಸ ಚಿಂತನೆಗಳ ಹಿನ್ನೆಲೆಯಲ್ಲಿ ನಡೆಸಿದ ಒಂದು ಪ್ರಯತ್ನ ಮಾತ್ರವಾಗಿದೆ. "ಕನ್ನಡ ಕಾದಂಬರಿಗಳಲ್ಲಿ ಸಂಸ್ಕೃತಿ ಸಂರಚನೆಯ ಸ್ವರೂಪ(೧೯೭೦ರ ನಂತರದ ಪ್ರಮುಖ ಕಾದಂಬರಿಗಳನ್ನು ಅನುಲಕ್ಷಿಸಿ) ಈ ಪರಿಕಲ್ಪನೆಗಳು ಈ ಅಧ್ಯಯನದಲ್ಲಿ ಬಂದ ಚಿಂತನೆಗಳಿಂದ ಭಿನ್ನವಾಗಿಯೂ, ಇನ್ನೂ ಅನೇಕ ಸಾಧ್ಯತೆಗಳಿಗೆ ತೆರೆದುಕೆಣಟಿಜಜಜಿಟಿಜಜಳ್ಳಬಹುದು. ಪ್ರಸ್ತುತ ಅಧ್ಯಯನದ ಫಲಿತಾಂಶಗಳ ಹಿನ್ನೆಲೆಯಲ್ಲಿ ದಲಿತ, ಬಂಡಾಯ, ಮುಸ್ಲಿಂ ಮತ್ತು ಮಹಿಳಾ ಕಾದಂಬರಿಗಳಲ್ಲಿ ತೆರೆದುಕೊಳ್ಳಬಹುದಾದ ಹೊಸ ಆಯಾಮಗಳು ಮತ್ತು ಸಾಧ್ಯತೆಗಳ ಕುರಿತಂತೆ ನಾವು ನಿರೀಕ್ಷೆಯನ್ನು ಇಟ್ಟುಕೊಳ್ಳಬಹುದು.

ಅಧ್ಯಯನಕ್ಕೆ ಆಯ್ದುಕೊಂಡ ಕಾದಂಬರಿಗಳು:

೧) ಅರವಿಂದ ಮಾಲಗತ್ತಿ,೧೯೮೮, ಕಾರ್ಯ, ಶೈಲ ಪ್ರಕಾಶನ,ಮುದ್ದೇಬಿಹಾಳ.

೨) ಗೀತಾ ನಾಗಭೂಷಣ,೨೦೦೧,ಬದುಕು,ಲೋಹಿಯಾ ಪ್ರಕಾಶನ ಬಳ್ಳಾರಿ.

೩) ಚೆನ್ನಣ್ಣವಾಲೀಕಾರ೧೯೮, ಹುಲಿಗೆಮ್ಮ, ಪ್ರಜ್ಞಾ ಪ್ರಕಾಶನ,ಗುಲ್ಬರ್ಗಾ.

೪) ಜವರಯ್ಯ ಮ.ನ,೧೯೮೭,ಮಾಗಿ,ಸಂಕ್ರಮಣ ಪ್ರಕಾಶನ,ಧಾರವಾಡ.

೫) ದೇವನೂರು ಮಹಾದೇವ,೧೯೭೯, ಒಡಲಾಳ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.

೬) ದೇವನೂರು ಮಹಾದೇವ,೧೯೮೮, ಕುಸುಮಬಾಲೆ, ಸಂಗಾತಿ ಸಹಕಾರಿ ಪ್ರಕಾಶನ, ಬೆಂಗಳೂರು.

೭) ಫಕೀರ್ ಮಹಮ್ಮದ್ ಕಟ್ಪಾಡಿ, ೧೯೮೯,ಸರಕುಗಳು ನವಕರ್ನಾಟಕ ಪಬ್ಲಿಕೇಶನ್ಸ್ ,ಪ್ರೈ.ಲಿ,ಬೆಂಗಳೂರು.

೮) ಬರಗೂರು ರಾಮಚಂದ್ರಪ್ಪ,೧೯೭೭, ಒಂದು ಊರಿನ ಕಥೆ, ಮಯೂರ ಪ್ರಕಾಶನ, ಬೆಂಗಳೂರು.

೯)ಬರಗೂರು ರಾಮಚಂದ್ರಪ್ಪ೧೯೯೦, ಸೂರ್ಯ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦) ಬೊಳುವಾರು ಮೊಹಮ್ಮದ್ ಕುಂಞ, ೧೯೮೭, ಜೆಹಾದ್, ನವಕರ್ನಾಟಕ ಪಬ್ಲಿಕೇಷನ್ಸ್ ,ಬೆಂಗಳೂರು.

೧೧) ಮುಳ್ಳೂರು ನಾಗರಾಜ,೧೯೮೬, ಮರಣ ಮಂಡಲ ಮಧ್ಯದೊಳಗೆ, ಹೊಸದಿಕ್ಕು ಪ್ರಕಾಶನ, ಬೆಂಗಳೂರು.

೧೨) ಮೊಗಳ್ಳಿ ಗಣೇಶ್,೨೦೦೪,ತೊಟ್ಟಿಲು, ಅಂಕಿತ ಪುಸ್ತಕ ಪ್ರಕಾಶನ,ಬೆಂಗಳೂರು.

೧೩) ಮೊಗಳ್ಳಿಗಣೇಶ್,೨೦೦೬,ಕಿರೀಟ,ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.

೧೪) ಲಲಿತಾನಾಯಕ್ ಬಿ.ಟಿ,೧೯೮೬, ಗತಿ,ಪತ್ರಿಕೆ ಪ್ರಕಾಶನ, ಬೆಂಗಳೂರು.

೧೫) ಲಲಿತಾನಾಯಕ್ ಬಿ.ಟಿ,೧೯೯೫,ನೆಲೆ ಬೆಲೆ,ಆಶಾ ಸಾಹಿತ್ಯ ಪ್ರಕಾಶನ,ಬೆಂಗಳೂರು.

೧೬) ವೇದಾ ಎಂ.ಎಸ್,೨೦೦೭,ಕಪ್ಪು ಕಿವಿಯ ಬಿಳಿಯ ಕುದುರೆಗಳು,ಅಂಕಿತ ಪ್ರಕಾಶನ ಬೆಂಗಳೂರು.

೧೭) ವೀರಪ್ಪ ಮೊಯಿಲಿ,೧೯೯೯, ತೆಂಬರೆ, ಮಹೇಶ್ವರಿ ಪ್ರಕಾಶನ, ಬೆಂಗಳೂರು.

೧೮) ವೀರಭದ್ರಪ್ಪ.ಕುಂ.,೧೯೮೬,ಕೆಂಡದ ಮಳೆ,ಭಾಗ್ಯಲಕ್ಷ್ಮೀ ಪ್ರಕಾಶನ,ಬೆಂಗಳೂರು.

೧೯) ವೀರಭದ್ರಪ್ಪ. ಕುಂ,೧೯೯೩,ಕೊಟ್ರ ಹೈಸ್ಕೂಲಿಗೆ ಸೇರಿದ್ದು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.

೨೦) ವೈದೇಹಿ,೨೦೧೦, ಅಸ್ಪೃಶ್ಯರು,ಅಕ್ಷರ ಪ್ರಕಾಶನ, ಹೆಗ್ಗೋಡು.

೨೧) ಶಿವರುದ್ರ ಕಲ್ಲೋಳಿಕರರ,೧೯೯೪,ಹೊಲಗೇರಿಯ ರಾಜಕುಮಾರ, ಅನಾರ್ಯ ಪ್ರಕಾಶನ, ಧಾರವಾಡ.

೨೨) ಸಾರಾ ಅಬೂಬಕ್ಕರ್ ,೧೯೮೪,ಚಂದ್ರಗಿರಿ ತೀರದಲ್ಲಿ, ಪತ್ರಿಕೆ ಪ್ರಕಾಶನ, ಬೆಂಗಳೂರು.

೨೩) ಸಾರಾ ಅಬೂಬಕ್ಕರ್,೧೯೮೫, ಸಹನಾ, ಪತ್ರಿಕೆ ಪ್ರಕಾಶನ,ಬೆಂಗಳೂರು.

೨೪) ಸಾರಾ ಅಬೂಬಕ್ಕರ್,೧೯೮೮, ವಜ್ರಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೫) ಹೊರೆಯಾಲ ದೊರೆಸ್ವಾಮಿ,೧೯೮೬,ಹುಡುಕಾಡಿ ಬಂದ ಹೊನ್ನಿನ ಬದುಕು, ಸಮಾನ ಪ್ರಕಾಶನ, ಮೈಸೂರು.

೨೬) ನಾಗವೇಣಿ.ಎಚ್, ೧೯೯೯, ಗಾಂಧಿಬಂದ, ಲೋಹಿಯಾ ಪ್ರಕಾಶನ, ಬಳ್ಳಾರಿ.

ಅನುಬಂಧ

ಪರಾಮರ್ಶನ ಗ್ರಂಥಗಳು:

•ಅನಂತಮೂರ್ತಿ ಯು.ಆರ್, ೧೯೯೦, ಪೂರ್ವಾಪರ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.

•ಅನಂತಮೂರ್ತಿ ಯು.ಆರ್, ೧೯೯೨, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಶಿವಮೊಗ್ಗ.

•ಅನಂತಮೂರ್ತಿ ಯು.ಆರ್, ೧೯೯೨, ಸಮಕ್ಷಮ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಶಿವಮೊಗ್ಗ.

•ಅನಂತಮೂರ್ತಿ ಯು.ಆರ್, ೧೯೯೬, ಬೆತ್ತಲೆ ಸೇವೆ ಯಾಕೆ ಕೂಡದು?, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಶಿವಮೊಗ್ಗ.

•ಅನಂತಮೂರ್ತಿ ಯು.ಆರ್, ೧೯೯೬, ಸಂಸ್ಕೃತಿ ಮತ್ತು ಅಡಿಗ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.

•ಅಮರೇಶ ನುಗಡೋಣಿ (ಸಂ), ೨೦೦೮, ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

•ಅಮೂರ ಜಿ.ಎಸ್, ೧೯೮೩, ಕನ್ನಡ ಕಾದಂಬರಿಯ ಬೆಳವಣಿಗೆ, ಬೆಂಗಳೂರು ವಿ.ವಿ. ಬೆಂಗಳೂರು.

•ಅಮೂರ ಜಿ.ಎಸ್, ೧೯೮೬, ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. –೧೪.

•ಅರವಿಂದ ಮಾಲಗತ್ತಿ (ಡಾ), ೧೯೯೧, ನಾಲ್ಕು ದಲಿತೀಯ ಕಾದಂಬರಿಗಳು, ಕನ್ನಡ ಸಂಘ ಕ್ರೈಸ್ಟ್ ಕಾಲೇಜು ಬೆಂಗಳೂರು.

•ಅರವಿಂದ ಮಾಲಗತ್ತಿ (ಡಾ) (ಪ್ರ.ಸಂ), ೨೦೦೬, ಅರಿವಿನ ಕುರುಹು, ತಾರಾ ಪ್ರಿಂಟಿಂಗ್ ಮತ್ತು ಪಬ್ಲಿಕೇಷಿಂಗ್ ಹೌಸ್ ಮೈಸೂರು.

•ಅಶೋಕ ಟಿ.ಪಿ, ೨೦೦೪, ಕುವೆಂಪು ಕಾದಂಬರಿಗಳ ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ ಹೆಗ್ಗೋಡು (ಸಾಗರ) ಕರ್ನಾಟಕ.

•ಅಶೋಕ ಟಿ.ಪಿ, ೨೦೦೮, ಸಾಹಿತ್ಯ ಸಂಬಂಧ, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ಕರ್ನಾಟಕ.

•ಇಸ್ಮಾಯಿಲ್. ಎನ್ (ಡಾ), ೨೦೦೭, ಕನ್ನಡ ಸಾಹಿತ್ಯದಲ್ಲಿ ಪ್ರತಿ ಬಿಂಬಿತವಾದ ಇಸ್ಲಾಂ ಸಂಸ್ಕೃತಿ, ಶಮಾ ಪ್ರಕಾಶನ, ಮಂಗಳೂರು.

•ಉಪಾಧ್ಯ ಜಿ.ಎಸ್ (ಡಾ), ೨೦೦೫, ವಿಚಾರದ ಬೆಳಕು, ಅಭಿಜಿತ್ ಪ್ರಕಾಶನ, ಮುಂಬಯಿ.

•ಉಷಾ. ಎಂ (ಡಾ), ೨೦೦೧, ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

•ಕುರ್ತಕೋಟಿ ಕೀರ್ತಿನಾಥ, ೧೯೮೨, ವಿಮರ್ಶೆಯ ವಿನಯ ಕಾದಂಬರಿ, ಮನೋಹರ ಗ್ರಂಥಮಾಲ, ಧಾರವಾಡ.

•ಕೃಷ್ಣಪ್ಪ. ಕೆ (ಡಾ), ೨೦೦೨, ಹೊಸಕೋಟೆ ತಾಲೂಕು ಸಾಂಸ್ಕೃತಿಕ ಅಧ್ಯಯನ, ಜ್ಞಾನ ಭಾರತಿ ಬೆಂಗಳೂರು.

•ಕೃಷ್ಣಮೂರ್ತಿ. ಎಂ.ಜಿ, ೧೯೭೦, ಕೃತಿ ಸಂಸ್ಕೃತಿ, ಋತುವಾತು ಪ್ರಕಾಶನ, ಮೈಸೂರು.

•ಕೇಶವ ಶರ್ಮಾ.ಕೆ, ೧೯೯೮, ಶಬ್ಧರೇಖೆ, ಅಭಿನವ ಪ್ರಕಾಶನ, ಬೆಂಗಳೂರು, ೫೬೦೦೧೦.

•ಕೇಶವ ಶರ್ಮಾ.ಕೆ, ೨೦೦೪, ದಲಿತ ಬಂಡಾಯ ಕಾದಂಬರಿಗಳಲ್ಲಿ ಶ್ರಮ ಸಂಸ್ಕೃತಿಯ ಎಚ್ಚರ ಹಾಗೂ ಪರ್ಯಾಯಗಳ ಹುಡುಕಾಟ, ಕನ್ನಡ ವಿ.ವಿ. ಹಂಪಿ.

•ಕೇಶವ ಶರ್ಮಾ.ಕೆ, ೨೦೦೬, ಮಾರ್ಗ ಸಾಹಿತ್ಯ, ಅಭಿರುಚಿ ಪ್ರಕಾಶನ, ಸರಸ್ವತೀ ಪುರಂ ಮೈಸೂರು.

•ಗಾಯತ್ರಿ ದೇವಿ (ಡಾ), ೨೦೦೮, ಚೋಮನ ದುಡಿ ಮತ್ತು ಮಾದನಳ್ಳಿ ಕಾದಂಬರಿಗಳ ಸಮಾಜ ಸಾಂಸ್ಕೃತಿಕ ಅಧ್ಯಯನ, ಕುವೆಂಪು ವಿ.ವಿ., ಶಿವಮೊಗ್ಗ.

•ಗಿರಡ್ಡಿ ಗೋವಿಂದ ರಾಜು (ಪ್ರ.ಸಂ), ತಾರಾನಾಥ ಎನ್.ಎಸ್ (ಸಂ), ೨೦೦೧, ಶತಮಾನದ ಸಂಶೋಧನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

•ಗುಂಡಪ್ಪ ಡಿ.ವಿ., ೧೯೮೫, ಸಂಸ್ಕೃತಿ, ಕಾವ್ಯಾಲಯ ಪ್ರಕಾಶಕರು ಮೈಸೂರು–೧೪.

•ಗುರುಪಾದ ಗದ್ದಗಿ ಮಠ (ಡಾ), ೧೯೮೯, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಜಯಲಕ್ಷ್ಮೀ ಪುರಂ, ಮೈಸೂರು.

•ಚಂದ್ರ ಪೂಜಾರಿ ಎಂ (ಡಾ), ೨೦೦೧, ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

•ತಪಸ್ವೀ ಕುಮಾರ್ ನಂ, ೧೯೯೫, ಸಂಸ್ಕೃತಿ ವಿಕಾಸ, ಭಾರತೀ ಪ್ರಕಾಶನ, ಮೈಸೂರು.

•ತರೀಕೆರೆ ರಹಮತ್, ೧೯೯೩, ಪ್ರತಿ ಸಂಸ್ಕೃತಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.

•ತರೀಕೆರೆ ರಹಮತ್, ೨೦೦೪, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

•ತರೀಕೆರೆ ರಹಮತ್, ೨೦೦೭, ಕನ್ನಡ ಸಂಶೋಧನೆಯ ತಾತ್ವಿಕ ವಿಚಾರಗಳು; ಪ್ರಸಾರಾಂಗ ಕನ್ನಡ ವಿ.ವಿ.

•ತಾಳ್ತಜೆ ವಸಂತ ಕುಮಾರ್, ೧೯೯೮, ಸಂಶೋಧನಾ ರಂಗ, ಕನ್ನಡ ವಿಭಾಗ, ಮುಂಬಯಿ ವಿ.ವಿ.

•ತಿಪ್ಪೇರುದ್ರ ಸ್ವಾಮಿ, ೧೯೯೮, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಮೈಸೂರು.

•ದಳವಾಯಿ.ಕೆ.ಟಿ, ೨೦೦೬, ಕಥೆ–ಕಾದಂಬರಿಗಳಲ್ಲಿ ಮುಸ್ಲಿಂ ಮಹಿಳಾ ಸಂವೇದನೆ, ಕರ್ನಾಟಕ, ವಿ.ವಿ. ಧಾರವಾಡ.

•ದೇವುಡು; ೨೦೦೮, ಕರ್ನಾಟಕ ಸಂಸ್ಕೃತಿ, ದೇವುಡು ಪ್ರತಿಷ್ಠಾನ.

•ನರಹಳ್ಳಿ ಬಾಲಸುಬ್ರಹ್ಮಣ್ಯ (ಸಂ), ೧೯೯೮, ಸಾಹಿತ್ಯ ಸಂಸ್ಕೃತಿ, ಅಂಕಿತ ಪುಸ್ತಕ ಪ್ರಕಾಶನ, ಬಸವನ ಗುಡಿ ಬೆಂಗಳೂರು.

•ನಾಗಣ್ಣ ಸಿ. (ಅನು), ೨೦೦೦, ದಕ್ಷಿಣ ಭಾರತ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

•ನಾಗಪ್ಪ ಗೌಡ, ೨೦೦೨, ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟದ ಸ್ವರೂಪಗಳು, ಕನ್ನಡ ಭಾರತಿ, ಕುವೆಂಪು ವಿ.ವಿ., ಜ್ಞಾನ ಸಹ್ಯಾದ್ರಿ ಶಂಕರಘಟ್ಟ.

•ನಾಗಭೂಷಣ ಡಿ. ಎಸ್., ೨೦೦೫, ಅನೇಕ, ಲೋಹಿಯಾ ಪ್ರಕಾಶನ, ಬಳ್ಳಾರಿ.

•ನಾಗರಾಜ ಡಿ.ಆರ್, ೧೯೯೦, ಅಮೃತ ಮತ್ತು ಗರುಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.

•ನಾಗರಾಜ ಡಿ.ಆರ್, ೧೯೯೩, ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ ಶಿವಮೊಗ್ಗ.

•ನಾಗರಾಜ ಡಿ.ಆರ್, ೧೯೯೫, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ ಶಿವಮೊಗ್ಗ.

•ನಾರಾಯಣ ಕೆ.ವಿ, ೧೯೯೭, ಬೇರುಕಾಂಡ ಚಿಗುರು, ವಿವೇಕ ಪ್ರಕಾಶನ, ವಿಚಾರ ವೇದಿಕೆ ಕರ್ನಾಟಕ, ಇಸ್ರೋ ಲೇಜೌಟ್ ಬೆಂಗಳೂರು.

•ನಿತ್ಯಾನಂದ ಬಿ.ಶೆಟ್ಟಿ, ೨೦೦೬, ಕನ್ನಡ ಸಂಸ್ಕೃತಿ ವಾಙ್ಮಯ, ಕನ್ನಡ ಸ್ನಾತಕೋತ್ತರ ಅಧ್ಯಯನ, ಮಂಗಳೂರು ವಿ.ವಿ., ಮಂಗಳಗಂಗೋತ್ರಿ.

•ನಿಂಗಣ್ಣ. ಚಿ.ಸಿ (ಡಾ), (ಸಂ), ೨೦೧೦, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾವರಿ ಗುಲ್ಬರ್ಗಾ.

•ಪವಾರ ಬಿ.ಎನ್ (ಡಾ), ೧೯೯೪, ಕನ್ನಡ ಕಾದಂಬರಿಗಳಲ್ಲಿ ದಲಿತ ಪ್ರಜ್ಞೆ, ಕರ್ನಾಟಕ ವಿ.ವಿ. ಧಾರವಾಡ.

•ಪಾಟೀಲ ಟಿ.ಎಸ್ (ಡಾ), ೧೯೯೨, ಕನ್ನಡ ಕಾದಂಬರಿಗಳಲ್ಲಿ ವರ್ಗ ಸಂಘರ್ಷ, ಕರ್ನಾಟಕ ವಿ.ವಿ. ಧಾರವಾಡ.

•ಪುಟ್ಟಯ್ಯ ಬಿ.ಎಂ, ೨೦೦೮, ಮುಖಾಮುಖಿ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

•ಪೂರ್ಣಚಂದ್ರ ತೇಜಸ್ವಿ ಕೆ.ಪಿ, ೨೦೧೦, ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಸರಸ್ವತಿ ಪುರಂ ಮೈಸೂರು.

•ಪುರುಷೋತ್ತಮ ಬಿಳಿಮಲೆ, ೧೯೮೯, ದಲಿತ ಜಗತ್ತು, ಹೊಸದಿಕ್ಕು ಪ್ರಕಾಶನ, ಬೆಂಗಳೂರು.

•ಪುರುಷೋತ್ತಮ ಬಿಳಿಮಲೆ, ೧೯೯೦, ಬಂಡಾಯ ದಲಿತ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು.

•ಪ್ರಸಾದ ಸ್ವಾಮಿ. ಎನ್ (ಡಾ), ೨೦೧೦, ಪರಂಪರೆ ಮತ್ತು ವಿಕ್ಷಿಪ್ತತೆ, ಕಣ್ವ ಪ್ರಕಾಶನ, ಬೆಂಗಳೂರು.

•ಬರಗೂರು ರಾಮಚಂದ್ರಪ್ಪ, ೧೯೮೯, ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೦೨.

•ಬರಗೂರು ರಾಮಚಂದ್ರಪ್ಪ, ೧೯೯೩, ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ, ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

•ಬರಗೂರು ರಾಮಚಂದ್ರಪ್ಪ, ೧೯೯೪, ಸಂಸ್ಕೃತಿ ಮತ್ತು ಉಪಸಂಸ್ಕೃತಿ, ಭೂಮಿ ಬಳಗ ಮೈಸೂರು.

•ಭೂಮಿಗೌಡ (ಡಾ), ೧೯೯೯, ನವ್ಯೋತ್ತರ ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು, ಮಂಗಳೂರು ವಿ.ವಿ.

•ಭಂಡಾರಿ ಆರ್. ವ್ಹಿ, ೨೦೦೩, ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ, ಶ್ರೀ ರಾಘವೇಂದ್ರ ಪ್ರಕಾಶನ, ಅಂಬಾರ ಕೋಡ್ಲ, ಅಂಕೋಲ.

•ಮರಿಗುದ್ದಿ ಗುರು ಪಾದ, ೧೯೮೯, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಜಯಲಕ್ಷ್ಮೀ ಪುರಂ, ಮೈಸೂರು.

•ಮಲ್ಲೇಪುರಂ ವೆಂಕಟೇಶ ಜಿ., ೧೯೯೮, ಶಂಬಾ ಸಂಸ್ಕೃತಿ ಚಿಂತನೆ, ಸ್ವಪ್ನ ಬುಕ್ ಹೌಸ್, ಗಾಂಧಿ ನಗರ, ಬೆಂಗಳೂರು.

•ಮುರಾರಿ ಬಲ್ಲಾಳ ನೀ (ಡಾ), ೧೯೯೯, ಅಕ್ಷರ ಪ್ರಕಾಶನ ಹೆಗ್ಗೋಡು, (ಸಾಗರ) ಕರ್ನಾಟಕ.

•ಮೇಟಿ ಮಲ್ಲಿಕಾರ್ಜುನ (ಸಂ), ೨೦೧೩, ಅರುಹು ಕುರುಹು, ಕನ್ನಡ ತ್ರೈಮಾಸಿಕ, ಜನವರಿ–ಮಾರ್ಚ್, ಸಂಚಿಕೆ ೧೬, ಅರುಹು ಕುರುಹು ಪತ್ರಿಕೆ, ಮೌನ, ನವಿಲು ರಸ್ತೆ, ಕುವೆಂಪು ನಗರ ಮೈಸೂರು.

•ಮೊಗಳ್ಳಿ ಗಣೇಶ್, ೧೯೯೯, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

•ಮೋಹನ್ ಕೃಷ್ಣ ರೈ (ಡಾ) (ಸಂ), ೨೦೦೮, ಚರಿತ್ರೆ ಅಧ್ಯಯನ, ಸಂಪುಟ ೨, ಸಂಚಿಕೆ ೨, ಜನವರಿ–ಜೂನ್, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

•ಯಲ್ಲಟ್ಟಿ ಸುರೇಶ ಕೆ., ೨೦೦೨, ದೇವನೂರ ಮಹಾದೇವರ ಕಾದಂಬರಿಗಳು – ಒಂದು ಅಧ್ಯಯನ, ಕರ್ನಾಟಕ ವಿ.ವಿ. ಧಾರವಾಡ.

•ರಾಘವೇಂದ್ರ ರಾವ್, ಪಿ.ಎಚ್. ಎಸ್. (ಡಾ), ೨೦೦೧, ಶತಮಾನದ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ ಬೆಂಗಳೂರು.

•ರಾಜಶೇಖರ ವಿರೂಪಾಕ್ಷ (ಡಾ), ೨೦೦೪, ಕಾದಂಬರಿಗಳಲ್ಲಿ ತಲೆಮಾರುಗಳ ಸಂಘರ್ಷ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿ.ವಿ, ಗುಲ್ಬರ್ಗಾ.

•ರಾಜಾರಾಂ ಹೆಗಡೆ (ಸಂ), ೨೦೦೪, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

•ವಿರೂಪಾಕ್ಷ ಪೂಜಾರ ಹಳ್ಳಿ (ಡಾ) (ಸಂ), ೨೦೦೫, ದಲಿತರು ಮತ್ತು ಚರಿತ್ರೆ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

•ವಿವೇಕ ರೈ. ಬಿ.ಎ. (ಸಂ), ೧೯೮೯, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಮಂಗಳೂರು ವಿ.ವಿ. ಮಂಗಳೂರು.

•ವಿವೇಕ ರೈ. ಬಿ.ಎ. (ಸಂ), ೨೦೧೩, ರೂಪಾಂತರ, ಅಂಕಿತ ಪುಸ್ತಕ ೫೩, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿ ಬಜಾರ್ ಮುಖ್ಯ ರಸ್ತೆ, ಬಸವನ ಗುಡಿ, ಬೆಂಗಳೂರು.

•ವೆಂಕಟೇಶ ಮೂರ್ತಿ ಎಚ್.ಎಸ್ (ಪ್ರ.ಸಂ.), ೨೦೧೧, ಡಾ. ಎಸ್. ಎಲ್. ಭೈರಪ್ಪನವರ ಕಾದಂಬರಿಗಳಲ್ಲಿ ಧರ್ಮ ಮತ್ತು ಸಂಸ್ಕೃತಿ, ಸುಂದರ ಸಾಹಿತ್ಯ ಕಲಾಮಂದಿರ, ೫ನೇ ತಿರುವು, ಹನುಮಂತ ನಗರ ಬೆಂಗಳೂರು.

•ಶಿವರಾಮ ಪಡಿಕ್ಕಲ್ (ಡಾ), ೧೯೮೭, ಕನ್ನಡ ಕಾದಂಬರಿಯ ಮೊದಲ ಘಟ್ಟ, ಮಂಗಳೂರು ವಿ.ವಿ.

•ಶಿವರುದ್ರಪ್ಪ ಜಿ.ಎಸ್. (ಸಂ.), ೧೯೯೦, ಕನ್ನಡದ ಕೆಲವು ಪ್ರಮುಖ ಕಾದಂಬರಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೪/೨ ನೃಪತುಂಗ ರಸ್ತೆ, ಬೆಂಗಳೂರು.

•ಶಿವರುದ್ರಪ್ಪ ಜಿ.ಎಸ್. (ಸಂ), ೧೯೮೦, ಕನ್ನಡದ ಕೆಲವು ಪ್ರಮುಖ ಕಾದಂಬರಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೪/೨ ನೃಪತುಂಗ ರಸ್ತೆ, ಬೆಂಗಳೂರು.

•ಶೇಖರ್ ಎಂ.ಎಸ್. (ಡಾ), ೨೦೦೬, ಮೊದಲ ತಲೆಮಾರಿನ ದಲಿತ ಸಾಹಿತಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಕನ್ನಡ ಭವನ ಜೆ.ಸಿ. ರಸ್ತೆ, ಬೆಂಗಳೂರು.

•ಶ್ರೀ ಕಂಠ ಕೂಡಿಗೆ (ಡಾ) (ಸಂ), ಶಿವಕುಮಾರ ಸಿ.ಎಚ್. (ಡಾ), ೨೦೧೦, ಆಧುನಿಕತೆ ಮತ್ತು ಕನ್ನಡ ಕಾದಂಬರಿ, ಪ್ರಸಾರಾಂಗ ಕುವೆಂಪು ವಿ.ವಿ. ಜ್ಞಾನ ಸಹ್ಯಾದ್ರಿ, ಶಂಕರ ಘಟ್ಟ.

•ಶ್ರೀಧರ ಮೂರ್ತಿ ಎನ್.ಎಸ್. (೨೦೦೫), ಬೆಳಕು–ಬೆರಗು, ನಂ.೯೮೪, ೧೧ನೇ ಎ. ಮುಖ್ಯರಸ್ತೆ, ೨ನೇ ವಿಭಾಗ, ರಾಜಾಜಿನಗರ ಬೆಂಗಳೂರು.

•ಶ್ರೀನಿವಾಸ ಮೂರ್ತಿ ಪಾ.ವೆಂ. (ಡಾ) (ಸಂ), ೨೦೦೬, ಬಂಡಾಯ ಕಾಲು ಶತಮಾನ, ಬಂಡಾಯ ಸಾಹಿತ್ಯ ಸಂಘಟನೆ ರಾಜ್ಯ ಸಮಿತಿ ಪರವಾಗಿ ಬೆಳ್ಳಿಚುಕ್ಕಿ, ಬುಕ್ಕ್ ಟ್ರಸ್ಟ್.

•ಸಬಿಹಾ ಭೂಮಿಗೌಡ (ಡಾ) (ಸಂ), ೧೯೯೧, ಕಾರ್ಯ ವಿಮರ್ಶಾಲೋಕ, ನ್ಯೂಸ್ಟಾರ್ ಪಬ್ಲಿಕೇಶನ್ಸ್ ೧೪, ಕಾರ್ಕಳ ಹೌಸ್, ಸಾರಕ್ಕಿ, ಜೆ.ಸಿ. ನಗರ, ಬೆಂಗಳೂರು.

•ಸಬಿಹಾ ಭೂಮಿಗೌಡ (ಡಾ) (ಸಂ), ೨೦೦೬, ನುಡಿಗವಳ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು.

•ಸರಸ್ವತಿ ಆರ್. ಕೆ. (ಪ್ರೊ), ೨೦೦೯, ವಿಮರ್ಶಾ ಲೇಖನ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ನಿಧಿ ಪ್ರಕಾಶನ, ಅಕ್ಷರ ವಿನೋಬಾ ನಗರ ಸಾಗರ.

•ಸುಜಾತ ಕೆ. (ಡಾ), ೨೦೦೮, ೨೦ನೇಯ ಶತಮಾನದ ಕೊನೆಯ ೨೫ ವರ್ಷಗಳ ಕಥಾ ಸಾಹಿತ್ಯದಲ್ಲಿ ಯಾಜಮಾನ್ಯ ಮತ್ತು ಅನನ್ಯತೆಯ ನೆಲೆಗಳು (ಅಪ್ರಕಟಿತ), ಮಂಗಳೂರು ವಿ.ವಿ, ಮಂಗಳಗಂಗೋತ್ರಿ.

•ಹೊನ್ನಯ್ಯ ಬಿ.ಸಿ. (ಡಾ) (ಸಂ), ೨೦೦೫, ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ, ಜೈಭೀಮ್ ಪ್ರಕಾಶನ ನಂ.೧೮೨, ೨ನೇ ಮುಖ್ಯರಸ್ತೆ, ೬೦ನೇ ಉದ್ದ ರಸ್ತೆ, ಕಾಲರಾಜೇಶ್ವರಿ ಬಡವಾಣೆ, ಜ್ಞಾನ ಭಾರತಿ, ಅಂಚೆ, ನಾಗದೇವನ ಹಳ್ಳಿ ಬೆಂಗಳೂರು.

ಇಂಗ್ಲೀಷ್:

• **Devy G.N., 1992, After Amnesia, tradition and change in literary criticism, Orient long man, Bombay.**

• **Edward Said, 1993, Culture and imperialism, Alfred A knof, New York, 1993.**

• **Nandy Ashish, 1983, Intimate Enemy Loss and Recovery of the self under colonialism, Oup, Delhi.**

• **Nandy Ashish, 1994, The illegitimacy of Nationalism, Oup, Delhi.**

• **Panikar K.N., 2001, Culture ideology, Hegemoney – intellectuals and social consciousness in colonial India, Tulika, New Delhi.**